ಶೂದ್ರ

ಸಮಕಾಲೀನ ಬದುಕಿನ ಸಂವಾದಕ್ಕೆ

ಮಾಸಿಕ



ಆಸರೆ (ಕಥೆ)

ಜಿ.ಪಿ.ಬಸವರಾಜ್

ನನ್ನ ಬಾಲ್ಯಕಾಲ:
ಕಮಲಾ ಹಂಪನಾ

ರಾಮಚಂದ್ರಗೌಡ:
ಜೀವನೋತ್ಸಾಹದ ರೇಷ್ಮೆ ಉದ್ಯಮಿ

ಬ್ರಿಟಿಷ್ ಸಾಮ್ರಾಜ್ಯದ ಇನ್ನೊಂದು ಮುಖ: ರಾಮಚಂದ್ರ ಗುಹಾ

ನಮ್ಮ ರೀತಿನೀತಿಗಳು ನಿಮಗೆ ಅರ್ಥವಾಗುವುದಿಲ್ಲ - ಸಿಹಾಟಲ್

"ಕೃಷ್ಣ ಪಾಂಡವರಲ್ಲಿದ್ದ ಸ್ನೇಹದಿಂದ ಪಾಂಡವರು ತುಂಬಾ ಲಾಭವನ್ನು ಪಡೆದರು. ಸ್ವಕುಲದ ದೃಷ್ಟಿಯಿಂದಲೂ ಮತ್ತು ವೈಯಕ್ತಿಕವಾಗಿಯೂ ಕೃಷ್ಣನಿಗೆ ಲಾಭವಾಯಿತು. ಜರಾಸಂಧ ಕೊಲ್ಲಲ್ಪಟ್ಟ ಮತ್ತು 'ಸರ್ವೋತ್ತಮ ಕ್ಷತ್ರಿಯಾಗ್ರಣಿ' ಎಂದು ಎಲ್ಲಾ ಕ್ಷತ್ರಿಯ ಸಮೂಹದಲ್ಲಿ ಗೌರವದ ಪ್ರಥಮ ಆರ್ಘ್ಯವನ್ನು ಕೃಷ್ಣಪಡೆದ. ಅರ್ಜುನನೊಡನೆ ಇದ್ದ ಕೃಷ್ಣನ ಸ್ನೇಹವು ನಿರಪೇಕ್ಷವಾಗಿತ್ತು. ಅರ್ಜುನನ ಪರಮ ಸ್ನೇಹವು ಕೃಷ್ಣನಿಗೆ ದೊರೆತಿದ್ದರೂ ಅದರಿಂದ ವ್ಯಾವಹಾರಿಕೆ ಲಾಭವೇನೂ ಇರಲಿಲ್ಲ. ಕೃಷ್ಣ ಅಷ್ಟೇ ಉತ್ಕಟ ಸ್ನೇಹವನ್ನು ಅರ್ಜುನನೊಡನೆ ಇಟ್ಟುಕೊಂಡಿದ್ದ. ತನ್ನ ಬುದ್ಧಿ ಸಾಹಸಗಳನ್ನು ಅರ್ಜುನನ ಸ್ನೇಹ, ಯಶ, ಆತ್ಮ ಇವುಗಳ ವಿಕಾಸ ಮತ್ತು ರಕ್ಷಣೆಗಳಿಗಾಗಿ ಉಪಯೋಗಿಸಿದ."

–ಇರಾವತಿ ಕರ್ವೆ

('ಯುಗಾಂತ' ಕೃತಿಯಲ್ಲಿ)

ಸಂಪಾದಕ: ಶೂದ್ರ ಶ್ರೀನಿವಾಸ್

ಶೂದ್ರದೊಂದಿಗೆ:

ಸಿ. ಎಸ್. ಸರ್ವಮಂಗಳ - ಕೆ. ಎನ್. ಅರುಣ್ - ಪ್ರೀತಿ ಮತ್ತು ರಾಹುಲ್
ಹುಳಿಮಾವು ಲೋಕೇಶ್ - ಕೋಲಾರ ನಾರಾಯಣಸ್ವಾಮಿ
ಉತ್ತನೂರು ರಾಜಮ್ಮ ವಿ. ಶೆಟ್ಟಿ - ಹೆಚ್. ಪ್ರೇಮಲೀಲಾ
ಪ್ರಭಾಕರರೆಡ್ಡಿ - ಎಸ್. ಮಾಲತಿ, ಸಾಗರ - ಕ್ರಿಯಾ ಮತ್ತು ಸ್ನೇಹ

ಅಕ್ಷರ ಜೋಡಣೆ: ಶ್ರೀಧರ್

ಮುಖಪುಟ ಚಿತ್ರ: ಸಲೀಂ ಆಲಿಯವರ ಪಕ್ಷಿಲೋಕ
(ಸಲೀಂ ಆಲಿಯವರು ಪಕ್ಷಿಗಳ ಜೀವಲೋಕವನ್ನು ಹುಡುಕಿದ ಮಹಾನ್ ಚಿಂತಕ)
ಮುದ್ರಣ: ವಿನಾಯಕ ಆಫ್‌ಸೆಟ್, ಜೆ.ಪಿ.ನಗರ, ಬೆಂಗಳೂರು - 78

ಸಮಕಾಲೀನ ಬದುಕಿನ ಸಂವಾದಕ್ಕೆ 'ಶೂದ್ರ'
ಜನವರಿ - ಫೆಬ್ರುವರಿ - ಮಾರ್ಚ್ 1999 ಸಂಪುಟ 26

ನಿಮ್ಮೊಂದಿಗೆ...

ನಾವು ಅನಾಯಕತ್ವದಿಂದ ನರಳುತ್ತಿದ್ದೇವೆ. ಯಾರನ್ನು ಮಾತಾಡಿಸಿದರೂ ಏನೋ ಗೊಣಗಾಟ ಶುರುಮಾಡುತ್ತಾರೆ. ಒಂದು ರೀತಿಯ ಅಸಹನೆಯಿಂದ ಒದ್ದಾಡುತ್ತಿರುವಂತೆ ಕಾಣುತ್ತಾರೆ.

ಬೇರೆ ಬೇರೆ ಕಡೆ ನಡೆಯುತ್ತಿರುವ ಮತೀಯ ಗಲಭೆಗಳನ್ನು ಕುರಿತಂತೆ ವರದಿಗಳನ್ನು ನೋಡಿದಾಗ, ಮಾನವ ಹಕ್ಕುಗಳ ಹೋರಾಟದ ಗೆಳೆಯರು ತನಿಖಾ ವರದಿಗನ್ನು ಚರ್ಚೆಯಲ್ಲಿ ಮಂಡಿಸಿದಾಗ ನಾವು ಯಾವ ಕಡೆ ಹೋಗುತ್ತಿದ್ದೇವೆ ಎಂದು ಒಂದು ಕ್ಷಣ ಮನಸ್ಸು ಭೀತಿಯಿಂದ ತಲ್ಲಣಿಸುತ್ತದೆ. ಈ ರೀತಿಯ ಗೊಂದಲದ ಮನಸ್ಥಿತಿಯಲ್ಲಿ ನಮಗೆ ಗೊತ್ತಿಲ್ಲದೆಯೇ ಭಾವನಾತ್ಮಕ 'ನಾಯಕ'ನನ್ನು ಹುಡುಕುತ್ತಿರುತ್ತೇವೆ. ಇಂಥ ಹುಡುಕಾಟದ ಸಮಯದಲ್ಲಿ 'ಕನಸಿಗೊಂದು ಕಣ್ಣು' ಲೇಖನಕ್ಕೆ 'ನನ್ನೊಳಗೊಬ್ಬ ನಾಯಕ' ಎಂದು ತುಂಬ ಖಾಸಗಿಯಾದ ಲೇಖನವನ್ನು ಬರೆಯಲು ಪ್ರಾರಂಭಿಸಿದೆ. ಸಾಧ್ಯವಾದರೆ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸುವೆ.

'ಶೂದ್ರ' ತಡವಾಗಿ ಬಂದರೂ ಓದುಗರು ಪ್ರೀತಿಯಿಂದ ಬರಮಾಡಿಕೊಂಡಿದ್ದಾರೆ. ಮೆಚ್ಚುಗೆಯಿಂದ ಮಾತಾಡಿದ್ದಾರೆ. ನಾನಾರೀತಿಯ ಸಲಹೆಗಳನ್ನು ಕೊಟ್ಟಿದ್ದಾರೆ. ಇದನ್ನೆಲ್ಲ ನೋಡಿದಾಗ, ಎಲ್ಲರೂ ಆತ್ಮೀಯವಾಗಿ ಮಾತಾಡುವ ವೇದಿಕೆಯನ್ನಾಗಿ 'ಶೂದ್ರ'ವನ್ನು ರೂಪಿಸಬೇಕಾಗಿದೆ. ಮೊನ್ನೆ ಗೆಳೆಯ ಅಗ್ರಹಾರ ಮತ್ತು ಕವಿ ಸಿದ್ಧಲಿಂಗಯ್ಯ ಮುಂತಾದ ಗೆಳೆಯರೊಡನೆ ಚರ್ಚಿಸುವಾಗ ಸಾಹಿತ್ಯಕವಾಗಿ ಮತ್ತು ಸಾಂಸ್ಕೃತಿಕವಾಗಿ ಏನು ಚರ್ಚೆಯಾಗುತ್ತಿಲ್ಲ ಎಂಬುದು ಮುಖ್ಯವಿಷಯವಾಗಿತ್ತು. ಬಹಳ ದಿವಸಗಳ ನಂತರ ಗೆಳೆಯ ಡಿ.ಆರ್. ಹೋದಮೇಲೆ ಈರೀತಿ ಮಾತಾಡಿಕೊಂಡಿದ್ದು ಒಂದು ರೀತಿಯಲ್ಲಿ ಮನಸ್ಸಿಗೆ ಹಗುರ ಅನ್ನಿಸಿತು. ಇದೇ ಸಮಯಕ್ಕೆ ರಾತ್ರಿ ಒಂಬತ್ತೂವರೆಗೆ ದೂರವಾಣಿಯಲ್ಲಿ "ಶೂದ್ರ, ವಿಶ್ವಹಿಂದೂ ಪರಿಷತ್ತಿನ ಸಮ್ಮೇಳನದಲ್ಲಿ 'ಸತೀಪದ್ಧತಿ' ಕುರಿತಂತೆ ಗಿರಿಧರ ಕಿಶೋರ್‌ರವರ ಹೇಳಿಕೆಯನ್ನು ನೋಡಿದಿರಾ? ದಯವಿಟ್ಟು ಇದಕ್ಕೆ ಸಂಬಂಧಿಸಿದಂತೆ ಪ್ರತಿಭಟನೆ ಇದೆ, ಬನ್ನಿ" ಎಂದು ಸದಾ ಹೋರಾಟದಲ್ಲಿಯೇ ಉಸಿರಾಡುವ ಸುರೇಂದ್ರ ಮತ್ತು ವಿಮಲಾ ದಂಪತಿಗಳು ಹೇಳಿದಾಗ, ಮತೀಯ ಸಂಘಟನೆಗಳನ್ನು ಕುರಿತು ಯೋಚಿಸುತ್ತಾ ಹೋದೆ.

ಭಾರತದ ಮಹತ್ವಪೂರ್ಣ ನಾಟಕಕಾರರಾದ ಗಿರೀಶ್ ಕಾರ್ನಾಡರಿಗೆ 'ಜ್ಞಾನಪೀಠ ಪ್ರಶಸ್ತಿ' ಬಂದಿದೆ. ಅದೇ ರೀತಿಯಲ್ಲಿ ಜಿಮ್ ಲೇಕರ್‌ನ ಸಾಧನೆಯನ್ನು ಕುರಿತು ಓದುವಂತೆ ದಾಖಲೆ ನಿರ್ಮಿಸಿದ ಅನಿಲ್ ಕುಂಬ್ಳೆಯವರನ್ನು 'ಶೂದ್ರ' ಅಭಿನಂದಿಸುತ್ತದೆ.

'ಶೂದ್ರ' ೨೫ನೆಯ ವರ್ಷದ ವಿಶೇಷಾಂಕವನ್ನು ಜೂನ್ ೧೫ರಂದು ಬಿಡುಗಡೆ ಮಾಡಲಾಗುವುದು. ಅಷ್ಟರೊಳಗೆ ಒಂದಷ್ಟು 'ಶೂದ್ರ' ಸಂಚಿಕೆಗಳನ್ನು ತರಬೇಕಿದೆ. ಜುಲೈ ತಿಂಗಳಲ್ಲಿ ಶೂದ್ರ ಮತ್ತು ಬೋಧಿವೃಕ್ಷದ ಆಶ್ರಯದಲ್ಲಿ 'ದೇಹ ಮತ್ತು ಹಸಿರು' ಎಂಬ ತ್ರೈಮಾಸಿಕ ಪತ್ರಿಕೆಯನ್ನು ತರಲು ಸಿದ್ಧತೆ ನಡೆಸಿದ್ದೇವೆ. ಮುಖ್ಯವಾಗಿ ಪರಿಸರ ಮತ್ತು ನಾಟಿ ವೈದ್ಯ ಪದ್ಧತಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ತರುತ್ತಿದ್ದೇವೆ. ಪ್ರತಿಸಂಚಿಕೆ ೧೨೦ ಪುಟಗಳಷ್ಟಿರುತ್ತದೆ.

–ಸಂ.

ಬೆಲೆ ರೂ. 20

1S

ಈ ಸಂಚಿಕೆಯಲ್ಲಿ

ಆಸರೆ (ಕಥೆ)	ಜಿ. ಪಿ. ಬಸವರಾಜು	3
ರಾಮಚಂದ್ರಗೌಡ: ....ರೇಷ್ಮೆ ಉದ್ಯಮಿ	ಶೂದ್ರ ಶ್ರೀನಿವಾಸ್	18
ನೆನಪಿನ ಬುತ್ತಿ	ಕಮಲಾ ಹಂಪನಾ	22
ಸ್ವಾತಂತ್ರ್ಯೋತ್ತರ ಕನ್ನಡ ಸಾಹಿತ್ಯ ಹಾಗೂ....	ಡಾ॥ ನಿ. ಮುರಾರಿ ಬಲ್ಲಾಳ	31
ಬ್ರಿಟಿಷ್ ಸಾಮ್ರಾಜ್ಯದ ಇನ್ನೊಂದು ಮುಖ	ಅನು: ಜಸವಂತ ಜಾದವ್	41
ನಮ್ಮ ರೀತಿನೀತಿಗಳು ನಿಮಗೆ ಅರ್ಥವಾಗುವುದಿಲ್ಲ	ಅನು: ರಮಾ ಬಿ. ಎ. ಶ್ರೀಧರ್	58
ಕನಸಿಗೊಂದು ಕಣ್ಣು	ಶೂದ್ರ ಶ್ರೀನಿವಾಸ್	63
ಸಮಾನತೆ	ಎಂ. ವಿಠೋಬಶೆಟ್ಟಿ	68
ನಮ್ಮ ಮಹಿಳೆಯರ ಕುರಿತು ಒಂದು ಚರ್ಚೆ	ಉತ್ತನೂರು ರಾಜಮ್ಮ ವಿ. ಶೆಟ್ಟಿ	68
ಪುಸ್ತಕ ಪರಿಚಯ	ಸಿದ್ಧಾರ್ಥ	75
ಒಳನೋಟ	ಓದುಗರು ಮತ್ತು ಹಿತೈಷಿಗಳು	78

ಕಾವ್ಯ ವಿಭಾಗ

ಪ್ರೀತಿ ಇಲ್ಲದ ಮೇಲೆ	ಡಾ॥ ಎಸ್. ವಿ. ಪ್ರಭಾವತಿ	17
ಚಂದ್ರಶೇಖರ ಕಂಬಾರರಿಗೆ	ಸುಮತೀಂದ್ರ ನಾಡಿಗ	21
ರಂಗೋಲಿ ಧ್ಯಾನ	ಕೃಷ್ಣಮೂರ್ತಿ ಬಿಳಿಗೆರೆ	30
ಸೊರಬರವರ ಎರಡು ಕವನಗಳು	ಸೊರಬ	40
ನೀರದ	ವೆಂಕಟಗಿರಿ ದಳವಾಯಿ	57
ನೀರಜ	ಎಲ್. ಎನ್. ಮುಕುಂದರಾಜು	67
ಕವನಗಳೆಂದರೆ	ಶೈಲೇಂದ್ರ ಬಂದಗದ್ದೆ	71
ಬೇಸಗೆಯ ದಿನ	ಅನುವಾದ: ಕೆ.ಎಸ್. ವಿಜಯಲಕ್ಷ್ಮಿ	73

ವಿಯಟ್ನಾಂ ಸ್ವಾತಂತ್ರ್ಯ ಹೋರಾಟದಲ್ಲಿ ಹೋರಾಡಿದ ಮಹಾನ್ ಮಹಿಳೆ. ಈಕೆಯ ಬಗ್ಗೆ ಹೋಚಮಿನ್‌ರವರು ಪ್ರಶಂಸೆಯ ಮಾತಾಡಿದ್ದಾರೆ. ಜಿ. ಪಿ. ಬಸವರಾಜರವರ ಆಸರೆ ಕತೆಯ ನಾಯಕಿಗೆ ಸಂಬಂಧ ಕಲ್ಪಿಸಬೇಕಾಗಿಲ್ಲ.

-ಸಂ

ಆಸರೆ

ಜಿ. ಪಿ. ಬಸವರಾಜ

ತನ್ನ ಎದೆಮಟ್ಟ ಬೆಳೆದ ಮಗಳು ರತ್ನಿಯೊಂದಿಗೆ ದ್ಯಾಮವ್ವ ಚಂದ್ರಾಪುರದ ಜಾತ್ರೆಯಲ್ಲಿ ನಿಂತಾಗ ಸೂರ್ಯನಾಗಲೇ ಮಾರುದ್ದ ಮೇಲೇರಿದ್ದ. ಎಲ್ಲಮ್ಮನ ಗುಡ್ಡ ಬಟ್ಟೆ ಕಳಚಿದಂತೆ ಬೆತ್ತಲಾಗಿ ನಿಂತಿತ್ತು. ಶಿಶಿರನ ಆಗಮನವಾಗಿದ್ದ ಕಾರಣ ಗುಡ್ಡದ ಮೇಲಿನ ಮರಗಿಡಗಳೆಲ್ಲ ಎಲೆ ಕಳಚಿ ಅಸ್ತಿ ಪಂಜರಗಳಂತೆ ನಿಂತಿದ್ದವು. ಹಸಿರಿಲ್ಲದೆ ಗುಡ್ಡ ಬರಿದಾದಂತೆ ಕಾಣಿಸುತ್ತಿತ್ತು. ಈ ಗುಡ್ಡವನ್ನು ಸುತ್ತು ಹಾಕಿ ಚಂದ್ರಾವತಿ ನದಿ ಹರಿಯುತ್ತಿತ್ತು. ನೀರು ಅಷ್ಟಾಗಿ ಇರಲಿಲ್ಲವಾಗಿ ಚಂದ್ರಾವತಿ ಬಡಕಲು ಬಡಕಲಾಗಿ ಕಾಣಿಸುತ್ತಿದ್ದಳು. ಕೊಯ್ಲು ಮುಗಿದಿದ್ದು ಹೊಲಗಳೆಲ್ಲ ಬೋಳು ಬೋಳಾಗಿ ಕಾಣಿಸುತ್ತಿದ್ದವು. ಎಲ್ಲವ್ವನ ಗುಡ್ಡವನ್ನು ಹತ್ತುವವರು ಹತ್ತುತ್ತಿದ್ದರು. ಚಂದ್ರಾವತಿಯಲ್ಲಿ ಮೀಯುವವರು ಮೀಯುತ್ತಿದ್ದರು. ಬೇವಿನ ಉಡುಗೆಯಲ್ಲಿ ಅಲಂಕರಿಸಿಕೊಂಡು, ಭಂಡಾರ ಬಳಿದುಕೊಂಡು, ಕೈಮುಗಿದುಕೊಂಡು, ಬಾಯಿಬೀಗ ಹಾಕಿಕೊಂಡು ಭಕ್ತಿಯಿಂದ ಎಲ್ಲವ್ವನ ಗುಡ್ಡ ಹತ್ತುತ್ತಿದ್ದವರು ಸಾಲು ಸಾಲಾಗಿ ದ್ಯಾಮವ್ವನಿಗೆ ಕಾಣಿಸಿದರು. ಬೆತ್ತಲ ಸೇವೆ ಮಾಡುವವರೂ ಬಹಳ ಮಂದಿ ಇದ್ದರು.

ಒಂಭತ್ತು ದಿನಗಳ ಕಾಲ ನಡೆಯುವ ಈ ಜಾತ್ರೆಯಲ್ಲಿ ತನ್ನದೂ ಒಂದು ಹರಕೆ ಎಲ್ಲವ್ವ ತಾಯಿಗೆ ಸಲ್ಲಬೇಕೆಂಬುದು ದ್ಯಾಮವ್ವನ ಆಶೆ. ಮಗಳು ರತ್ನಿಗೆ ಮೂರ್‍ನಾಲ್ಕು ವರ್ಷಗಳ ಹಿಂದೆ ಜ್ವರ ಬಂದು ಹಾಸಿಗೆ ಹಿಡಿದಿದ್ದಾಗ ಮಗಳು ಬದುಕಿ ಉಳಿದರೆ ಜಾತ್ರೆಗೆ ಬಂದು ಸೇವೆ ಸಲ್ಲಿಸುವುದಾಗಿ ದ್ಯಾಮವ್ವ ಹರಕೆ ಕಟ್ಟಿಕೊಂಡಿದ್ದಳು. ಅದರಂತೆ ರತ್ನಿಗೆ ಜ್ವರಬಿಟ್ಟು ಹರಕೆ ಉಳಿದಿತ್ತು. ಪ್ರತಿವರ್ಷ ಜಾತ್ರೆಯ

ಹೊತ್ತಿಗೆ ಒಂದಲ್ಲ ಒಂದು ತಾಪತ್ರಯ ಎದುರಾಗಿ ತಾನು ಜಾತ್ರೆಗೆ ಬರಲು ಮತ್ತು ಹರಕೆ ಸಲ್ಲಿಸಲು ಸಾಧ್ಯವಾಗದೆ ದ್ಯಾಮವ್ವ ಹರಕೆಯನ್ನು ಮುಂದೂಡುತ್ತ ಬಂದಿದ್ದಳು. ಈ ವರ್ಷ ಏನಾದರಾಗಲಿ ಹರಕೆಯನ್ನು ಸಲ್ಲಿಸಿಯೇ ಬಿಡಬೇಕು, ಎಲ್ಲವ್ವ ತಾಯಿಗೆ ಕೋಪಬರುವುದಕ್ಕೆ ಬಿಡಬಾರದು ಎಂದು ದ್ಯಾಮವ್ವ ಚಂದ್ರಾಪುರದ ಜಾತ್ರೆಗೆ ಮಗಳೊಂದಿಗೆ ಬಂದಿದ್ದು.

ಮೊದಲು ಚಂದ್ರಾವತಿಯಲ್ಲಿ ಮಿಂದು ಮಡಿಯಾಗಬೇಕು. ದ್ಯಾಮವ್ವ ಒಂದು ಗಳಿಗೆ ಯೋಚಿಸಿದಳು. ಯಾವ ಕಡೆಗೆ ಹೋದರೆ ಒಳ್ಳೆಯದು, ಜನರ ಗದ್ದಲ ಎಲ್ಲಿ ಕಡಿಮೆ ಇರುತ್ತದೆ? ರತ್ನಿಯನ್ನಾದರೂ ಕೇಳಬೇಕು ಎಂದುಕೊಂಡರೆ, ಆ ಹೆಣ್ಣು ಇಡೀ ಜಾತ್ರೆಯನ್ನೇ ತನ್ನ ಕಣ್ಣಲ್ಲಿ ತುಂಬಿಕೊಳ್ಳುವಂತೆ ನೋಡುತ್ತಿದೆ. ಮೈಮೇಲಿನ ಧ್ಯಾಸವೇ ಅದಕ್ಕಿದ್ದಂತೆ ತೋರಲಿಲ್ಲ. ಮೈ ಕೈ ತುಂಬಿ ತುಳುಕುತ್ತಿದ್ದ ತನ್ನ ಮಗಳು, ಅವಳ ಮೈ ಬಣ್ಣ ಸುಗ್ಗಿ ಸೂರೆಯಾಡುತ್ತಿದ್ದ ಚೆಲುವು. 'ಅಯ್ಯೋ ಬೂ ಲೋಕದ ರಂಬೆ ಅಂದ್ರೆ ಇವ್ಳೇ ಕಣಪ್ಪ' ಎಂದು ದ್ಯಾಮವ್ವ ನಟಿಕೆ ಮುರಿದಳು. ಈ ಸದ್ದಿಗೆ ಮೆಟ್ಟಬಿದ್ದು ರತ್ನಿ ತನ್ನವ್ವನ ಕಡೆಗೆ ತಿರುಗಬೇಕು—ಆಗ ಕಾಣಿಸಿಕೊಂಡ ಗ್ರಾಮ ಸೇವಕ ಗೋವಿಂದ ದಾಸ್.

ಈತನೇನೋ ತನ್ನ ಹೆಸರನ್ನು ಗೋವಿಂದ ದಾಸ್ ಎಂದೇ ಹೇಳಿದ್ದ. ಆದರೆ ಗ್ರಾಮದ ಜನ ಯಾವ ಹೆಸರನ್ನೇ ಆಗಲಿ ಅದರ ನಿಜ ರೂಪದಲ್ಲಿ ಕರೆದ ದಾಖಲೆ ಎಲ್ಲಿದೆ? ಅದೂ ಒಂದಿಷ್ಟು ಉದ್ದದ ಹೆಸರನ್ನು ಅದರ ಪೂರ್ಣ ರೂಪದಲ್ಲಿ ಕರೆಯುವುದೆಂದರೇನು? ದಾಸಪ್ಪ ಎಂದೇ ಕರೆವರು. ದಾಸಪ್ಪ ಸೋಮೇರೇ ಎಂಬುವವರೂ ಇದ್ದರು. ಇನ್ನೂ ಎಳೆ ಹರೆಯದ ಈತನನ್ನು ಸೋಮೇರೇ ಎನ್ನಲು ಮನಸ್ಸಿಲ್ಲದ ಅನೇಕರು, ದಾಸಪ್ಪ, ದಾಸಣ್ಣ ಎನ್ನುವುದರಲ್ಲೇ ತೃಪ್ತಿಪಟ್ಟುಕೊಂಡರು. ದಾಸಪ್ಪನ್ನೋರೆ ಎಂದು ತೀರ ವಿಶ್ವಾಸ ತೋರಿಸುವವರೂ ಇದ್ದರು. ಮಿರಿ ಮಿರಿ ಮಿಂಚುವ ಉಡುಪಿನಲ್ಲಿ, ಲಕಲಕ ಹೊಳೆಯುವ ಬೂಟಿನಲ್ಲಿ, ಹಿಂದಕ್ಕೆ ಬಾಚಿದ ಕರಾಪಿನಲ್ಲಿ, ನುಣ್ಣಗೆ ಬೋಳಿಸಿಕೊಂಡ ನಸುಗಪ್ಪು ಮುಖದಲ್ಲಿ, ಕುಡಿ ಮೀಸೆಯ ಅಡಿಯಲ್ಲಿ ಫಳಫಳ ಹೊಳೆಯುವ ಬಿಳಿ ಹಲ್ಲಿನಲ್ಲಿ, ಪುಟುಪುಟು ನಡೆದು ಹೋಗುತ್ತಿದ್ದ ಗೋವಿಂದ ದಾಸ್ ಅವರನ್ನು ಯಾರಾದರೂ 'ದಾಸಪ್ಪ' 'ದಾಸಣ್ಣ' ಎಂದು ಕರೆದು ನಿಲ್ಲಿಸಿದರೆ ದಾಸ್ ತೀರ ಕುಗ್ಗಿಹೋಗುತ್ತಿದ್ದರು. ತಮ್ಮ ಲಕಲಕಿಸುವ ಬಿಳೀ ಬಟ್ಟೆಯ ಮೇಲೆ ಡಾಂಬರು ಎರಚಿದಷ್ಟು ಬೇದವಾಗುತ್ತಿತ್ತು ಅವರಿಗೆ. ಹೀಗೆ ಕರೆದು ತಮ್ಮನ್ನು ನಿಲ್ಲಿಸಿದವರು ಗಂಟೆಗಟ್ಟಲೆ ಮಾತನಾಡಿದರೂ, ಒಂದೇ ಒಂದು ಪದವೂ ದಾಸ್ ಅವರ ತಲೆಯೊಳಕ್ಕೆ ಇಳಿಯುತ್ತಿರಲಿಲ್ಲ. ಅದೇ ಬೇದಾವಸ್ಥೆಯಲ್ಲಿ ನಿಂತಿದ್ದು, ಕೊನೆಗೊಮ್ಮೆ ಹೇಳದೇ ಕೇಳದೇ ಹೊರಟು ಹೋಗುತ್ತಿದ್ದರು. 'ದಾಸಪ್ಪ ಒಳ್ಳೇ ಜನ, ಆದ್ರೆ ಒಂದಿಷ್ಟು ತಿಕ್ಲ' ಎಂದುಕೊಳ್ಳುತ್ತಿದ್ದರು ಊರ ಜನ.

ದಾಸ್ ಕೋಲಾರ ಜಿಲ್ಲೆಯಿಂದ ಬಂದಿದ್ದರೂ, ಯಾವುದೋ ದೂರದ ಸೀಮೆಯಿಂದ ಬಂದವನು ಎಂದೇ ಊರ ಮಂದಿ ನಂಬಿದ್ದರು. ಗೌಡರ ಬಳಿಗೆ, ಶಾನುಭೋಗರ ಬಳಿಗೆ ಹೋದಂತೆ ಈ ಗ್ರಾಮ ಸೇವಕನ ಬಳಿಗೆ ಯಾರೂ ಹೋಗುತ್ತಿರಲಿಲ್ಲ. ಗೌಡ ಏನಿಲ್ಲದಿದ್ದರೂ ನಾಲ್ಕು ದರ್ಪದ ಮಾತಾಡುತ್ತಿದ್ದ. ಅದರಿಂದ ಜನರಿಗೆ ಸಮಾಧಾನವಾಗುತ್ತಿತ್ತು. ಶಾನುಭೋಗ ತನ್ನ ಬಳಿ ಬಂದವರನ್ನು ಮನೆಯ ಹೊರಗೇ ನಿಲ್ಲಿಸಿದರೂ, 'ನಿಮ್ಮ ಹೊಲದ ಅವರೆ ತಿಂದು ಅದೆಷ್ಟು ವರ್ಷಾ ಆಯ್ತ್‌ರೀ', 'ನಿಮ್ಮ ಹಸು ಕರೀತಿಲ್‌ವೇನಯ್ಯಾ' ಎಂದು ಕೇಳಿ ತರಕಾರಿ, ದವಸ, ಹಾಲು-ತುಪ್ಪ ತರಿಸಿಕೊಳ್ಳುತ್ತಿದ್ದ. ಇದೂ ಜನರಿಗೆ ಸಂತೋಷವನ್ನು ನೀಡುತ್ತಿತ್ತು. ದಾಸ್ ಜನರ ಬಳಿಗೆ ಹೋಗಿ ಕಷ್ಟ ಸುಖ ವಿಚಾರಿಸಿದರೂ, 'ಹುಡುಗು ಬುದ್ಧಿ ಅದಕ್ಕೇನು ತಿಳಿದೀತು' ಎಂದು ಕಡೆಗಣಿಸುತ್ತಿದ್ದರು. ಆದರೆ ನಿಧಾನಕ್ಕೆ ದಾಸ್ ಸರ್ಕಾರಿ ಅಧಿಕಾರಿ ಎಂಬುದು ಜನರ ಗಮನಕ್ಕೆ ಬಂದಿತ್ತು. ಸರ್ಕಾರದ ಅನೇಕ ಕೆಲಸಗಳು ದಾಸ್ ಮೂಲಕ ನಡೆಯುತ್ತಿದ್ದವು. ಮೇಲಧಿಕಾರಿಗಳು ಬಂದಾಗ ಅವರು ಗೌಡ, ಶಾನುಭೋಗರ ಹತ್ತಿರ ಹೋಗದೆ ದಾಸ್ ಬಳಿಗೆ ಹೋಗುತ್ತಿದ್ದರು. ಸರ್ಕಾರಕ್ಕೆ ಕಾಗದ ಪತ್ರ ಬರೆಯುವವನೂ ದಾಸ್ ಆಗಿದ್ದ. ಇದೆಲ್ಲ ಜನರ ಗಮನಕ್ಕೆ ಬಂದಂತೆಲ್ಲ ದಾಸಣ್ಣನವರನ್ನು ಜನ ಇಸ್ವಾಸದಿಂದ ಮಾತನಾಡಲಾರಂಭಿಸಿದ್ದರು. 'ಬಾರಪ್ಪ ದಾಸಣ್ಣ ಕುಂತ್ಕಳ್ರಿ' ಎಂದು ಕರೆಯುವುದನ್ನು ರೂಡಿಸಿಕೊಂಡಿದ್ದರು.

ದಾಸ್ ಕಾಣಿಸಿದ್ದೇ ರತ್ನಿಯ ಮುಖ ಊರಗಲವಾಯಿತು. ಪರಸ್ಥಳದಲ್ಲಿ ಗುರುತು ಪರಿಚಯದವರು ಒಬ್ರು ಸಿಕ್ರಲ್ಲಾ ಎಂದು ದ್ಯಾಮವ್ವನಿಗೂ ಸಂತೋಷವಾಯಿತು. ತೀರ ಅನಿರೀಕ್ಷಿತವಾಗಿ ತಾಯಿ ಮಗಳನ್ನು ಕಂಡವರಂತೆ ದಾಸ್, 'ಏನ್ರಮ್ಮ ಇಲ್ಲಿ' ಎಂದರು. ತನ್ನನ್ನು ಬಹುವಚನದಲ್ಲಿ ಕರೆದದ್ದು ಕೇಳಿ ದ್ಯಾಮವ್ವನಿಗೆ ಎಲ್ಲಿಲ್ಲದಷ್ಟು ಹಿಗ್ಗು ತುಂಬಿಕೊಂಡಿತು. 'ಅರಕೆ ಇತ್ತು ಕಣ್ರಪ್ಪ. ಅದ್ಕೆ ಬಂದಿದ್ವಿ' ಎಂದಳು ದ್ಯಾಮವ್ವ. ದಾಸಪ್ಪ ಎಂಬ ಪದವಿಲ್ಲದ ಈ ವಾಕ್ಯದಿಂದ ದಾಸ್ ಪ್ರಸನ್ನರಾದಂತಿತ್ತು. ರತ್ನಿಯನ್ನು ಬಿಡುಗಣ್ಣಿನಿಂದ ನೋಡಿದರು ದಾಸ್. ಮೈಜುಮ್ಮೆನ್ನಿಸಿ ದಾಸ್ ಗಲಿಬಿಲಿಗೊಂಡು, ರತ್ನಿಗೂ ದಾಸರನ್ನು ನೋಡಿ ಹೀಗೆಯೇ ಆಗಿತ್ತು. ಅವಳ ಮುಖಕ್ಕೆ ರಕ್ತ ನುಗ್ಗಿ ಅದು ಬೈಗಿನ ಹೊತ್ತಲ್ಲಿ ಪಡುವಣ ಬಾನು ಬಳಿದುಕೊಳ್ಳುತ್ತಿದ್ದ ಬಣ್ಣಕ್ಕೆ ತಿರುಗಿತು. ಈ ಎಲ್ಲ ಬದಲಾವಣೆಯಿಂದ ಆಕೆ ಮುಖ ತಗ್ಗಿಸಿ ನೆಲ ನೋಡಿದಳು. ದಾಸ್ ದ್ಯಾಮವ್ವನ ಮುಖ ನೋಡಿದರು. ದ್ಯಾಮವ್ವ ಇದನ್ನೆಲ್ಲ ಗಮನಿಸಿದರೆ ಇರಲಿಲ್ಲ. ಊರಲ್ಲಾಗಿದ್ದರೆ ಪಟಕ್ಕನೆ ಏನನ್ನಾದರೂ ಆಡಿ ದಾಸಪ್ಪನ ಮುಖದ ನೀರನ್ನಿಳಿಸುತ್ತಿದ್ದಳು. ಆದರೆ ಇದು ಪರಸ್ಥಳ. ಪ್ರಾಣಸಂಕಟ. ಅಷ್ಟಕ್ಕೂ ದಾಸಣ್ಣ ತನ್ನ ಮಗಳನ್ನು ನೋಡಿದರೆ ಏನಂತೆ? ಅವನೇನು ತಿಂದುಬಿಡುತ್ತಾನೆ?.. ಮುಂದೇನು ಮಾಡುವುದೆಂದು ಯಾರಿಗೂ ಹೊಳೆಯಲಿಲ್ಲ.

ದಾಸಣ್ಣ ದ್ಯಾಮವ್ವ ರತ್ನಿಯರನ್ನು ನೋಡದ್ದು ಅವರೊಂದಿಗೆ ಮಾತನಾಡಿದ್ದು ಇದು ಮೊದಲ

ಸಲವೇನೂ ಆಗಿರಲಿಲ್ಲ. ಆಗಾಗ ಯಾವುದಾದರೂ ಒಂದು ನೆಪದಿಂದ ದ್ಯಾಮವ್ವನ ಮನೆಗೆ ಹೋಗುತ್ತಿದ್ದ. ಅದಕ್ಕೆ ಮುಖ್ಯ ಕಾರಣ ರತ್ನಿಯಾಗಿದ್ದಳು. ತುಂಬ ಚೆಲ್ಲಾಡುತ್ತಿದ್ದ ಅವಳ ಯೌವನ, ರೂಪ ಕಾರಣವಾಗಿದ್ದವು. ರತ್ನಿಯನ್ನು ನೋಡುವುದು, ಅವಳೊಡನೆ ಮಾತನಾಡುವುದು, ತನ್ನ ಭಾಗ್ಯ ಎಂದೇ ತಿಳಿದಿದ್ದ ದಾಸ್ ಈ ಭಾಗ್ಯಕ್ಕಾಗಿ ನಿತ್ಯ ಹಂಬಲಿಸುತ್ತಿದ್ದರು. ಹೀಗಾಗಿಯೇ ದ್ಯಾಮವ್ವನ ಮನೆಗೆ ಹೋಗಲು ಒಂದಲ್ಲ ಒಂದು ಕಾರಣವನ್ನು ಹುಡುಕುತ್ತಿದ್ದರು. ಅವು ಸಿಕ್ಕದಿದ್ದರೂ ಹೋಗಿ ಬರುತ್ತಿದ್ದರು. ದ್ಯಾಮವ್ವ ಮನೆಯಲ್ಲಿದ್ದರೆ ಮಾತ್ರ ಈ ಕಾರಣ ಬೇಕಾಗುತ್ತಿತ್ತು, ಅಷ್ಟೆ.

ಎಷ್ಟೋ ಹೊತ್ತಿನ ನಂತರ ದಾಸ್ 'ಟಿಫಿನ್ ಆಯ್ತೇನಮ್ಮ?' ಎಂದು ಕೇಳಿದರು. ದ್ಯಾಮವ್ವನಿಗೆ ಈ ಟಿಫಿನ್ ಪದ ಅರ್ಥವಾಗಲಿಲ್ಲ. ಮಗಳ ಮುಖ ನೋಡಿದಳು. ರತ್ನಿ ತನ್ನ ಹಳ್ಳಿ ಶಾಲೆಯಲ್ಲಿ ನಾಲ್ಕನೆಯ ತರಗತಿಯವರೆಗೆ ಓದಿದ್ದಳು. ಕನ್ನಡ ಓದಲು ಬರೆಯಲು ಚೆನ್ನಾಗಿಯೇ ಬರುತ್ತಿತ್ತು. ಆದರೆ ಶಾಲೆ ಬಿಟ್ಟಮೇಲೆ ಪುಸ್ತಕದ ಗೊಡವೆಯಾಗಲೀ, ಅಕ್ಷರಗಳ ಜೊತೆಗಿನ ಸಂಬಂಧವಾಗಲೀ ಕೂಡಿಬರಲಿಲ್ಲವಾದ ಕಾರಣ ತಾನು ಕಲಿತದ್ದರಲ್ಲಿ ಎಷ್ಟನ್ನೋ ಮರೆತುಬಿಟ್ಟಿದ್ದಳು. ಆದರೆ ದಾಸರು ತಮ್ಮ ಮನೆಗೆ ಬರಲಾರಂಭಿಸಿದ ಮೇಲೆ ಅವಳ ಅಕ್ಷರ ಸಂಬಂಧ ಮತ್ತೆ ಆರಂಭವಾಗಿ ಕನ್ನಡವನ್ನು ಚೆನ್ನಾಗಿ ಓದಿ ಬರೆಯಲು ಕಲಿತಿದ್ದಳು. ದಾಸರು ವಾರದಲ್ಲಿ ಐದಾರು ಸಲ ದ್ಯಾಮವ್ವನ ಮನೆಗೆ ಬಂದು ಹೋಗುತ್ತಿದ್ದರು. ಅವರು ಬರುವಾಗ ಕೈಯಲ್ಲಿ ಯಾವುದಾದರೂ ಒಂದು ಪುಸ್ತಕವನ್ನೋ, ಮ್ಯಾಗಜಿನನ್ನೋ ಹಿಡಿದೇ ಬರುತ್ತಿದ್ದರು. ಮೊದಮೊದಲು ರತ್ನಿಗೆ ಪುಸ್ತಕಗಳ ಮೇಲೆ ಅಂಥ ಆಸಕ್ತಿಯೇನೂ ಇರಲಿಲ್ಲ. ದಾಸ್ ಜೊತೆಯಲ್ಲಿ ಮಾತನಾಡುವಾಗ ಮೈಯಲ್ಲಿ ಏನೋ ಹೊಕ್ಕಂತಾಗುತ್ತಿತ್ತು. ಅವರ ಉಡುಪು ಕಣ್ಣು ಕುಕ್ಕುವಂತಿರುತ್ತಿತ್ತು, ಅವರ ಉಡುಗೆಯನ್ನು ಕಂಡನಂತರ ರತ್ನಿಯ ಉಡುಪಿನಲ್ಲೂ ಮಾರ್ಪಾಟಾಗಿತ್ತು. ದಾಸ್ ಬರುತ್ತಾರೆಂದು ಊಹಿಸಿ ದಿನವೂ ರತ್ನಿ ಸಿಂಗಾರವಾಗುತ್ತಿದ್ದಳು. ಟ್ರಂಕಿನಲ್ಲಿದ್ದ, ಹಬ್ಬಕ್ಕೆ, ಜಾತ್ರೆಗೆ ಮಾತ್ರ ಉಡುತ್ತಿದ್ದ ರೇಶ್ಮೆಯ ಪತ್ತಲಗಳನ್ನು ನಿತ್ಯ ಉಡಲಾರಂಭಿಸಿದ್ದಳು. ದಾಸ್ ಬಾರದೆ ಹೋದರೆ ಇಡೀ ದಿನ ಮಂಕಾಗಿಯೇ ಇರುತ್ತಿದ್ದಳು. ನೀರು ಸೇದಲೆಂದು ಬಾವಿಗೆ ಹೋಗುವಾಗ ದಾಸ್‌ರ ಮನೆಯ ಮುಂದೆ ಅನಗತ್ಯವಾಗಿ ಓಡಾಡುವುದು ರತ್ನಿಗೆ ಅಭ್ಯಾಸವಾಗಿತ್ತು.

ರತ್ನಿಗೆ ಕೂಡಾ ದಾಸ್ ಬಳಸಿದ 'ಟಿಫಿನ್' ಪದ ಅರ್ಥವಾಗಲಿಲ್ಲ. ಅವಳಿಗೆ ಉತ್ತರ ಹೇಳುವುದು ಕಷ್ಟವಾಗಿ ದಾಸ್‌ರ ಮುಖವನ್ನೇ ನೋಡಿದಳು. ದಾಸ್ ಉತ್ಸಾಹದಲ್ಲಿದ್ದರು. 'ಟಿಫಿನ್ ಆಯ್ತು' ಎಂದು ಹೇಳಿದ್ದರೂ ಅವರು ಬಿಡುವ ಸ್ಥಿತಿಯಲ್ಲಿರಲಿಲ್ಲ. 'ಬನ್ನಿ, ಹೋಗೋಣ' ಎಂದು ಮುಂದೆ ಹೆಜ್ಜೆ ಹಾಕಿದರು. ತಾಯಿ ಮಗಳು ಹಿಂಬಾಲಿಸಿದರು.

ದ್ಯಾಮವ್ವನಿಗೆ ದಾಸರನ್ನು ನೋಡಿದರೆ ಅಭಿಮಾನವಾಗುತ್ತಿತ್ತು. ಹುಡುಗ ಬಹಳ ಸಬ್ಬಸ್ತ ಎಂದು ಅಂದುಕೊಂಡಳು. ಈ ಮಾತನ್ನು ಅವಳು ಅದೆಷ್ಟೋ ಸಲ ಮನಸ್ಸಿನಲ್ಲಿ ಹೇಳಿಕೊಂಡಿರುವುದಿದೆ. 'ದಾಸಪ್ಪ ಅದ್ಯಾಕೋ ನಿಮ್ಮನಿಗೆ ಬಾಳ ಬರ್‍ತಾನೆ' ಎಂದು ಮೂಲೆಮನೆ ಸಿದ್ದವ್ವ ದ್ಯಾಮವ್ವನಿಗೆ ಚುಚ್ಚುವಂತೆ ಹೇಳಿದ್ದಳು. ಅವಳೊಬ್ಬಳೇ ಅಲ್ಲ, ಎಷ್ಟೋ ಜನ ಅಂದು ಅನುಮಾನ ತೋರಿಸಿದ್ದರು. ಮೊದಲು ದ್ಯಾಮವ್ವನಿಗೂ ಈ ದಾಸಪ್ಪ ಮೇಲಿಂದ ಮೇಲೆ ಮನೆಗೆ ಬರುವುದು ಅನುಮಾನ ಹುಟ್ಟಿಸಿತ್ತು. ಆದರೆ ನಿಧಾನಕ್ಕೆ ಅಭ್ಯಾಸವಾಗಿತ್ತು. ಮನೆಯಲ್ಲಿ ಹಬ್ಬ

ಮಾಡಿದರೆ ದಾಸಪ್ಪನನ್ನು ತಾನೇ ಕರೆಸುತ್ತಿದ್ದಳು. 'ಇವತ್ತು ಇಲ್ಲೇ ಉಣ್ಣಪ್ಪ' ಎಂದು ಬೆಳಗ್ಗೆಯೇ ಹೇಳಿಬಿಡುತ್ತಿದ್ದಳು. ಬೆಳೆದ ಮಗಳು ಮನೆಯಲ್ಲಿದ್ದುದು ದ್ಯಾಮವ್ವನಿಗೂ ಗೊತ್ತಿತ್ತು. ಆದರೆ ಗಂಡು ದಿಕ್ಕಿಲ್ಲದೆ ತನ್ನ ಮನೆಗೆ ದಾಸಪ್ಪ, ಅದರಲ್ಲೂ ವಿದ್ಯಾವಂತ ಬರುವುದು ಒಳ್ಳೆಯದೆಂದೇ ಆಕೆ ತಿಳಿದಿದ್ದಳು. 'ಸಭ್ಯಸ್ತನಾದ ಈ ಹುಡುಗ ಮರ್ವಾದಿಯ ಜನ. ಒಳ್ಳೇ ಮನೆತನದವನಿರಬೇಕು. ಕೆಟ್ಟ ಹೆಸರು ತರೋ ಕೆಲಸ ಮಾಡಾ ಮನ್ಸ ಅಲ್ಲ' ಎಂದು ತನಗೆ ತಾನೇ ಸಮಾಧಾನ ಹೇಳಿಕೊಳ್ಳುತ್ತಿದ್ದಳು. ಯಾರು ಏನೇ ಹೇಳ್ಲಿ, ತನ್ನ ಮನಸ್ಸು ಹೇಳೋದನ್ನು ಕೇಳುವ ಹೆಣ್ಣುಮಗಳು ದ್ಯಾಮವ್ವ. ಹೀಗಾಗಿ ಅವಳೆಂದೂ ದಾಸಪ್ಪ ತನ್ನ ಮನೆಗೆ ಬರುವುದನ್ನು ತಡೆಯಲಿಲ್ಲ.

ದಾಸ್ ದ್ಯಾಮವ್ವನ ಮನಸ್ಸನ್ನು ಗೆದ್ದಿದ್ದರು. ಪ್ರತಿಸಲವೂ ಬರುವಾಗ ಏನಾದರೂ ತರುತ್ತಿದ್ದರು. ಹೂವು, ಹಣ್ಣು, ಸಿಹಿ ತಿಂಡಿ, ರತ್ನಿಗೆ ಓದಲು ಪುಸ್ತಕ... ಇದನ್ನು ದ್ಯಾಮವ್ವ ನೋಡಿಯೂ ನೋಡದಂತಿರುತ್ತಿದ್ದಳು. ದಾಸಪ್ಪನ ಋಣ ಬೇಡವೆಂದು ತನ್ನ ಮನೆಯಲ್ಲಿ ಮಾಡುತ್ತಿದ್ದ ಊಟ ತಿಂಡಿ ಎಲ್ಲವೂ ದಾಸಪ್ಪನಿಗೆ ಸಿಕ್ಕುವಂತೆ ನೋಡಿಕೊಳ್ಳುತ್ತಿದ್ದಳು. ದಾಸಪ್ಪ ಯಾವ ಜನವೋ ಏನೋ? ತಿಳಿಯಲು ನೋಡಿದ್ದಳು. ದಾಸಪ್ಪ ಮಾತ್ರ ಅದನ್ನು ಬಿಟ್ಟುಕೊಟ್ಟರಲಿಲ್ಲ. ಹಿಂಗಾಗಿ ದ್ಯಾಮವ್ವ ದಾಸಪ್ಪನನ್ನು ಅಡಿಗೆ ಮನೆಗೆ ಬಿಟ್ಟು ಕೊಂಡಿರಲಿಲ್ಲ. ದಾಸಪ್ಪ ಕುಂತುಕೊಳ್ಳುತ್ತಿದ್ದ ಪಡಸಾಲೆಯಲ್ಲೇ ಉಣ್ಣುವುದು ತಿನ್ನುವುದು ನಡೆಯುತ್ತಿತ್ತು.

ರತ್ನಿ ಈಗ ಹೊಲಕ್ಕೆ ಹೋಗುತ್ತಿರಲಿಲ್ಲ. ದ್ಯಾಮವ್ವನ ಜೊತೆಯಲ್ಲಿ ಮೊದಲು ಹೋಗುತ್ತಿದ್ದಳು. ಆದರೆ ಮೈನೆರೆದ ನಂತರ ದ್ಯಾಮವ್ವನೇ ಹೊಲಕ್ಕೆ ಬರುವುದು ಬೇಡ ಎಂದಿದ್ದಳು. ಇಡೀ ದಿನ ಮನೆಯಲ್ಲಿರುತ್ತಿದ್ದಳು. ಮನೆಯ ಕೆಲಸವೆಲ್ಲ ಬಹುಬೇಗ ಮುಗಿದು ಹೋಗುತ್ತಿತ್ತು. ಸುದೀರ್ಘವಾದ ಹಗಲನ್ನು ಕಳೆಯುವುದು ಹೇಗೆಂಬುದೇ ಅವಳಿಗೆ ಸಮಸ್ಯೆಯಾಗುತ್ತಿತ್ತು. ಹೀಗಾಗಿ ದಾಸ್ ಬಂದರೆ ಅವಳಿಗೆ ಬಹಳ ಸಂತೋಷವಾಗುತ್ತಿತ್ತು. ದಾಸ್ ಗಂಟೆಗಟ್ಟಲೆ ಮನೆಯಲ್ಲಿ ಕುಳಿತುಕೊಳ್ಳುತ್ತಿದ್ದರು. ಇವಳೊಂದಿಗೆ ಏನೇನೋ ಹರಟೆ ಹೊಡೆಯುತ್ತಿದ್ದರು. ಮೊದ ಮೊದಲು ಬರೀ ಪುಸ್ತಕವನ್ನು ತರುತ್ತಿದ್ದ ದಾಸ್ ಅನಂತರ ಏನೇನೋ ತರುತ್ತಿದ್ದರು. ಪುಸ್ತಕದಲ್ಲಿ ಚೀಟಿಗಳಿರುತ್ತಿದ್ದವು. ಮೊದಲು ಗಾಬರಿಯಿಂದ ಚೀಟಿ ಓದಿ ಹರಿದು ಹಾಕಿದ ರತ್ನಿ ನಂತರ ಚೀಟಿಗೆ ಉತ್ತರ ಬರೆಯಲು ಕಲಿತಳು. ಶಬ್ದ, ಅರ್ಥ, ಹೊಸ ಭಾಷೆ ಕಲಿತಳು. ರತ್ನಿಗೆ ಬೇಕಾದ ಪೌಡರು, ರಿಬ್ಬನ್ನು, ಜಾಕೀಟಿನ ಬಟ್ಟೆ, ಸೀರೆ ಇತ್ಯಾದಿ ಅನೇಕ ವಸ್ತುಗಳು ದ್ಯಾಮವ್ವನಿಗೆ ಗೊತ್ತಾಗದ ರೀತಿಯಲ್ಲಿ ರತ್ನಿಯನ್ನು ಸೇರುತ್ತಿದ್ದವು. ಹೀಗಾಗಿ ರತ್ನಿಯ ರೂಪವೇ ಬದಲಾಯಿತು. ಅವಳ ಮಾತುಗಳು ಬದಲಾದವು... ದಾಸ್ ಕುಳಿತಷ್ಟೂ ಹೊತ್ತು ರತ್ನಿ ಯಾವುದೋ ಲೋಕದಲ್ಲಿ ಸಂಚರಿಸುತ್ತಿದ್ದಳು. ಏನೇನೋ ಕನಸು ಕಾಣುತ್ತಿದ್ದಳು.

ಭಾಗ –2

ಮೂವರೂ ಅದೇ ತಾನೇ ಉಂಡು ಮುಗಿಸಿದ್ದರು. ಚಂದ್ರಾವತಿ ದಂಡೆಯ ಮೇಲಿನ ಹೊಂಗೆಯ ಮರದ ತಂಪು ನೆರಳು ದಣಿದ ದೇಹಗಳಿಗೆ ಬಹಳ ಹಿತವಾಗಿತ್ತು. ದಾಸ್ ಇಡೀ ಜಾತ್ರೆಯನ್ನು ಸುತ್ತಿಸಿದ್ದರು. ಸೇವೆಯನ್ನು ಮರುದಿನ ಮಾಡಿದರಾಯ್ತು ಎಂದು ದ್ಯಾಮವ್ವ

ತೀರ್ಮಾನಿಸಿದ್ದರಿಂದ ಯಾವ ಆತಂಕವೂ ಇಲ್ಲದೆ ದಾಸರ ಜೊತೆಯಲ್ಲಿ ಮಗಳನ್ನು ಕಟ್ಟಿಕೊಂಡು ಜಾತ್ರೆಯ ತುಂಬ ಅಡ್ಡಾಡಿದ್ದಳು. ರತ್ನಿಗಂತೂ ಬಿಸಿಲಾಗಲೀ, ಬಾಯಾರಿಕೆಯಾಗಲೀ, ದಣಿವಾಗಲೀ ಲೆಕ್ಕಕ್ಕೇ ಬಂದಿರಲಿಲ್ಲ. ಟೇಪು, ಬಳೆ, ಕುಂಕು, ಲೋಲಕ್ಕು, ಬಣ್ಣಬಣ್ಣದ ಸೋಡಾ, ಕಣ್ಣಿಗೆ ಕಂಡದ್ದನ್ನೆಲ್ಲ 'ತಗೋಳ್ರೀ' ಎನ್ನುತ್ತಿದ್ದರು ದಾಸ್. ನೀರಿನಂತೆ ದುಡ್ಡು ಖರ್ಚುಮಾಡುತ್ತಿದ್ದ ದಾಸರನ್ನು ಕಂಡು ದ್ಯಾಮವ್ವನ ಎದೆ ಡವಗುಡುತ್ತಿತ್ತು. 'ಅಯ್ಯೋ ಶಿವ್ನೆ' ಎಂದು ಹತ್ತಾರು ಸಲ ಉದ್ಗಾರ ತೆಗೆದಿದ್ದಳು. 'ಕೊಡುಗೈ ದೊರೆ' ಎಂದು ದಾಸರನ್ನು ಮನದಲ್ಲೇ ಹೊಗಳಿದ್ದಳು. 'ಅಯ್, ಬ್ಯಾಡ್ ತಗಿಯಪ್ಪ' ಎಂದು ಹೇಳಿದರೂ ದಾಸ್ ಕೊಡಿಸಿದ್ದನ್ನೆಲ್ಲ ದ್ಯಾಮವ್ವ ತೆಗೆದುಕೊಂಡಿದ್ದಳು. ಆನಂದಪಟ್ಟಿದ್ದಳು. ದ್ಯಾಮವ್ವನಿಗೆ ಬಂಬಾಯ್ ಮಿಠಾಯಿ ತಿನ್ನುವುದು ಮಾತ್ರ ಸಾಧ್ಯವಾಗಿರಲಿಲ್ಲ. ದಾಸರು ಹಾಕಿದ ಗೆರೆಯನ್ನು ದಾಟದಂತಿದ್ದ ರತ್ನಿ ಮಿಠಾಯಿ, ಬೆಂಡು ಬತ್ತಾಸು, ಖರ್ಜೂರ ಎಲ್ಲವನ್ನು ಎಳೆ ಮಗುವಿನಂತೆ ತಿಂದಿದ್ದಳು. ಮೈಗೆ ಮೈ ತಗುಲಿಸಿಕೊಂಡು ಪಕ್ಕದಲ್ಲೇ ಇರುತ್ತಿದ್ದ ದಾಸರ ಸಖ್ಯ ಅವಳಿಗೆ ಬಹಳ ಹಿತವಾಗಿತ್ತು.

ಇಡೀ ದಿನ ಹೊಲದಲ್ಲಿ ಮೈಮುರೆ ದುಡಿಯುತ್ತಿದ್ದ ದ್ಯಾಮವ್ವನಿಗೆ ದಣಿವಾಗಲಿ, ಬಿಸಿಲಾಗಲೀ ಒಂದು ಲೆಕ್ಕವಾಗಿರಲಿಲ್ಲ. ಆದರೆ ಗೊತ್ತು ಗುರಿ ಇಲ್ಲದಂತೆ ಜಾತ್ರೆಯಲ್ಲಿ ತಿರುಗಿದ್ದು ಮೈಗೆ ಬಂದು ಧೂಳು ಮುತ್ತಿಕೊಂಡಿದ್ದು ಬಳಲಿಕೆ ಉಂಟುಮಾಡಿತ್ತು. ಒಂದಿಷ್ಟು ಕಾಲ ಚಾಚಿ ಅಡ್ಡಾದರ ಸಾಕಪ್ಪ ಶಿವನೇ ಎಂದುಕೊಂಡು ಹೊಂಗೆಯ ಮರದ ಸಮೃದ್ಧ ಚಿಗುರನ್ನು ನೋಡತೊಡಗಿದಳು. ಇದೇ ಹೊತ್ತಿಗೆ ದಾಸ್, 'ಸಾಕಮ್ಮನವರೇ...' ಎಂದು ಏನೋ ಹೇಳಲು ಬಾಯಿತೆರದರು. 'ಏನು?' ಎಂಬಂತೆ ದ್ಯಾಮವ್ವ ದಾಸರ ಕಡೆಗೆ ನೋಡಿದಳು. ದಾಸ್ ತಡೆತಡೆದು ಹೇಳಿದರು –'ಈ ಊರಲ್ಲಿ ಹ್ಯಾಂಡ್ ಲೂಂ ಬಟ್ಟೆ ಬಹಳ ಅಗ್ಗ. ಬಹಳ ಒಳ್ಳೇದೂ ಸಿಕ್ಕುತ್ತೆ. ನೀವು ಬಹಳ ದಣಿದಿದ್ದೀರಿ. ಇಲ್ಲೇ ಮರದ ನೆರಳಲ್ಲಿ ಸ್ವಲ್ಪ ಹೊತ್ತು ರೆಸ್ಟ್ ತೊಗೊಳ್ಳಿ. ನಾನು ರತ್ನ ಹೋಗಿ ಒಂದಿಷ್ಟು ಒಳ್ಳೆ ಬಟ್ಟೆ ತರ್ತೀವಿ.' ಬಟ್ಟೆ ಅಂದ್ರೆ ದ್ಯಾಮವ್ವನಿಗೆ ಬಹಳ ಪ್ರೀತಿ. 'ಒಂದೋ ಎಲ್ಡೋ ಸೀರೆನಾ ನಾನೂ ತಗಂಡ್ರೆ ಹೆಂಗೆ?' ಎಂಬ ಯೋಚನೆ ಮನಸ್ಸಿಗೆ ಬಂದ್ರೂ, ದುಡ್ಡು ಬಿಚ್ಚಲು ದ್ಯಾಮವ್ವ ತಯಾರಿರಲಿಲ್ಲ. ಈ ದಾಸಪ್ಪ ಏನೋ ಧಾರಾಳಿ. ಆದ್ರೆ ತನ್ನ ಸೀರೆಗೆ ದುಡ್ಡು ಕೊಟ್ಟಾನಾ? ತಾನೇ ದುಡ್ಡು ಕೊಡಾ ಪರ್‌ಸಂಗ ಬಂದ್ರೆ? ಬಟ್ಟೆ ತರ್ತೀನಿ ಎಂದು ದಾಸಪ್ಪ ಹೇಳಿದ್ದೇನೋ ಖರೆ. ಬಟ್ಟೆ ಯಾರಿಗೆ? ನನಗೆ? ರತ್ನಿಗೆ? ದಾಸಪ್ಪನಿಗೆ? ದಾಸಪ್ಪನ ಮನೆಯವರಿಗೆ? ದಾಸಪ್ಪನ ಊರಾಗಲೀ, ಅವನ ಮನೆಯಾಗಲೀ, ಅವನ ಮನೆಯಲ್ಲಿ ಯಾರ್‍ಯಾರಿದ್ದಾರೆ ಎಂಬುದಾಗಲೀ ತನಗೆ ತಿಳಿಯದ್ದಕ್ಕೆ ದ್ಯಾಮವ್ವನ ಮನಸ್ಸಿಗೆ ವ್ಯಾಕುಲವಾಯಿತು. ದಾಸಪ್ಪನಿಗೂ ಇನ್ನೂ ಮದುವೆಯಾಗಿಲ್ಲ ಎಂಬುದು ದ್ಯಾಮವ್ವನಿಗೆ ಖಾತ್ರಿಯಾಗಿ ತಿಳಿದಿತ್ತು. ಉಳಿದ ವಿವರಗಳು ಗೊತ್ತಿರಲಿಲ್ಲ, ದ್ಯಾಮವ್ವನ ಮನಸ್ಸಿನಲ್ಲಿ ಗೊಂದಲ, ವ್ಯಾಕುಲ, ಪ್ರಶ್ನೆಯ ಸರಮಾಲ ಹೀಗೆ ಥರಾವರಿ ಹುಟ್ಟಿಕೊಳ್ಳುತ್ತಿದ್ದಂತೆ ದಾಸ್, "ನಡೀರಿ ರತ್ನ, ಹೋಗಿ ಬರೋಣ" ಎಂದು ಹೊರಟೇ ಬಿಟ್ಟರು. ರತ್ನ ಇದನ್ನು ಕಾದು ಕುಳಿತಿದ್ದವಳಂತೆ, ದ್ಯಾಮವ್ವನ ಕಡೆಗೂ ನೋಡದೆ ದಾಸರ ಜೊತೆಯಲ್ಲಿ ನಡೆದೇ ಬಿಟ್ಟಳು.

ದ್ಯಾಮವ್ವನಿಗೆ ಬೇಜಾರಾಯಿತು. ಹೆತ್ತು, ಹೊತ್ತು, ಸಾಕಿ ಸಲವಿದ ಈ ತಾಯಿ ಅಂಬೋಳಿಗೆ ಒಂದ್ ಮಾತೂ ಏಳ್ದೆ ಕೇಳ್ದೆ ಈ ಹೆಣ್ಣು ನಿಂತ ನಿಲುವಿನಲ್ಲೇ ಒಂಟೋದ್ಲಲ್ಲಾ ಅಂಥ ದ್ಯಾಮವ್ವನಿಗೆ

ಶಾನೆ ಬೇಜಾರಾಯ್ತು. 'ಅಯ್ಯೋ ಇದರ ಮನೆ ಆಳಾಗ' ಅಂತ ಮಗಳನ್ನ ಬೈಕಂಡು ಗಂಟನ್ನ ತಲೆ ಅಡಿಗೆ ಇಟ್ಟುಕೊಡ್ಳು. ಬೀಸಿ ಬಂದ ಹೊಂಗೇ ಮರದ ತಂಗಾಳಿಗೆ ಜೋಗುಳ ಹಾಡಿದ ಹಂಗಾಗಿ ದ್ಯಾಮವ್ವನ ಮನಸ್ಸಿಗೆ ಹಿತವಾಗಿ ಹಂಗೇ ಕಣ್ಣುಮುಚ್ಚಿದಳು.



ಭಾಗ - 3

ದ್ಯಾಮವ್ವನಿಗೆ ಎಚ್ಚರವಾದಾಗ ಸಂಜೆ ಸೂರ್ಯ ಹೊಂಬಣ್ಣಕ್ಕೆ ತಿರುಗಿದ್ದ. ನಿರುಮ್ಮಳವಾಗಿ ಹರಿಯುತ್ತಿದ್ದ ಚಂದ್ರಾವತಿ ನೀರಿನಲ್ಲಿ ಬೆಳ್ಳಿಯ ಕಿರಣಗಳು ಫಳಫಳ ಹೊಳೆಯುತ್ತಿದ್ದವು. ಮನೆಗೆ ಹೊರಟದ್ದ ಹಕ್ಕಿಗಳ ಪಯಣ ಬಾನಲ್ಲಿ ಸಾಗಿತ್ತು. ಮೀಯುವ ಜನರಾರೂ ಇಲ್ಲದೆ ನದಿಯ ಪ್ರದೇಶ ಪ್ರಶಾಂತವಾಗಿತ್ತು. ಮೈ - ಮನಸ್ಸು ಹಗುರವಾಗಿ ಅತ್ಯಂತ ಪ್ರಶಾಂತವಾಗಿ ಕೂತಿದ್ದ ದ್ಯಾಮವ್ವ ಸ್ವಲ್ಪ ಹೊತ್ತು ಹಂಗೇ ಕುಂತು ಇಡೀ ನೋಟವನ್ನು ತುಂಬಿಕೊಳ್ಳುತ್ತಿದ್ದಳು. ತನ್ನ ಬದುಕಿನ ಸಾಫಲ್ಯಗಳಿಗೆಗಳನ್ನು ಕಳೆಯುತ್ತಿರುವವಳಂತೆ ದ್ಯಾಮವ್ವ ಹಂಗೇ ಮೈಮರೆತು ಕುಂತಿದ್ದಳು.

ಅರಿವು ಒಮ್ಮೆಗೇ ಮರಳಿ, ಧಡಕ್ಕನೆ ಎದ್ದು ನಿಂತ ದ್ಯಾಮವ್ವ ರತ್ನಿ ಎಲ್ಲಿಯಾದರೂ ಕಾಣಿಸುತ್ತಾಳೇನೋ ಎಂದು ನೋಡಿದಳು. ದಾಸಪ್ಪನಾದರೂ ಕಣ್ಣಿಗೆ ಬಿದ್ದಾನೇನೋ ಎಂದು ಹುಡುಕಿದಳು. 'ಅದೆಂತ ಮಾಯದ ನಿದ್ದೆ ಕವುರುತ್ತೊ ಸಿವನೇ' ಅಂತ ಚಡಪಡಿಸಿದಳು. 'ಇವು ಎಲ್ಲಿ ಓದ್ವೋ, ಯಾಕೆ ಇನ್ನೂ ಬರ್ಲಿಲ್ಲ' ಎಂದು ಚಡಪಡಿಸಿ ನಾಲ್ಕು ಹೆಜ್ಜೆ ಅತ್ತ ನಡೆದು ನೋಡಿದಳು. ರತ್ನಿಯೂ ಇಲ್ಲ, ದಾಸಪ್ಪನೂ ಇಲ್ಲ, ತನ್ನ ಗಂಟಿದ್ದಲ್ಲಿಗೇ ಮರಳಿ ಬಂದಳು, ಕುಂತಳು, ಬಾನು ನೋಡಿ ಯೋಚಿಸಿದಳು. ಮತ್ತೆ ಎದ್ದಳು. ನಾಲ್ಕಾರು ಹೆಜ್ಜೆ ನಡೆದಾಡಿದಳು. ಈ ಜೋಡಿಗಳಿಗೆ ಅದೆಂತಾ ಬುದ್ದಿ ಬಂತಪ್ಪಾ ಎಂದು ವಾಪಸ್ಸು ಬಂದಳು. ಎಲ್ಲವ್ವನ ಗುಡ್ಡದ ಕಡೆಗೆ ನೋಡಿದಳು. ಜನ ಹತ್ತುತ್ತಿದ್ದರು, ಇಳಿಯುತ್ತಿದ್ದರು. ಚಂದ್ರಾವತಿಯಲ್ಲಿ ನೀರು ಸಾಗಿಹೋಗುತ್ತಿತ್ತು, ಸಂಜೆಯ ಸೂರ್ಯ ಕೆಂಪಾಗುತ್ತಿದ್ದ. ಬಾನಲ್ಲಿ ಬಣ್ಣಗಳನ್ನು ನೋಡಿದಳು. ಏನು ನೋಡಿದರೂ ರತ್ನಿಯ ನೋಟವೇ ಕಣ್ತುಂಬಿಕೊಳ್ಳುತ್ತಿತ್ತು. 'ಅದೆಂತಾ ಬಟ್ಟೆ ತರಾಕೆ ಓದ್ರಪ್ಪಾ ಈ ಬುದ್ದಿಗೇಡಿಗಳು' ಎಂದು ಜೋರಾಗಿಯೇ ಹೇಳಿಕೊಂಡಳು. ಬೆಳೆದ ಮಗಳು ರತ್ನಿಯನ್ನು ದಾಸಪ್ಪನ ಜತೆಗೆ ಕಳುಹಿಸಬಾರದಿತ್ತು, ದಾಸಪ್ಪನೇನೋ ಒಳ್ಳೆಯ ಮನುಷ್ಯ. ಆದ್ರೂ.... ಈ ಕಾಲದಲ್ಲಿ ಯಾರನ್ನೂ ನಂಬಾರ್ದು. ರತ್ನಿ ಬಂಗಾರದಂತಾ ಉಡ್ಗಿ, ಬಿಟ್ಟಾನಾ. ದ್ಯಾಮವ್ವನ ಎದೆ ಬಡಿತ ಜೋರಾಯಿತು. ತಾನು ತಪ್ಪು ಮಾಡಿದೆ ಅನಿಸ್ತು, ನಿಲ್ಲಲಾರದೆ ಕುಸಿದು ಕುಳಿತಳು. ಬಾನಲ್ಲಿ ಹಕ್ಕಿಯೊಂದು ಶಿಳ್ಳೆ ಹಾಕುತ್ತ ಹೋಯಿತು. ಇದನ್ನು ಅಪಶಕುನವೆಂದೇ ನಂಬಿಕೊಂಡ ದ್ಯಾಮವ್ವ ಇನ್ನಷ್ಟು ಕುಗ್ಗಿಹೋದಳು. 'ಅಯ್ಯೋ ಸಿವನೇ, ತಾಯಿ ಎಲ್ಲವ್ವಾ, ಕೈ

ಬಿಡಬ್ಯಾಡವ್ವಾ' ಎಂದು ಹಲುಬಿದಳು. 'ಅರಕೆ ಸಲ್ಲಿಸೋದ ತಡವಾದ್ದಕ್ಕೆ ಈ ಸಿಕ್ಸೆನಾ?' 'ತಾಯಿ ಇದೊಂದು ಸಲ ತಪ್ಪನ್ನ ಒಟ್ಯಾಗಾಕ್ಕಂಬುಡವ್ವ, ವರ್ಸವರ್ಸಾನೂ ಬಂದು ಅರಕೆ ಒಪ್ಪುಸ್ತೀನಿ' ಎಂದು ಗುಡ್ಡದ ಕಡೆಗೆ ಕೈಮುಗಿದಳು. ಪಡುವಣ ಬಾನಲ್ಲಿ ಸೂರ್ಯ ದ್ಯಾಮವ್ವನಂತೆಯೇ ಕಳಾಹೀನನಾಗುತ್ತಿದ್ದ. ದ್ಯಾಮವ್ವ ಎದ್ದಳು. ಕುಂತಳು. ನಡೆದಾಡಿದಳು. ಕಣ್ಣುಗಳನ್ನು ಸಣ್ಣ ಮಾಡಿ, ನೋಟ ಹರಿತಗೊಳಿಸಿ ದೂರ ದೂರ ನೋಡಿದಳು. ಕಂಡ ಆಕೃತಿಗಳನ್ನೆಲ್ಲ ರತ್ನಿ ಎಂದು ಭ್ರಮಿಸಿದಳು. ದಾಸಪ್ಪ ಎಂದು ನಂಬಿದಳು.

ನಿಧಾನಕ್ಕೆ ಕತ್ತಲು ಭೂಮಿಗಿಳಿಯುತ್ತಿತ್ತು. ಬಣ್ಣಗಳು ಕರಗುತ್ತ ಬಾನು ಮಸಿಗಟ್ಟುತ್ತಿತ್ತು. ತುಸು ಹೊತ್ತಿನ ಮೊದಲು ಸುಂದರವಾಗಿ ಕಾಣಿಸುತ್ತ ಮನವನ್ನು ಹಗುರಗೊಳಿಸಿದ್ದ ಚಂದ್ರಾವತಿ ರೂಪವನ್ನೇ ಕಳೆದುಕೊಂಡು ಭೀತಿ ಬಿತ್ತುವಂತಿದ್ದಳು. ತನ್ನ ಮಗಳು ಕೈಬಿಟ್ಟಳು, ದಾಸಪ್ಪ ಮೋಸ ಮಾಡಿದ ಎಂಬುದು ದ್ಯಾಮವ್ವನ ಮನಸ್ಸಿನಲ್ಲಿ ಬೇರೂರುತ್ತ ಹೋಯಿತು. ದ್ಯಾಮವ್ವನಿಗೆ ತಾನಿಲ್ಲಿ ಏಕಾಕಿಯಾಗಿ ಕಾಯುವುದರಲ್ಲಿ ಅರ್ಥವೇ ಇಲ್ಲ ಎನ್ನಿಸಿತು. ಗಂಡ ಸತ್ತ ಮೇಲೆ ಮಗಳನ್ನೇ ನಂಬಿ ಬದುಕಿದ್ದಳು ದ್ಯಾಮವ್ವ. ಹಾಲು ಬೆಣ್ಣೆ ಮಾರಿ, ಹೊಲಗದ್ದೆ ನೋಡಿಕೊಂಡು ಸಂಸಾರ ನಿಭಾಯಿಸಿದ್ದಳು. ಮಗಳಿಗೊಂದು ಮದುವೆ ಅಂತ ಮಾಡಿ ದಿಕ್ಕು ಕಾಣಿಸಿದರೆ ತನ್ನ ಕೆಲಸ ಮುಗೀತು, ತಾನು ಯಾವಾಗ ಕಣ್ಣುಮುಚ್ಚಿದರೂ ಸರಿ ಎಂದು ಲೆಕ್ಕ ಹಾಕುತ್ತಿದ್ದಳು.

ತನ್ನ ಮಗಳು ಚೆಂದುಳ್ಳಿ ಚೆಲುವೆ. ಕರ್ಪೂರದ ಗೊಂಬೆ. ಕಣ್ಣು, ಮೂಗು, ತಿದ್ದಿ ಬರೆದ ಹುಬ್ಬು. ಬಂಗಾರದಂತ ಹುಡುಗಿ. ತನ್ನಂತೆಯೇ ಮೋಪಾಗಿ ಬೆಳೆದಿದ್ದಳು. ತೆರಕೊಟ್ಟು ಯಾರಾದರೂ ಮದುವೆಮಾಡಿಕೊಂಡು ಹೋಗುತ್ತಾರೆಂದೇ ದ್ಯಾಮವ್ವ ನಂಬಿದ್ದಳು. ಉಂಗುರ, ವಾಚು, ಸರ, ಸೈಕಲ್ಲು ಕೇಳುತ್ತಿದ್ದ ಗಂಡುಗಳನ್ನು ಮನೆಯ ಜಗುಲಿಯನ್ನೂ ಹತ್ತಿಸಿರಲಿಲ್ಲ. ಹಿಂಗಾಗಿ ರತ್ನಿಯ ಮದುವೆ ಪ್ರತಿ ವರ್ಷವೂ ಮುಂದೆ ಹೋಗುತ್ತಿತ್ತು. ಮಗಳು ಮದುವೆಯಾಗಿ ಗಂಡನ ಮನೆಗೆ ಹೋದರೆ ತಾನು ಒಂಟಿಯಾಗುತ್ತೇನೆಂಬ ಭಯವೋ ಏನೋ, ಸಕವ್ವ ಒಂದೊಂದು ಗಂಡು ತಪ್ಪಿಹೋದಾಗಲೂ ಸಮಾಧಾನಪಟ್ಟುಕೊಳ್ಳುತ್ತಿದ್ದಳು. ಇಂಥ ದಿನಗಳಲ್ಲೇ ದಾಸಪ್ಪ ದ್ಯಾಮವ್ವನ ಮನೆಗೆ ಬಂದಿದ್ದ.

ಈ ಹಾಳು ದಾಸಪ್ಪ ಕುಲ, ಗೋತ್ರ, ಊರು, ವಿದ್ಯಮಾನ ಯಾವುದನ್ನೂ ತಾನು ತಿಳಿದು ಕೊಂಡಿರಲಿಲ್ಲ. ಎಷ್ಟೋ ಸಲ ತಿಳಿದು ಕೊಳ್ಳಬೇಕೆಂದು ದ್ಯಾಮವ್ವ ಸುತ್ತಿ ಬಳಸಿ ಏನೇನೋ ಕೇಳಿದ್ದಳು. ದಾಸಪ್ಪ ಮಾತ್ರ ತೇಲಿಸಿ ಉತ್ತರ ಕೊಡುತ್ತಿದ್ದ. ಮಾತನ್ನು ಬೆಳೆಸದೆ ಮುಗಿಸಿಬಿಡುತ್ತಿದ್ದ. ಹಿಂಗಾಗಿ ದ್ಯಾಮವ್ವನಿಗೆ ಯಾವುದೂ ಸರಿಯಾಗಿ ತಿಳಿದಿರಲಿಲ್ಲ.

ಕತ್ತಲು ಸುತ್ತಿಕೊಳ್ಳುತ್ತಿತ್ತು. ಇವರು ಬರುವುದಿಲ್ಲ ತಾನಿನ್ನು ಇಲ್ಲಿರುವುದು ಅಪಾಯ. ರತ್ನಿ ಕೈಕೊಟ್ಟಳು. ಅವನೇನೋ ಗಂಡ್ಸು, ಬುದ್ದಿಗೇಡಿ. ಈ ನನ್ನ ಮಗ್ಳು ರತ್ನಿಗಾದರೂ ಮೈಮ್ಯಾಲೆ ಸದರ ಬ್ಯಾಡವೇ. ಅವನು ಕರದಾ ಅಂತ ಇವ್ಳು ಹೊಂಟೇ ಬಿಡದಾ. ತನ್ ಬುದ್ಧಿ ತನ್ನ ಕೈಯಾಗಿಟ್ಕಳಾದ್ ಬ್ಯಾಡ್ವಾ?

ಪರಸ್ಥಳ, ಕಂಡರಿಯದ ಊರು. ಯಾರನ್ನು ಕೇಳುವುದು? ತಾನು ಬೆಳಿಗ್ಗೆ ಸುತ್ತಿ ಬಂದ ಜಾಗಗಳಿಗೆಲ್ಲ ಒಂದು ಸಲ ಹೋಗಿ ಬಂದರೆ ಹೆಂಗೆ? ದ್ಯಾಮವ್ವ ಗಂಟನ್ನೆತ್ತಿಕೊಂಡು ಹೊರಟಳು. ಮಸುಕು ಮಸುಕಾಗಿ ದಾರಿ ಕಾಣಿಸುತ್ತಿತ್ತು.

ಜಾತ್ರೆಯ ಸ್ಥಳಕ್ಕೆ ದ್ಯಾಮವ್ವ ಬಂದಾಗ ಜನವೋ ಜನ. ಕಾಲಿಡಲೂ ಜಾಗವಿಲ್ಲ. ಪೆಟ್ರೋಮ್ಯಾಕ್ಸ್ ದೀಪಗಳು ಚೆಲ್ಲಿದ್ದ ಬೆಳಕಲ್ಲಿ ತೆರೆದುಕೊಂಡ ಅಂಗಡಿಗಳು. ಮಾರುವ ಜನ, ಕೊಳ್ಳುವ ಜನ, ರಾಶಿ ರಾಶಿ ಬಿದ್ದ ತೆಂಗಿನ ಕಾಯಿ, ಮಂಡಕ್ಕಿ, ಕಾರ, ಏರಿಸಿಟ್ಟ ಜಿಲೇಬಿ, ಮೈಸೂರು ಪಾಕ್, ಬಂಬಾಯಿ ನೋಡು, ಮದ್ರಾಸ್ ನೋಡು, ಆಹಾ ಬಂದಾಳಣ್ಣ, ಕುಣಿತಾಳಣ್ಣ, ದಿಲ್ಲಿ ನೋಡು, ಕಲ್ಕತ್ತಾ ನೋಡು... ಲಯಬದ್ಧವಾಗಿ ಕುಟ್ಟುತ್ತಿರುವ ತಾಳ. ಯಾವುದೋ ಲೋಕಕ್ಕೆ ಕಣ್ಣು ಜೋಡಿಸಿದವರು. ಜೋಗತಿಯರು ಕುಣಿಯುತ್ತಿದ್ದರು. ಹಾವಾಡಿಸುವವನ ಸುತ್ತ ಜನವೋ ಜನ. ಮುಳ್ಳು ಆವಿಗೆಯ ಮೇಲೆ ಜಂಗಮಯ್ಯ ತ್ರಿಶೂಲ ಹಿಡಿದು, ವಿಭೂತ್ ಬಳಿದು, ಜಡೆ ಬಿಟ್ಟು ಹಠಯೋಗಿಯಂತೆ ನಿಂತಿದ್ದ. ಹಸ್ತ ಸಾಮುದ್ರಿಕೆಯವನು ಸುತ್ತ ಕುಳಿತವರ ಭವಿಷ್ಯವನ್ನು ಬಲ್ಲವನಂತೆ ಕುಳಿತಿದ್ದ. ಆಚೆ ಬುಡಬುಡಕೆಯವನು. 'ನಿಮಗೆ ಶುಭವಾಗತೈತಿ, ಹಿಡಿದ ಕೆಲಸ ಆಗತೈತಿ....' ರತ್ನಿ ಎಲ್ಲಿದ್ದಾಳೆಂಬುದನ್ನು ಯಾರು ಹೇಳುತ್ತಾರೆ, ಯಾರನ್ನು ಕೇಳಬೇಕು, ಎಲ್ಲಿ ಹುಡಕಬೇಕು. ಒಂದಾಣೆ ಕೊಟ್ಟು ನೋಡಲೇ? ಮಗಳು ಸಿಕ್ಕುವುದಿಲ್ಲ ಎಂಬುದು ತನಗೇ ಖಾತ್ರಿಯಾಗುತ್ತಿದೆ, ಇನ್ನು ಒಂದಾಣೆ ಕೊಡುವುದು ಯಾತಕ್ಕೆ, ಅದನ್ನು ದಂಡಮಾಡಿಕೊಳ್ಳುವುದು ಯಾಕೆ? ಶಕುನ ಕೇಳುತ್ತ ಮೈಮರೆತು ಕುಂತರೆ ಯಾರಾದರೂ ತನ್ನ ಗಂಟನ್ನೇ ಎಗರಿಸಿಬಿಟ್ಟರೆ? ದಾಸಪ್ಪ ಕೊಡಿಸಿದ್ದೆಲ್ಲ ಅದರಲ್ಲಿತ್ತು. ನೀರಿನಂತೆ ದುಡ್ಡು ಚೆಲ್ಲಿ ದಾಸಪ್ಪ ಏನೇನೋ ಕೊಡಿಸಿದ್ದ. ತಟಕ್ಕನೆ ದ್ಯಾಮವ್ವನಿಗೆ ಏನೋ ಹೊಳೆದಂತಾಯಿತು. ರತ್ನಿ ಹೋದಾಗ ಅವಳ ಕೈಯಲ್ಲಿ ಏನಿತ್ತು? ಬರಿಗೈ ಬೀಸಿಕೊಂಡು ನಗುನಗುತ್ತ ದಾಸಪ್ಪನ ಜತೆಯಲ್ಲಿ ಹೊರಟು ಹೋಗಿದ್ದಳು. ರತ್ನಿ ಉಟ್ಟ ಬಟ್ಟೆಯಲ್ಲಿ ಹೋಗಿದ್ದಳು. ಉಟ್ಟ ಬಟ್ಟೆ ಎಂದರೂ ಕಿವಿಯಲ್ಲಿ ಓಲೆ, ಜುಮುಕಿ, ಕೊರಳಲ್ಲಿ ಎರಡೆಳೆ ಬಂಗಾರದ ಸರ, ಮೂಗಲ್ಲಿ ನತ್ತು, ಜಡೆಯಲ್ಲಿ ನಾಗರ, ಸೊಂಟದಲ್ಲಿ ಬೆಳ್ಳಿಯ ಪಟ್ಟ, ಕಾಲಲ್ಲಿ ಕಡಗ, ಕಾಲುಂಗುರ, ಅಡ್ಡಿಕೆ... ಒಂದೊಂದನ್ನೂ ತಾನು ಸಂಪಾದಿಸಲು ಪಟ್ಟ ಪಾಡೆಷ್ಟು ಎಂಬುದನ್ನು ನೆನೆದಾಗ ದ್ಯಾಮವ್ವನ ಕಣ್ಣಲ್ಲಿ ನೀರಾಡಿತು. ದ್ಯಾಮವ್ವ ಎಷ್ಟೋ ಹೊತ್ತು ಹಂಗೇ ನಿಂತಿದ್ದಳು. ಏನಾದರಾಗಲಿ ಒಂದು ಸಲ ಸುತ್ತಾಡಿ ರತ್ನಿಯನ್ನು ಹುಡುಕಾಡಬೇಕೆಂಬ ಆಸೆಯಾಯಿತು. ಆದರೆ ಹೋಗುವುದಕ್ಕೆ ಮಾತ್ರ ಕಾಲೇ ಏಳಲಿಲ್ಲ. ಬೆಳಗ್ಗೆ ಹೋದದ್ದು ಎಲ್ಲಿಗೆ, ಕುಂತದ್ದು, ನಿಂತದ್ದು, ಚಾ ಕುಡಿದದ್ದು, ಚೆಂಡು ಬತ್ತಾಸು ಮಂಡಕ್ಕಿ ಕೊಂಡದ್ದು ಎಲ್ಲ ನಿಜವಾದರೂ ಜಾಗಗಳು ಮಾತ್ರ ಒಂದೂ ನೆನಪಿಗೆ ಬರುತ್ತಿಲ್ಲ, ಎಲ್ಲ ಅಂಗಡಿಗಳೂ ಒಂದೇ ತರ ಇರುವಂತೆ ಕಾಣಿಸಿದವು. ದಾಸಪ್ಪ ಎಲ್ಲ ಕಡೆಗೂ ಕರೆದುಕೊಂಡು ಹೋಗಿದ್ದ.



ಒಂದಿಷ್ಟು ದೂರದಲ್ಲಿ ನಿಂತಿದ್ದವನೊಬ್ಬ ತನ್ನ

ಕಡೆಗೇ ನೋಡುತ್ತಿರುವುದು, ಕೆಮ್ಮಿದಂತೆ, ಕ್ಯಾಕರಿಸಿದಂತೆ ಮಾಡುತ್ತಿರುವುದು ಗಮನಕ್ಕೆ ಬಂದು ದ್ಯಾಮವ್ವ ವಾಸ್ತವ ಜಗತ್ತಿಗೆ ಬಂದಳು. 'ಏನ್ ಮನೆ ಆಳಾಗ' ಎಂದು ಬೈದುಕೊಂಡು, ನಾಲ್ಕೆಜ್ಜೆ ಮುಂದೆ ಹೋದಳು. 'ಈ ಜನ ಜಂಗುಳಿಯಲ್ಲಿ ಈ ಮಂಗಣ್ಣ ಏನ್ಮಾಡೀತು' ಎಂದು ಧೈರ್ಯ ತುಂದುಕೊಂಡು ಅಂಗಡಿ ಅಂಗಡಿ ದಾಟುತ್ತ ಹೆಚ್ಚು ಬೆಳಕಿದ್ದ ಕಡೆ ನಿಂತಳು. ಯಾಕೋ ಅವನು ನೋಡಿದ್ದರಿಂದ ದ್ಯಾಮವ್ವನ ಮೈ ಬೆಚ್ಚಗಾದಂತಾಯಿತು. ಹಾಗೆ ನೋಡಿದರೆ ದ್ಯಾಮವ್ವನಿಗೆ ಹೆಚ್ಚೇನೂ ವಯಸ್ಸಾಗಿರಲಿಲ್ಲ. ನಡು ಹರೆಯದ ದಿನಗಳಿನ್ನೂ ಮುಗಿದಿರಲಿಲ್ಲ. ದ್ಯಾಮವ್ವ ರೂಪವತಿಯೇ ಆಗಿದ್ದಳು. ಗಟ್ಟಿಮುಟ್ಟಾಗಿದ್ದ ಅವಳ ಅಂಗಾಂಗಗಳು ಯೌವನದ ಕಾಂತಿಯನ್ನೇ ಹೊಮ್ಮಿಸುತ್ತಿದ್ದವು.

ಈ ಬೆಚ್ಚಗಿನ ಭಾವದಲ್ಲಿ ದ್ಯಾಮವ್ವ ಬಹಳ ಹೊತ್ತು ನಿಲ್ಲಲಾಗಲಿಲ್ಲ. ಅವಳಿಗೆ ಊರು ಮನೆ ದನ ಕರು ಎಲ್ಲ ನೆನಪಾದವು. ಈ ಹಾಳಾದ ದಾಸಪ್ಪ ಸಿಕ್ಕದಿದ್ದರೆ ಹರಕೆ ಮುಗಿಸಿಕೊಂಡು ತಾನು ಸಹ ಇಷ್ಟೊತ್ತಿಗೆ ಮಗಳ ಜೊತೆಯಲ್ಲಿ ಊರು ಸೇರಿಬಿಡುತ್ತಿದ್ದೆ. ಹತ್ತಾರು ಜನಕ್ಕಾದರೂ ಜಾತ್ರೆಯ ಐಭೋಗ ಹೇಳುತ್ತಿದ್ದೆ. ನಾಳೆ ಊರಿಗೆ ಕಾಲಿಟ್ಟರೆ ಏನಪ್ಪ ಹೇಳ್ಲಿ ಸಿವನೇ? ಮಗಳು ಎಲ್ಲಿ ದ್ಯಾಮವ್ವ ಅಂತಾರೆ... ದ್ಯಾಮವ್ವ ಬೆಚ್ಚಿದಳು. ಮಗಳಿಲ್ಲದೆ ಊರಿಗೆ ಹೋಗುವುದನ್ನು ನೆನೆದುಕೊಂಡಂತೆ ಅವಳಿಗೆ ಕಾಲು ನಡುಕ ಸುರುವಾಯಿತು. ಒಂದು ದಿನವೂ ಮಗಳನ್ನು ಬಿಟ್ಟು ಬದುಕಿದವಳಲ್ಲ. ನೆರಳಿನಂತೆ ಜೊತೆಗಿರುತ್ತಿದ್ದ ಮಗಳು. ಈಗ ಮಗಳಿಲ್ಲದೆ ಊರಿಗೆ ಹೋಗುವುದು ಹೆಂಗೆ? ಜನರಿಗೆ ಮೊಕ ತೋರಿಸುವುದು ಹೆಂಗೆ? ದೆವ್ವದಂತ ಮನೆಯಲ್ಲಿ ತಾನು ಒಬ್ಬಂಟಿಯಾಗಿ ಓಡಾಡುವುದು, ಉಣ್ಣುವುದು, ತಿನ್ನುವುದು, ಮಲಗುವುದು, ಮಾತಿಲ್ಲ ಕತೆಯಿಲ್ಲ. ಅಯ್ಯೋ ತಾಯಿ ಎಲ್ಲವ್ವ, ಎಂತಾ ಕಷ್ಟ ಕೊಟ್ಟವ್ವ... ಯಾವ ಜನ್ಮದಲ್ಲಿ ಪಾಪ ಮಾಡಿದ್ನೆಪ್ಪ. ಯಾವ ತಾಯಿ ಮಕ್ಳನ್ನ ಅಗಲಿಸಿದ್ದೆನಪ್ಪಾ. ಇಂತ ಸಿಕ್ಸೆ ಯಾಕೆ ಕೊಟ್ಯವ್ವ ತಾಯಿ. ಗಿಜಿಗುಡುವ ಜಾತ್ರೆಯಲ್ಲಿ ನಿಂತೂ ತಾನು ಒಬ್ಬಂಟಿ ಅನ್ನಿಸಿ ದ್ಯಾಮವ್ವ ಮೈತುಂಬ ಬೆವರಿದಳು. ನಿಲ್ಲುವುದಕ್ಕೂ ಶಕ್ತಿ ಇಲ್ಲದಂತಾಗಿತ್ತು.

ಬಾಗ - 4

'ಬೆತ್ತಲ ಸೇವೆಗೆ ಧಿಕ್ಕಾರ' 'ಕ್ರೂರ ಪದ್ಧತಿಗೆ ಧಿಕ್ಕಾರ', 'ಮೂಢ ನಂಬಿಕೆಗಳಿಂದ ಹೊರಬನ್ನಿ' ಗುಂಪು ದ್ಯಾಮವ್ವನ ಕಡೆಗೇ ಬಂತು. ಗುಂಪಿಗೆ ದಾರಿಕೊಡಲೆಂದು ದ್ಯಾಮವ್ವ ನೋಡಿದಳು. ಬದಿಗೆ ಸರಿದುಕೊಳ್ಳಲು ಜಾಗವೇ ಇಲ್ಲ. ಗುಂಪಿಗೆ ಸಿಕ್ಕಿ ಗುಂಪಿನಲ್ಲಿ ಒಂದಾದಳು. ಗುಂಪಿನ ಮಧ್ಯೆ ದಾರಿ ಮಾಡಿಕೊಂಡು ಹೊರಗೆ ಹೋಗಬೇಕೆಂದರೂ ಸಾಧ್ಯವಾಗಲೇ ಇಲ್ಲ. ಗುಂಪು ದೊಡ್ಡದೇನೂ ಇರಲಿಲ್ಲ. ಆದರೆ ಜಾತ್ರೆಯಲ್ಲಿದ್ದ ಜನಗಳೂ ಸೇರಿ ಗುಂಪು ದೊಡ್ಡದಾಗಿ ಬೆಳೆಯಿತು. 'ಬನ್ರೆಮ್ಮ ತಾಯಿ, ಬನ್ರೆಮ್ಮ ನಿಮ್ಮ ಒಳ್ಳೇದಕ್ಕೇ ಕಂಡ್ರುವ್ವ ಈ ಕಾರ್ಯಕ್ರಮ' ಎಂದು ಯಾರೋ ದ್ಯಾಮವ್ವನಿಗೆ ಕೈಮುಗಿದು ಗುಂಪಿನಲ್ಲೇ ಇರಲು ಕೇಳಿಕೊಂಡರು. ದ್ಯಾಮವ್ವನಿಗೆ ಇದೆಲ್ಲ ಪಿರಿಪಿರಿ ಎನ್ನಿಸಿತು. ತನ್ನ ಮಗಳು ಸಿಕ್ಕರೆ ಸಾಕಾಗಿತ್ತು. ಎಲ್ಲವ್ವನಿಗೆ ಬೆತ್ತಲೆ ಸೇವೆಯ ಹರಕೆ ಸಲ್ಲಿಸಿ ಊರು ಮುಟ್ಟಿಕೊಂಡರೆ ಸಾಕಾಗಿತ್ತು. ಈ ಗುಂಪಿನಲ್ಲಿ ಹೆಂಗಸ್ರು, ಗಂಡಸ್ರು ಎಲ್ಲ ಇದ್ರು. ರತ್ನಿ ದಾಸಪ್ಪ ಈ ಗುಂಪಿನಲ್ಲಿ ಇದ್ದರೂ ಇರಬಹುದೆಂಬ ದೂರದ ಆಸೆಯೊಂದು

ದ್ಯಾಮವ್ವನ ಮನಸ್ಸಿನ ಮೂಲೆಯಲ್ಲಿ ಮುಲುಕು ಹಾಕಿತು. ದ್ಯಾಮವ್ವ ಇದೇ ಆಸೆಗೆ ಅಂಟಿಕೊಂಡು, ಕಂಕುಳಲ್ಲಿ ಗಂಟು ಕವುಚಿಕೊಂಡು ಗುಂಪಿನ ಜೊತೆ ನಡೆದಳು.

ಗುಂಪು ಒಂದು ಕಡೆ ನಿಂತಿತು. ಜನ ಸೇರಿದರು. ಯಾರೋ ಗ್ಯಾಸ್‌ಲೈಟ್ ಹಚ್ಚಿ ತಂದು ಮಧ್ಯದಲ್ಲಿಟ್ಟರು. ಅದರ ಸುತ್ತ ಜನ ಸೇರಿದರು. ಎಲ್ಲ ಕೂತ್ಕೋಬೇಕು, ಕೂತ್ಕೋಬೇಕು ಎಂದು ಯಾರೋ ಕೂಗುತ್ತಿದ್ದರು. ಮುಂದಿನವರು ಕುಂತರು, ಹಿಂದಿನವರು ನಿಂತರು. ದ್ಯಾಮವ್ವ ಮುಂದಿನ ಸಾಲಿನಲ್ಲಿ ತನ್ನ ಗಂಟಿನೊಂದಿಗೆ ನೆಲದ ಮೇಲೆ ಕುಂಡೆಯೂರಿ ಕುಂತಳು. ಒಬ್ಬ ಹರೇದಾಕೆ, ರತ್ನಿಯಂಗೇ ಕಾಣುತ್ತಿದ್ದವಳು ಮಧ್ಯಕ್ಕೆ ಬಂದು ನಿಂತಳು. ಸುತ್ತ ಸೇರಿದ್ದ ಜನರಿಗೆ ಕೈಮುಗಿದಳು. ಯಾರೂ ಗಲಾಟೆ ಮಾಡಬಾರದು ಎಂದು ಒಬ್ಬ ಕೂಗಿದ. ಆ ಹೆಣ್ಣುಮಗಳು ಬಾಯಿತೆಗೆದಳು: "ಎಲ್ಲಮ್ಮನಿಗೆ ಹರಕೆ ಸಲ್ಲಿಸಲೆಂದು ಸುತ್ತಮುತ್ತಲಿನ ಗ್ರಾಮಗಳಿಂದ ಬಂದಿರುವ ಮಹನೀಯರೇ ಮತ್ತು ಮಹಿಳೆಯರೇ..." ಯಾರೋ ಚಪ್ಪಾಳೆ ತಟ್ಟಿದರು. ಸುತ್ತ ನೆರೆದ ಜನರೂ ಚಪ್ಪಾಳೆ ತಟ್ಟಿದರು. ಆ ಹುಡುಗಿ ಮಾತು ಮುಂದುವರಿಸಿದಳು: "ನಾವು ದೇವರ ವಿರೋಧಿಗಳಲ್ಲ. ದೇವರು ಇರಬಹುದು, ಇಲ್ಲದಿರಬಹುದು, ಅದು ನಿಮ್ಮ ನಂಬಿಕೆಗೆ ಬಿಟ್ಟ ಮಾತು. ದೇವರನ್ನು ನೀವು ಪೂಜಿಸಬಹುದು, ಪೂಜಿಸದೆ ಇರಬಹುದು. ಅದೂ ನಿಮಗೆ ಬಿಟ್ಟ ವಿಚಾರವೇ. ಆದರೆ ಸಾಮೂಹಿಕವಾಗಿ ನಡೆಯುತ್ತಿರುವ ಕೆಲವು ಆಚರಣೆಗಳ ಬಗ್ಗೆ ನಿಮ್ಮ ಗಮನ ಸೆಳೆಯಲು ನಾವೆಲ್ಲ ಇವತ್ತು ಇಲ್ಲಿಗೆ ಬಂದಿದ್ದೇವೆ. ಈ ಬೆತ್ತಲೆ ಸೇವೆಯ ವಿಚಾರವನ್ನೇ ತೆಗೆದುಕೊಳ್ಳಿ. ದೇವರನ್ನು ಪೂಜಿಸಲು, ದೇವರಿಗೆ ಹರಕೆ ಸಲ್ಲಿಸಲು ಜನ ವಿಶೇಷವಾಗಿ ಮಹಿಳೆಯರು ಯಾಕೆ ಬೆತ್ತಲಾಗಬೇಕು?...." ಯಾರೋ ಒಬ್ಬ ಗುಂಪಿನಿಂದ ಕೂಗಿದ "ಅದೂ ಜನರಿಗೆ ಬಿಟ್ಟ ವಿಚಾರ."

ನಿಂತಿದ್ದ ಹೆಣ್ಣುಮಗಳು ಅಂಜಲಿಲ್ಲ, ಅಳುಕಲಿಲ್ಲ. ಉತ್ತೇಜಿತಳಾದಂತೆ ಮಾತನಾಡಿದಳು –"ನಿಜ, ಅದು ಜನರಿಗೆ ಅಂದರೆ ನಿಮಗೆ ಬಿಟ್ಟ ವಿಚಾರ. ಆದರೆ ಇನ್ನೊಂದು ಪದ್ಧತಿಯಾಗಿ ಮಾಡಿದ ಮನಸ್ಸುಗಳ ಕೈವಾಡ ಇದರ ಹಿಂದೆ ಇದೆ. ನಿಮಗೇ ಬಿಟ್ಟಿದ್ದರೆ ನೀವು ಏನು ಮಾಡುತ್ತಿದ್ದಿರೋ ಗೊತ್ತಿಲ್ಲ. ಆದರೆ ಈ ವಿಚಾರವನ್ನು ನಿಮಗೇ ಬಿಟ್ಟಿಲ್ಲ. ನಿಮ್ಮ ಮೇಲೆ ಹೇರಿದ್ದಾರೆ. ನೀವು ಬೆತ್ತಲೆಯಾಗುವಂತೆ ಮಾಡಿದ್ದಾರೆ. ನೀವು ಬೆತ್ತಲೆಯಾಗಿ ಹೋಗುವಾಗ ಅದನ್ನು ನೋಡಿ ಆನಂದಿಸುವ ಕೊಳಕು ಮನಸ್ಸುಗಳ ವಿಚಾರವಾಗಿ ನೀವು ಯೋಚಿಸಬೇಕು. ಬೆತ್ತಲೆ ಸೇವೆ ಸಲ್ಲಿಸಲೆಂದು ಇಲ್ಲಿಗೆ ಬರುವವರು ಯಾರು? ಯಾವ ವರ್ಗದ ಜನ? ಯಾವ ಜಾತಿಯ ಜನ?...." "ನಿನ್ನದು ಕೊಳಕು ಮನಸ್ಸು, ಮಾತು ನಿಲ್ಲುಸ್ತೀಯೋ ಇಲ್ಲ ನಿನ್ನ ಸೀರೆ ಬಿಚ್ಚಬೇಕೋ?" ಎಂದು ಗುಂಪಿನಲ್ಲಿ ಯಾರೋ ಒಬ್ಬ ಕೂಗಿದ. ಮಾತನಾಡುತ್ತಿದ್ದಾಕೆ ಇದನ್ನು ನಿರೀಕ್ಷಿಸಿದಂತಿತ್ತು. ಆಕೆ ಹೇಳಿದಳು –"ಇಂಥ ಜನ ಇರ್ತಾರೆಂಬುದನ್ನು ತಿಳಿದೇ ನಾವು ಇಲ್ಲಿಗೆ ಬಂದಿದ್ದೇವೆ. ನಮ್ಮವರು ಯಾರೂ ಗದ್ದಲಕ್ಕೆ ಅವಕಾಶ ಮಾಡಿಕೊಡಬಾರದು. ಶಾಂತವಾಗಿ ನಮ್ಮ ಕಾರ್ಯಕ್ರಮ ನಡೆಯಬೇಕು. ಜನರಿಗೆ ತಿಳುವಳಿಕೆ ಕೊಡಬೇಕು. ಗಲಾಟೆ ನಮ್ಮ ಉದ್ದೇಶಕ್ಕೆ ಭಂಗ ತರಲು ಕೆಲವರು ಕಿಡಿಗೇಡಿಗಳು ನಡೆಸುತ್ತಿರುವ ಕೃತ್ಯ. ನಮ್ಮದು ಶಾಂತಿಯ ಮಾರ್ಗ..."

ದ್ಯಾಮವ್ವನಿಗೆ ಎಷ್ಟೋ ಮಾತುಗಳು ತಿಳಿಯಲಿಲ್ಲ, ತನ್ನ ಮಗಳಂತೆಯೇ ಕಾಣುತ್ತಿದ್ದ ಈ ಹುಡುಗಿಯ ಧೈರ್ಯ, ಅವಳು ಮಾತನಾಡುತ್ತಿದ್ದ ರೀತಿ, ಹಾವ ಭಾವ ಇದನ್ನೆಲ್ಲ ಮನಸ್ಸಿನಲ್ಲೇ

ಮೆಚ್ಚುತ್ತ ಮೈಮರೆತಿದ್ದಳು ದ್ಯಾಮವ್ವ.

ಗುಂಪಿನಿಂದ ಯಾರೋ ಒಬ್ಬ ಧಡೂತಿಯ ಆಳು ಎದ್ದು ಬಂದು ಹುಡುಗಿಯ ಹಣೆಗೆ ಭಂಡಾರ ಬಳಿದ. ಮತ್ತೊಬ್ಬ ಬೇವಿನಸೊಪ್ಪು ಹಿಡಿದು ಹತ್ತಿರ ಬಂದ. ಹುಡುಗಿ ಸಿಟ್ಟಿಗೆದ್ದಳು. “ಇದು ಅನಾಗರೀಕತೆ” ಎಂದಳು. ಹಣೆಯ ತುಂಬ ಭಂಡಾರ ಬಳಿದುಕೊಂಡ, ಧಡಿಯ “ಇದು ನಮ್ಮ ಸೇವೆ” ಅಂದ. ಎಲ್ಲವ್ವನಿಗೆ ನೀವೆಲ್ಲ ಹರಕೆ ಸಲ್ಲಿಸೋವರ್‍ಗೆ ನಿಮ್ಮನ್ನೆಲ್ಲ ಬಿಡೋಲ್ಲ” ಎಂದ. ಹತ್ತಾರು ಜನ ಗುಂಪಿನಿಂದ ಎದ್ದು ಬಂದರು. ಹುಡುಗಿಯನ್ನು ಸುತ್ತುವರಿದರು. ಹುಡುಗಿ, “ನಿಮಗೆ ನಾಚಿಕೆ ಆಗೋದಿಲ್ಲವೇ?” ಎಂದು ಚೀರಿದಳು. “ಮುಂದೆ ಹೆಜ್ಜೆ ಇಟ್ರೆ ನೋಡಿ” ಎಂದು ಬೆದರಿಸಿದಳು. ಇದೆಲ್ಲದಕ್ಕೂ ದುಗ್ಗಾಣಿ ಬೆಲೆ ಕೊಡದಂತೆ ಅವರೆಲ್ಲ ಅವಳ ಸುತ್ತ ನೆರೆದರು. ದ್ಯಾಮವ್ವ ಸುತ್ತ ನೋಡಿದಳು. ಜನರೆಲ್ಲ ಕಲ್ಲುಗಳಂತೆ ಕುಳಿತಿದ್ದರು. ದ್ಯಾಮವ್ವನಿಗೆ ರಕ್ತ ಕುದಿಯಿತು. ತನ್ನ ಮಗಳು ರತ್ನಿಗೇ ಇದಾಗುತ್ತದೆ ಎಂದೆನಿಸಿ ತಕ್ಷಣ ತನ್ನ ಗಂಟಿನ ಸಮೇತ ಎದ್ದು ಜನಗಳನ್ನು ತಳ್ಳಿಕೊಂಡು ಹುಡುಗಿಯತ್ತ ನುಗ್ಗಿದಳು: ‘ನಾಮರ್ದ ನನ್‌ಮಕ್ಳಾ, ಹಿಂದುಕ್ಕೆ ಸರೀತೀರೋ ಇಲ್ರಲೇ’ ಎಂದು ಕಿರುಚಿದಳು.

ಉರಿಯುತ್ತಿದ್ದ ಗ್ಯಾಸ್ ಲೈಟನ್ನು ಯಾರೋ ಆರಿಸಿದರು. ಕತ್ತಲೆ ಕಣ್ಣಿಗೆ ಕಟ್ಟಿತು. ಯಾರು ಯಾರನ್ನೋ ತಳ್ಳಿದರು. ನೂಕಾಟ, ತಳ್ಳಾಟ, ಗದ್ದಲ, ಗೊಂದಲ. ಯಾರು ಯಾರನ್ನೋ ಹೊಡೆದರು. ‘ಅಯ್ಯೋ ನನ್ನ ಸೀರೆ ಬಿಡ್ರೋ’ ಹುಡಿಗಿ ಕೂಗಿದಳು. ದ್ಯಾಮವ್ವ ಧ್ವನಿ ಬಂದತ್ತ ನುಗ್ಗಿದಳು. ಯಾರೋ ದ್ಯಾಮವ್ವನನ್ನು ಎಳೆದರು. ಗಂಟು ಕಿತ್ತುಕೊಂಡರು. ಕೊರಳಿಗೆ ಕೈಹಾಕಿ ಸರಕಿತ್ತು ಕೊಂಡರು. ದ್ಯಾಮವ್ವ ಕತ್ತಲಲ್ಲೇ ಯಾವನದೋ ಕೈಹಿಡದು ಜಗ್ಗಿದಳು. ಅವನು ನೆಲಕ್ಕೆ ಬಿದ್ದ. ಅವನನ್ನು ಹೊಸಕಿ ಹಾಕುವಂತೆ ಕಾಲಲ್ಲಿ ತುಳಿದಳು. ಮತ್ತೊಬ್ಬ ನೂಕಿದ. ಯಾವನೋ ದ್ಯಾಮವ್ವನ ಮೊಲೆಗೆ ಕೈಹಾಕಿದ. ‘ಬೇವರ್ಸಿ ಮಗನೇ’ ಎಂದು ದ್ಯಾಮವ್ವ ಕತ್ತಲಲ್ಲೇ ಬಾರಿಸಿದಳು. ಕಲ್ಲುಗಳ ತೂರಾಟ ಆರಂಭವಾಯಿತು. ಹೆಂಗಸರು, ಮಕ್ಕಳು ಕೂಗಾಡುವುದು, ಕಿರುಚಾಡುವುದು, ರೋದಿಸುವುದು ಎಲ್ಲ ಕತ್ತಲ ಗರ್ಭದಿಂದ ಹೊಮ್ಮಿದವು. ದ್ಯಾಮವ್ವ ಸರಕ್ಕಾಗಿ, ಗಂಟಿಗಾಗಿ ತಡಕಾಡಿದಳು. ನೆಲದ ಮೇಲೆಲ್ಲ ಕೈಚಾಚಿ ತಡಕಾಡುವಾಗ ಯಾರೋ ನೂಕಿ ನೆಲಕ್ಕೆ ಬಿದ್ದಳು. ಹತ್ತಾರು ಕಾಲುಗಳನ್ನು ತನ್ನನ್ನು ತುಳಿಯುತ್ತಿವೆಂದು ಭಾಸವಾಗಿ ಥಟ್ಟನೆ ಕಷ್ಟಪಟ್ಟು ಮೇಲೆದ್ದಳು. ದೂಕಿಕೊಂಡು ಬರುತ್ತಿದ್ದವದನ್ನು ತನ್ನ ಶಕ್ತಿಬಿಟ್ಟು ತಳ್ಳಿ ಗುಂಪಿನಿಂದ ಹೊರಹೋಗಲು ಜಾಗ ಹುಡುಕಿದಳು. ಗುಂಪಿನ ಕೊನೆ ಮೊದಲೇ ತಿಳಿಯಲಿಲ್ಲ. ‘ಅಯ್ಯೋ ನನ್ ಸರ’ ‘ನನ್ ವಾಲೆ’ ‘ಅಯ್ಯಯ್ಯೋ ನನ್ ಸೀರೆ ಬಿಡೋ’. ಯಾರ ಕೂಗುಗಳೋ, ಎಲ್ಲಿಂದ ಹೊರಡುತ್ತಿವೆಯೋ...

‘ಪೊಲೀಸ್ರು ಬಂದ್ರು’ ಎಂದು ಯಾರೋ ಕೂಗಿದರು. ನುಗ್ಗಾಟ ಮತ್ತೆ ಆರಂಭವಾಗಿತ್ತು. ಲಾಠಿ ಏಟುಗಳು ಬೀಳುವುದು ದ್ಯಾಮವ್ವನಿಗೆ ಕೇಳಿಸುತ್ತಿತ್ತು. “ಅಯ್ಯೋ, ಆಪ್ಪೊ, ಸತ್ನೆಪ್ಪೊ...” ಜನ ದಿಕ್ಕೆಟ್ಟು ಓಡುತ್ತಿದ್ದರು. ಕತ್ತಲೆಯಲ್ಲಿ ಯಾವುದು ದಿಕ್ಕು, ಯಾವುದು ದೆಸೆ? ದ್ಯಾಮವ್ವನ ಕಾಲಲ್ಲಿದ್ದ ಕೆರಗಳು ಎಲ್ಲಿಯೋ ಕಳಚಿಕೊಂಡಿದ್ದವು. ಸರ, ಗಂಟು ಹೋದ ಮೇಲೆ ಕೆರಗಳಿಗೆ ಹುಡುಕಾಡುವುದು ದ್ಯಾಮವ್ವನಿಗೆ ಬೇಕಾಗಿರಲಿಲ್ಲ, ಹುಡುಕುತ್ತ ಕೂರುವಂತೆಯೂ ಇರಲಿಲ್ಲ. ಪೊಲೀಸರು ಜನರನ್ನು ದನಬಡಿದಂತೆ ಬಡಿಯುತ್ತಿದ್ದಾರೆ. ಓಡಬೇಕು. ಕಾಲು ಓಡಿದಲ್ಲಿಗೆ, ಜನ

ದಿಕ್ಕಾಪಾಲಾಗಿ ಓಡಿದರು. ದ್ಯಾಮವ್ವ ಶಕ್ತಿಯನ್ನೆಲ್ಲ ಕೂಡಿಸಿಕೊಂಡು ಓಡಿದಳು.

ಭಾಗ - 5

ಬೆಳದಿಂಗಳು ಚೆಲ್ಲಿಕೊಂಡಿತ್ತು. ಎಲ್ಲವ್ವನ ಗುಡ್ಡದ ನೆತ್ತಿಯ ಮೇಲಿನ ಹಾಸುಗಲ್ಲಿನ ಮೇಲೆ ಕುಳಿತುಕೊಂಡು ನಿರಾಸಕ್ತಿಯಿಂದ ನೋಡುತ್ತಿದ್ದಳು ದ್ಯಾಮವ್ವ. ಗಾಳಿ ತಣ್ಣಗೆ ಬೀಸುತ್ತಿತ್ತು. ಮಂಜು ಸಣ್ಣಗೆ ಬೀಳುತ್ತಿತ್ತು. ತಂಪಡರುತ್ತಿತ್ತು. ಬೆಳದಿಂಗಳ ಬೆಳಕಲ್ಲಿ ಚಂದ್ರಾವತಿ ನದಿ, ಮರ, ಗಿಡ, ಹೊಲ, ಜಾತ್ರೆಯ ಟೆಂಟುಗಳು, ಅಲ್ಲಲ್ಲಿ ಮಿಣುಕುವ ಬೆಳಕು - ಎಲ್ಲ ಅಸ್ಪಷ್ಟವಾಗಿ ಕಾಣಿಸುತ್ತಿದ್ದವು. ಎಲ್ಲ ಸದ್ದುಗಳೂ ಅಡಗಿದಂಥ ಮೌನವನ್ನು ಎಲ್ಲವ್ವನ ಗುಡಿಯ ವಿದ್ಯಮಾನಗಳು ಕಲಕುತ್ತಿದ್ದವು. ಗುಡಿಯ ಒಳಗೆ ನಡೆಯುವುದೆಲ್ಲ ದ್ಯಾಮವ್ವನಿಗೆ ಕಾಣುತ್ತಿತ್ತು. ಹರಕೆ ಸಲ್ಲಿಸುವವರು ಸಲ್ಲಿಸುತ್ತಿದ್ದರು. ಜೋಗತಿಯರು ಹಾಡುತ್ತಿದ್ದರು, ಕುಣಿಯುತ್ತಿದ್ದರು. ಬೇವಿನ ಸೀರೆ ಉಟ್ಟವರು ಸಾಲುಸಾಲಾಗಿ ಗುಡಿಯನ್ನು ಪ್ರದಕ್ಷಿಣೆ ಮಾಡುತ್ತಿದ್ದರು. ಕಿಂದರಿಯ ಸದ್ದು, ಉಧೋ ಉಧೋ ಸದ್ದು, ತಮಟೆಯ ಸದ್ದು, ಗೆಜ್ಜೆಯ ಸದ್ದು, ಹೆಜ್ಜೆಯ ಸದ್ದು ಒಂದರೊಳಗೊಂದು ಕಲೆಸಿಕೊಂಡು ಬಂದು ಕಿವಿಯನ್ನು ತುಂಬುತ್ತಿದ್ದವು. ಸದ್ದು, ನಾದ, ದೃಶ್ಯ ಬೇಸರವಾಗಿ ದ್ಯಾಮವ್ವ ಗುಡ್ಡದ ಕೆಳಗಿನ ದೃಶ್ಯಗಳಿಗೆ ಮುಖಮಾಡಿದಳು. ಹಿಟ್ಟು ಚೆಲ್ಲಿದಂಥ ಬೆಳದಿಂಗಳು, ಗಿಡಮರಗಳ ನೆರಳು, ಅಲ್ಲಿಯೂ ಮನಸ್ಸು ತಂಗಿದಂತೆ ಕಾಣಲಿಲ್ಲ. ಯಾವುದರಲ್ಲೂ ಆಸಕ್ತಿ ಮೂಡಲಿಲ್ಲ.

ಇಡೀ ದೇಹ ಭಾರವಾಗಿತ್ತು. ಜಡತೆ ಮನಸ್ಸಿಗೂ ಸುತ್ತಿಕೊಂಡಿತ್ತು. ಕಣ್ಣು ಕಂಡದ್ದನ್ನೆಲ್ಲ ಗ್ರಹಿಸಲು, ಒಳಗೆ ತೆಗೆದುಕೊಳ್ಳಲು ನೋಡಿದಳು. ತೆರೆದ ಆಕಾಶದ ಕೆಳಗೆ ಕೂತಿದ್ದಳು ದ್ಯಾಮವ್ವ. ಮಂಜು ಸುರಿಯುತ್ತಿತ್ತು. ಹಾಸುಗಲ್ಲು ತಂಪಾದಂತೆ ಭಾಸವಾಗುತ್ತಿತ್ತು. ಮೈಯೊಳಗೆ ಮಂಜು ನುಗ್ಗಿದಂತೆ, ಥಣ್ಣಗೆ ಒಳಗೆಲ್ಲ ಏನೋ ಹರಿದಾಡಿದಂತೆ. ಮೈಮೇಲಿನ ಬಟ್ಟೆಯೇ ಇಲ್ಲವಾದಂತೆ. ಬಟಾ ಬಯಲಿನಲಿ ಏಕಾಂಗಿಯಾಗಿ ಕೂತಂತೆ. ದ್ಯಾಮವ್ವನಿಗೆ ತಟಕ್ಕನೆ ಮಗಳು ನೆನಪಾದಳು. ಮನೆಯ ಅಂಗಳದಲ್ಲಿ ಸುರಿವ ಬೆಳದಿಂಗಳಲ್ಲಿ ಹಿಂಗೆ ಕುಂತು ಮೈಮರೆತಿದ್ದರೆ ರತ್ನಿಯೇ ಎಚ್ಚರಿಸುತ್ತಿದ್ದಳು: "ದೆವ್ವ ಬಡಿದಂಗೆ ಯಾಕಂಗ್ ಕುಂತಿದೀಯಾ. ಒಳಿಕ್ಕೆ ಬಾ. ಥಂಡಿ ಆಕ್ಕತಿ". ಬಿಸಿಬಿಸಿ ಮುದ್ದೆ, ಅವರೆ ಕಾಳಿನ ಸಾರು ಬಡಿಸುತ್ತಿದ್ದಳು. ಖಾರ ನಾಲಿಗೆಯಿಂದ ಆರಂಭವಾಗಿ ನರನರದಲ್ಲಿ ಹರಿದಾಡಿದರೆ ಹೊರಗೋಡಿ ಸುರಿಯುವ ಮಂಜಿಗೆ ಮೈಯೊಡ್ಡಬೇಕೆನಿಸುತ್ತಿತ್ತು. ರತ್ನಿ ಇನ್ನು ಬರುವುದಿಲ್ಲ. ದಾಸಪ್ಪನ ಜೊತೆಯಲ್ಲಿ ಸುಖವಾಗಿ ಇರುವ ರತ್ನಿ ಇನ್ನು ಯಾಕೆ ಬಂದಾಳು. ಬಂದರೂ ಒಂದು ದಿನದ ಮಟ್ಟಿಗೆ ಹೆತ್ತವ್ವನ ಮಾರಿ ನೋಡಲು ಬಂದಾಳು. ಮತ್ತೆ ದಾಸಣ್ಣನ ಜೊತೆಯಲ್ಲಿ ಹೊರಟು ಹೋಗುತ್ತಾಳೆ. ತಾನು ಒಬ್ಬಂಟಿ. ಊರು, ಹೊಲ, ಮನೆ, ದನ, ಕರು, ಎಲ್ಲ ಇದ್ದೂ ತಾನು ಒಬ್ಬಂಟಿ. ರತ್ನಿ ಮನೆಯಲ್ಲಿದ್ದಾಗ ಒಂದು ದಿನವೂ ತನಗೆ ಹಿಂಗನಿಸುತ್ತಿರಲಿಲ್ಲ. ಊರಿಗೆ ಒಂಟಿ ದೆವ್ವದ ಹಾಗೆ ಹಿಂದಿರುಗುವುದು, ಮನೆಯಲ್ಲಿ ಒಂಟಿಯಾಗಿ ಬರುವುದು, ಕಾಯಿಲೆ ಕಸಾಲೆ ಏನೇ ಬಂದರೂ ತಾನು ಒಬ್ಬಂಟಿ. 'ಅಯ್ಯೋ, ತಾಯಿ ಎಲ್ಲವ್ವ, ಎಂಥ ಗತಿ ಬಂತಲ್ಲವ್ವಾ' ಎಂದು ಗಟ್ಟಿಯಾಗೇ ಒದರಿದಳು ದ್ಯಾಮವ್ವ. ಅವಳಿಗೆ ದುಃಖ ಉಮ್ಮಳಿಸಿ ಬಂದು ಬಿಕ್ಕಿ ಬಿಕ್ಕಿ ಅಳತೊಡಗಿದಳು.

ಗುಡಿಯ ಒಳಗಿನ ಗದ್ದಲ ನಡೆದೇ ಇತ್ತು. ಬೇವಿನ ಸೊಪ್ಪು ಸುತ್ತಿಕೊಂಡು ಗುಡಿಯನ್ನು ಸುತ್ತು ಹಾಕುವವರು ಇನ್ನೂ ಸುತ್ತುತ್ತಿದ್ದರು. ಪೂಜಾರಿಯ ಗಂಟೆಯ ಸದ್ದು, ಮಂಗಳಾರತಿಯ ಸದ್ದು. ದ್ಯಾಮವ್ವ ನಿಧಾನಕ್ಕೆ ಕಾಲು ಚಾಚಿದಳು. ಹಾಸುಗಲ್ಲಿನ ಮೇಲೆ ದೇಹವನ್ನು ಚಾಚಲು ಮನಸ್ಸಾಯಿತು. ಹಾಗೆಯೇ ಹಿಂದಕ್ಕೊರಗಿ ಮಲಗಿದಳು. ಹಾಸಲಿಲ್ಲ, ಹೊದೆಯಲಿಲ್ಲ. ತಲೆಗೆ ಕೈಕೊಟ್ಟು ಮಲಗಿದಳು. ಇಡೀ ಆಕಾಶ ಕಾಣುತ್ತಿತ್ತು. ಚಂದ್ರ ಕಾಣುತ್ತಿದ್ದ. ತುಣುಕು ತುಣುಕು ಮೋಡಗಳು ಕಾಣುತ್ತಿದ್ದವು. ಅಲ್ಲಲ್ಲಿ ಚಿಕ್ಕೆಗಳು ಕಾಣುತ್ತಿದ್ದವು. ರೆಪ್ಪೆಗಳು ಭಾರವಾಗಿ ನಿಧಾನಕ್ಕೆ ಮುಚ್ಚಿಕೊಂಡವು....

'ಎಳೀರೋ, ಎಳೀರೋ, ನನ್ನ ಸೀರೆ ಎಳೀತೀರೆನೋ, ಎಳಿರೋ, ನೋಡ್ತೀನಿ' ಎಂದು ಆಕೆ ಚೀರುತ್ತಿದ್ದಳು. ಹಣೆತುಂಬ ಬಂಡಾರ ಬಳಿದುಕೊಂಡವನೊಬ್ಬ ತನ್ನ ತೋಳನ್ನು ಕುಣಿಸುತ್ತಾ ಬಂದ. ಈ ಮುಖವನ್ನು ಎಲ್ಲೋ ನೋಡಿದಂತಿದೆ. ಈ ಧಡಿಯನನ್ನು ನೋಡಿದಂತಿದೆ. ಹಿಂದೆಯೇ ಇನ್ನೊಬ್ಬ ಬಂದ. ಅವನ ಹಿಂದೆ ಮತ್ತೊಬ್ಬ. ರಕ್ತ ಬೀಜಾಸುರರು. ಎಲ್ಲ ಹಣೆಗಳಲ್ಲೂ ಬಂಡಾರ. ಭಯ ಹುಟ್ಟಿಸುವ ಮುಖಗಳು. ನೋಡುತ್ತ ಹೋದರೆ, ಮೊದಲು ಕಂಡವನ ಮುಖವೇ. ಎಲ್ಲ ಮುಖಗಳೂ ಒಂದೇ. ಎಲ್ಲಾ ಹಣೆಗಳೂ ಒಂದೇ. ಕಣ್ಣುಗಳು ಕೆಂಡದ ಉಂಡೆಗಳು. ನಿಗಿ ನಿಗಿ ಹೊಳೆಯುತ್ತಿದ್ದವು. ಬಂದವನು ಸೀರೆಗೆ ಕೈ ಹಚ್ಚಿದ. ರಪ ರಪ ಎಳೆದ. ಇನ್ನೇನು ಸೀರೆ ಬಿಚ್ಚಿಯೇ ಹೋಗುತ್ತದೆ.... ಮತ್ತೆ ಎಳೆದ. ಎಳೆದ. ಸೀರೆ ಮುಗಿಯುತ್ತಿಲ್ಲ, ಅದು ರಾಶಿ ಬೀಳುತ್ತಿದೆ. ಈ ರಾಶಿಯ ಮೇಲೆ ನಿಂತು ಆಕೆ ಗಹಗಹಿಸಿ ನಗುತ್ತಾಳೆ. "ನಾಮರ್ದ ನನ್ ಮಕ್ಕಾ ಎಳೀರೋ.... ಎಳೀರಿ"..... ಎಳೆಯುತ್ತಾರೆ. ಬಿಚ್ಚುತ್ತಾರೆ. ಒಬ್ಬ ಮತ್ತೊಬ್ಬ ನೂರಾರು ರಕ್ತಬೀಜಾಸುರರು. ಸೆಳೆದ ಸೀರೆ ರಾಶಿ ಬೀಳುತ್ತದೆ. ರಾಶಿ ಗುಡ್ಡವಾಗುತ್ತದೆ. ಗುಡ್ಡ ಬೆಟ್ಟವಾಗುತ್ತದೆ. ಬೆಟ್ಟದ ಮೇಲೆ ನಿಂತು ಕರೆಯುತ್ತಾಳೆ ಚಾಮುಂಡಿ, "ಎಳೀರೋ, ಎಳೀತೀರಾ ಎಳಿರೋ.... ನನ್ನ ಸೀರೆ ಎಳೀತೀರಾ?". ಇದು ಚಾಮುಂಡಿಯ ಮುಖವೇ? ಎಲ್ಲವ್ವನ ಮುಖವೇ? ಎಲ್ಲಿಯೋ ಕಂಡಮುಖ. ಹತ್ತಿರದಿಂದ ನೋಡಿದ ಮುಖ. ಪರಿಚಿತ ಮುಖ. ಆಪ್ತ ಮುಖ. ಅಭಯದ ಮುಖ. ಯಾರ ಮುಖ? ಬೆಳಿಗ್ಗೆ ಕಂಡ ಹುಡುಗಿಯ ಮುಖ? "ಮಹನೀಯರೇ, ಮಹಿಳೆಯರೇ...." ಎಂದು ಮಾತನಾಡುತ್ತಿದ್ದ ಹುಡುಗಿಯ ಮುಖ? ಇನ್ನೂ ಹತ್ತಿರದ ಮುಖ. ರತ್ನಿಯ ಮುಖ. ಸೀರೆಯ ಬೆಟ್ಟ ಬೆಳೆಯುತ್ತಿದೆ. ಮುಗಿಲು ಮುಟ್ಟುತ್ತಿದೆ. ಚಂದ್ರನನ್ನು ಮುಟ್ಟುತ್ತಿದೆ. ಚುಕ್ಕೆಗಳನ್ನು ಮುಟ್ಟುತ್ತಿದೆ. ಸೀರೆಯನ್ನು ಸೆಳೆಯುವವರೆಲ್ಲ ಇರುವೆಗಳಂತೆ ಕಾಣುತ್ತಿದ್ದಾರೆ. ಅವರು ಬಿದ್ದು ಒದ್ದಾಡುವುದು ಕಾಣಿಸುತ್ತಿದೆ. ಸೀರೆ ರಾಶಿ ರಾಶಿ ಬೀಳುತ್ತಿದೆ. ಬೆಟ್ಟ ಬೆಟ್ಟ ಬೆಳೆಯುತ್ತಿದೆ....

ದ್ಯಾಮವ್ವನಿಗೆ ಥಟ್ಟನೆ ಎಚ್ಚರವಾಯಿತು. ಧಡಕ್ಕನೆ ಎದ್ದು ಕೂತಳು. ಮೈಯೆಲ್ಲ ಬೆವರಿತ್ತು. ಸುತ್ತ ನೋಡಿದಳು. ಥಣ್ಣಗೆ ಹರಿಯುವ ಚಂದ್ರಾವತಿ, ಸುರಿಯುವ ಬೆಳದಿಂಗಳು. ಗುಡಿಯ ಗದ್ದಲ. ಬೇವಿನ ಸೊಪ್ಪು ಸುತ್ತಿಕೊಂಡು ಗುಡಿಸುತ್ತುವವರು. ಇದ್ಯಾವುದೂ ಬೇಡವೆನಿಸಿತು. ಮಗಳು ರತ್ನಿ, ದಾಸಪ್ಪ ಬಂದರೇ.... ಮೈಯಲ್ಲಿ ಉಲ್ಲಾಸ ಮೂಡಿದಂತಾಗಿ, ಮನತೆರೆದಳು. ಕಣ್ಣಗಲಿಸಿದಳು.

●

ಪ್ರೀತಿ ಇಲ್ಲದ ಮೇಲೆ

ಪ್ರೀತಿ ಇಲ್ಲದ ಮೇಲೆ
ಹೂವು ಅರಳುವುದಿರಲಿ ಸಾರ್
ಗಿಡ ಹುಟ್ಟೀತು ಹೇಗೆ
ಮೊಳಕೆಯೊಡೆದೀತು ಹೇಗೆ
ಚಂದ್ರನ ಬೆಳದಿಂಗಳಂತೆ ತಂಪಾದ
ನಿಮ್ಮ ವಾತ್ಸಲ್ಯ ದೊರಕೀತು ಹೇಗೆ.

ಆಗಾಗ್ಗೆ ಶಿವ, ತಾನು ಬರಲಾಗದಿದ್ದುದಕ್ಕೆಂದೇ
ತನ್ನ ಪ್ರತಿರೂಪವಾಗಿ ನಿಮ್ಮಂಥವರನ್ನು, ನಿಮ್ಮನ್ನು
ಕಳಿಸಬೇಕೆಂದು ಅವನಿಗೆ ಹೊಳೆದೀತು ಹೇಗೆ?

ಬತ್ತಿ ಹೋಗುತ್ತಿರುವ ಮಾನವೀಯತೆಯ ಸೆಲೆಯನ್ನು
ಮತ್ತೆ ಚಿಮ್ಮಿಸಬಯಸುವ ನಿಮ್ಮ ಒಲುಮೆ
ಅರ್ಥವಾದೀತು ಹೇಗೆ

ಮಗುವಿಗೆ ತಾಯಿ ಮಮತೆ ದೊರೆತಂತೆ
ನಾವೆಲ್ಲಾ ನಿಮ್ಮ ವಾತ್ಸಲ್ಯ ಧಾರೆಯಲಿ
ಮಿಂದೆವು ಹೇಗೆ
(ಪ್ರಶಸ್ತಿ ಗರಿಗೆದರಿದರೂ ಮಗುವಿನ ಮುಖದ ಹಾಗೆ)

ಸಧ್ಯ ಹೇಗೆ ಎಂದು ಪ್ರಶ್ನಿಸುವುದನ್ನು ಬಿಟ್ಟು
ನಿಮ್ಮ ಮಂದ ಹಾಸದ ಮುಖ ನೋಡುತ್ತಾ
ಬದುಕೋಣ ಸಾವಿರ ಕಾಲ ಹೀಗೆ
ನಿಮ್ಮ ಅಸ್ಖಲಿತ ವಾಣಿಯ ಕವಿಯ ಗುಹಾಂತರ
ದಲಿ ಕೇಳುತ್ತಾ ಒರತೆ ಬತ್ತದ ಹಾಗೆ

ಬದುಕೇ ನಿನಗೆ ಅನಂತ ವಂದನೆ
ನಮ್ಮ ಗುರುಗಳಿರಲಿ ಹೀಗೇ ಹೀಗೇ

ಡಾ|| ಎಸ್. ವಿ. ಪ್ರಭಾವತಿ

(ಡಾ|| ಜಿ.ಎಸ್. ಎಸ್.ರವರಿಗೆ ಪಂಪ ಪ್ರಶಸ್ತಿ ಬಂದ ಸಂದರ್ಭಕ್ಕೆ ಶಿಷ್ಯಳ ಕಿರುಕಾಣಿಕೆ)

ಇವರು ಹೀಗೆಯೇ ಇರುತ್ತಾರೆ



ರಾಮಚಂದ್ರಗೌಡ: ಜೀವನೋತ್ಸಾಹದ ರೇಷ್ಮೆ ಉದ್ಯಮಿ

ಶೂದ್ರಶ್ರೀನಿವಾಸ್

ಕೆಲವರು ತುಂಬ ಕ್ರಿಯಾಶೀಲರಾಗಿರುತ್ತಾರೆ. ಜೀವನೋತ್ಸಾಹದಿಂದ ಏನು ಕೆಲಸವನ್ನು ಬೇಕಾದರೂ ಮಾಡಬಲ್ಲೆ ಎಂಬ ಚೈತನ್ಯ ಅವರಲ್ಲಿ ತುಂಬಿರುತ್ತದೆ. ಅಂಥವರನ್ನು ಕುರಿತು ಬರೆಯಲು ಬೇಕಾದಷ್ಟು ಮಾಹಿತಿ ಇರುತ್ತದೆ. ಬರೆದ ಶಬ್ದಗಳು ಕೃತಕವಾಗಿ ಒದ್ದಾಡುವುದಿಲ್ಲ ಎಂಬುದು ಗೊತ್ತಿರುತ್ತದೆ. ಆದರೆ ಬರೆಯಲು ಕೂತಾಗ ಹೇಗೆ ಪ್ರಾರಂಭಿಸುವುದು ಮತ್ತು ಎಂಥ ಚಿತ್ರಣವನ್ನು ಕೊಡುವುದು ಎಂಬ ಸಮಸ್ಯೆ ಕಾಡತೊಡಗುತ್ತದೆ.

ರಾಮಚಂದ್ರಗೌಡರನ್ನು ಕುರಿತು ಬರೆಯಲು ತೊಡಗಿದಾಗ ಇಂಥ ಸಮಸ್ಯೆಯನ್ನು ಮೂರು ನಾಲ್ಕು ದಿವಸದಿಂದ ಎದುರಿಸಿದ್ದೇನೆ. ಒಂದು ದೃಷ್ಟಿಯಿಂದ ಇವರು ಪರಿಚಯವಾಗಿದ್ದೇ ಆರೇಳು ತಿಂಗಳ ಹಿಂದೆ. ಆದರೆ ಎಷ್ಟೋ ವರ್ಷಗಳಿಂದ ಇವರ ಜೊತೆ ಬದುಕುತ್ತಿದ್ದೇನೆ ಎಂಬ ಭಾವನೆ ಗಾಢವಾಗಿ ಬೆಳೆದು ನಿಂತಿದೆ. ಹಾಗೆ ನೋಡಿದರೆ ಮಾಜಿ ಸಚಿವರಾದ ಎಂ. ಚಂದ್ರಶೇಖರ್‌ರವರು ಮತ್ತು ನನ್ನ ಅಣ್ಣ ನಂಜಪ್ಪರೆಡ್ಡಿಯವರು ಕಳೆದ ಎರಡು ವರ್ಷಗಳಿಂದ ಗೌಡರ ಗುಣಗಾನ ಮಾಡುತ್ತ ಭೇಟಿಯಾಗಲು ಹೇಳಿದ್ದರು. ನನ್ನ ನಾನಾ ರೀತಿಯ ಕೆಟ್ಟ ಕೆಲಸಗಳಲ್ಲಿ ಭೇಟಿಯಾಗಲು ಆಗಿರಲಿಲ್ಲ. ಸುಮ್ಮನೆ ಮುಂದೂಡುತ್ತ ಬಂದಿದ್ದೆ. ಈ ಮಧ್ಯೆ ಒಮ್ಮೆ ದೂರವಾಣಿಯ ಮೂಲಕ ಮಾತಾಡಿದ್ದೆ. ಭೇಟಿಯಾಗುವೆನೆಂದು ಹೇಳಿದ್ದೆ. ಆದರೆ ಭೇಟಿಯಾಗಿರಲೇ ಇಲ್ಲ.

ಕೆಲವು ತಿಂಗಳುಗಳ ಹಿಂದೆ ಒಂದು ಮಧ್ಯಾಹ್ನ ವೈ.ಕೆ. ರಾಮಯ್ಯನವರು ರೇಷ್ಮೆ ಉದ್ಯಮಕ್ಕೆ ಸಂಬಂಧಿಸಿದಂತೆ ಪತ್ರಿಕಾಗೋಷ್ಠಿಯನ್ನು ಮುಗಿಸಿಕೂತಿದ್ದರು. ಅವರೊಡನೆ ಕೆಲವರು ಇದ್ದರು ರಾಮಯ್ಯನವರ ಜೊತೆ ಮಾತಾಡುವಾಗ, ರಾಮಚಂದ್ರಗೌಡರು ತಮ್ಮ ಪರಿಚಯ ಮಾಡಿಕೊಂಡರು. ನನ್ನ ಅಣ್ಣ ಮತ್ತು ಎಂ. ಚಂದ್ರಶೇಖರ್‌ರವರು ಹೇಳುತ್ತಿದ್ದ ಗೌಡರು ಇವರೇ ಎಂದು ತಿಳಿದು ಖುಷಿಯಾಯಿತು. ಇದಾದ ಮೇಲೆ ವಾರಕ್ಕೆ ಮೂರುನಾಲ್ಕು ಬಾರಿಯಾದರೂ ಸಂಪರ್ಕವಿಟ್ಟುಕೊಳ್ಳುವ ಅವಕಾಶ ದೊರಕಿತ್ತು. ಇದಕ್ಕೆ ಮುಖ್ಯ ಕಾರಣ: ಕೇಂದ್ರ ಸರ್ಕಾರ ರೇಷ್ಮೆಗೆ ಸಂಬಂಧಿಸಿದಂತೆ ತೆಗೆದುಕೊಂಡ ನಿಲುವಿನಿಂದ

ಜನರೊಚ್ಚಿಗೇಳುತ್ತಿದ್ದರು. ಆದನ್ನು ಅತ್ಯಂತ ಸಂಘಟನಾ ರೂಪದಲ್ಲಿ ನಿಯಂತ್ರಿಸಲು ಪ್ರಯತ್ನಿಸುತ್ತಿದ್ದವರು ವೈ.ಕೆ.ಆರ್ ಮತ್ತು ರಾಮಚಂದ್ರಗೌಡರು. ಈ ಸಂದರ್ಭದಲ್ಲಿ ರಾಮಚಂದ್ರಗೌಡರ 'ಮಿಷನರಿ ಝೀಲ್'ನ್ನು ಕಂಡು ಚಕಿತಗೊಂಡಿದ್ದೆ. ಇಂಥ ಗಾಢತೆ ಇದ್ದುದರಿಂದಲೇ ಅನ್ನಿಸುತ್ತದೆ ಅವರ ರೇಷ್ಮೆ ಮೊಟ್ಟೆ ತಯಾರಿಕೆ ಸಂಸ್ಥೆ 'ವಿ.ಎಸ್.ಎಸ್.ಪಿ.ಸಿ.' ಅತ್ಯಂತ ಚೆನ್ನಾಗಿ ಬೆಳೆದಿರುವುದು.

ನಲವತ್ತೆರಡು ವರ್ಷಗಳ ಎಂ. ರಾಮಚಂದ್ರಗೌಡರು ಒಟ್ಟು ಅನುಭವವನ್ನು ತಾಳ್ಮೆಯ ತೆಕ್ಕೆಯೊಳಗೆ ತೆಗೆದುಕೊಂಡು ಯೋಚಿಸುವ ಕ್ರಮ ಅಪರೂಪವಾದದ್ದು. ಈ ಕಾರಣಕ್ಕಾಗಿ ಅವರಿಗೆ 1996-97ನೇ ಸಾಲಿನ ಪ್ರತಿಷ್ಠಿತ 'ಸೇಠ್ ಬಲದೇವ್ ಷಾ' ಪ್ರಶಸ್ತಿ ಬಂದಿದೆ. ಇದನ್ನು ಪ್ರತಿವರ್ಷ ಕೇಂದ್ರ ರೇಷ್ಮೆ ಮಂಡಳಿಯ ಮೂಲಕ ಕೊಡುವಂಥದ್ದು. ಇಂಥದೇ ಅಪರೂಪದ ಪ್ರಶಸ್ತಿಯನ್ನ ಗೌಡರ ತಂದೆ ಎ. ಮುನಿನಂಜಪ್ಪನವರು 1937ರಲ್ಲಿ ರೇಷ್ಮೆಯಲ್ಲಿ ಮಿಶ್ರತಳಿಗೂಡಿನ ಉತ್ಪಾದನೆಗಾಗಿ ಮೈಸೂರಿನ ಮಹಾರಾಜರಿಂದ ಚಿನ್ನದ ಪದಕವನ್ನು ಪಡೆದವರು. ಇದರಿಂದ ಸ್ಫೂರ್ತಿಗೊಂಡು 1942ರಲ್ಲಿ ಬೆಂಗಳೂರಿನ ಹೊಸ ಕೋಟೆ ತಾಲ್ಲೂಕಿನ ಇಟ್ಟಸಂದ್ರ ಗ್ರಾಮದಲ್ಲಿ ಮಿಶ್ರತಳಿ ಮೊಟ್ಟೆಯನ್ನು ತಯಾರು ಮಾಡುವ ಸಂಸ್ಥೆಯನ್ನು ಪ್ರಾರಂಭಿಸಿದರು. 46 ವರ್ಷ ಅದನ್ನು ಕಾಪಾಡಿ, ಬೆಳೆಸಿ, ಸುತ್ತಮುತ್ತಲಿನ ರೈತರನ್ನು ಬೆಳೆಸಿ ಕೊನೆಗೆ ತಮ್ಮ ಕಿರಿಯ ಮಗನ ಕೈಗೆ ಕೊಟ್ಟರು.


ಗೌಡರ ತಂದೆ ಎ. ಮುನಿನಂಜಪ್ಪನವರು

ರಾಮಚಂದ್ರಗೌಡರು 1988ರಲ್ಲಿ ವಿ.ಎಸ್.ಎಸ್.ಪಿ.ಸಿ. ಯನ್ನು ಬೆಂಗಳೂರಿಗೆ ತಂದು ಬಸವನಗುಡಿಯಲ್ಲಿ ಆದರ ಕೇಂದ್ರ ಸ್ಥಾನಕ್ಕೆ ಜೀವಕೊಟ್ಟರು. ಈ ಹತ್ತು ವರ್ಷಗಳಲ್ಲಿ ಶ್ರೀ ವೇಣುಗೋಪಾಲಸ್ವಾಮಿ ರೇಷ್ಮೆ ಮೊಟ್ಟೆ ಉತ್ಪಾದಕ ಸಂಸ್ಥೆಯು ಕರ್ನಾಟಕದ ಏಳುಸಾವಿರಕ್ಕೂ ಹೆಚ್ಚಿನ ರೇಷ್ಮೆ ಕೃಷಿಕರು ಅಭಿಮಾನದಿಂದ ಮಾತಾಡಿಕೊಳ್ಳುವ ಸಂಸ್ಥೆಯಾಗಿದೆ. ಈ ಸಂಸ್ಥೆ ಬೆಂಗಳೂರಿಗೆ ಬರಲು ತಾಂತ್ರಿಕವಾಗಿ ತೊಂದರೆಯಿದ್ದರೂ ಅದನ್ನು ಪರಿಪಡಿಸಿ ಬರುವಂತೆ ಸಹಕರಿಸಿದವರು ಕ್ರಿಯಾಶೀಲ ರಾಜಕಾರಣಿ ಸಿ. ನಾರಾಯಣಸ್ವಾಮಿಯವರು. ನಾರಾಯಣಸ್ವಾಮಿಯವರು ಆಗ ಜಿಲ್ಲಾ ಪರಿಷತ್ತಿನ ಅಧ್ಯಕ್ಷರಾಗಿ ತಮ್ಮ ಉತ್ತಮ ಕೆಲಸದಿಂದ ಸುದ್ದಿಯಲ್ಲಿದ್ದವರು. ನಾರಾಯಣಸ್ವಾಮಿಯವರನ್ನು ರಾಮಚಂದ್ರಗೌಡರು ಯಾವಾಗಲೂ ಕೃತಜ್ಞತಾಭಾವದಿಂದ ಸ್ಮರಿಸಿಕೊಳ್ಳುತ್ತಿರುತ್ತಾರೆ. ಸಾಹಿತ್ಯ ಕಲೆಯಬಗ್ಗೆ ಅಭಿರುಚಿಯುಳ್ಳ ಇವರು ಬದುಕನ್ನು ಕಲಾತ್ಮಕವಾಗಿ ನೋಡಬಲ್ಲವರು.

ಎಲ್ಲರ ಜೊತೆ ನಗುನಗುತ್ತ ತಮ್ಮ ಸಂಸ್ಥೆಯನ್ನು ಗೌಡರು ಬೆಳೆಸಿದ್ದಾರೆ. ತಮ್ಮ ತಂದೆ 1937ರಲ್ಲಿ ಮಹಾರಾಜರಿಂದ ಚಿನ್ನದ ಪದಕವನ್ನು ಪಡೆದರು. ಅದರಂತೆ ಅತ್ಯುತ್ತಮ ರೇಷ್ಮೆ ಕೃಷಿಕರು ಪ್ರತಿವರ್ಷ ಚಿನ್ನದ ಪದಕ ಪಡೆಯುವಂತಾಗಲಿ ಎಂದು ತುಂಬ ವೈಜ್ಞಾನಿಕ ಮಾದರಿಯಲ್ಲಿ ಗುರ್ತಿಸಲು ತೊಡಗಿದ್ದಾರೆ. ಕಳೆದ ವರ್ಷದಿಂದ ಈ ಪದಕಗಳ ಪ್ರಧಾನ ಕಾರ್ಯಕ್ರಮವನ್ನು ಪ್ರಾರಂಭಿಸಿದ್ದಾರೆ. ಅದಕ್ಕೆ ಸಂಬಂಧಿಸಿದಂತೆ ಅಂಕಿ ಅಂಶಗಳನ್ನು

ತಯಾರಿಸುವಲ್ಲಿ ಗಣಕಯಂತ್ರವನ್ನು ಬಳಸಿ ಕೊಳ್ಳುತ್ತಿರುವ ಕ್ರಮವೇ ಸಂತೋಷದಾಯಕವಾದದ್ದು. ಈ ಪದಕ ವಿತರಣೆಯ ಮೂಲ ಉದ್ದೇಶ ಕೃಷಿಕರಲ್ಲಿ ಸ್ಪರ್ಧಾತ್ಮಕ ಮನೋಭಾವನೆಯನ್ನು ಬೆಳೆಸುವುದು. ಮತ್ತು ಒಟ್ಟು ರೇಷ್ಮೆ ಉದ್ದಿಮೆಯ ಬೆಳವಣಿಗೆಯಲ್ಲಿ ಅವರನ್ನು ತೊಡಗಿಸಿಕೊಳ್ಳುವುದು. 1994ರಲ್ಲಿ ಚೀನಾ ಮತ್ತು ಜಪಾನ್ ದೇಶಗಳಲ್ಲಿ ರೇಷ್ಮೆ ಉದ್ದಿಮೆಯ ಬೆಳವಣಿಗೆಯನ್ನು ಗಮನಿಸಿ ಬಂದವರು. ಅಲ್ಲಿಯ ನಾನಾ ರೀತಿಯ ಪ್ರಯೋಗಗಳನ್ನು ಇಲ್ಲಿ ಅಳವಡಿಸಿ ದುಡಿಯುತ್ತಿರುವಂಥವರು. ಇಂದು ಏಳು ಸಾವಿರಕ್ಕೂ ಹೆಚ್ಚು ಕೃಷಿಕರಿಗೆ ರೋಗರಹಿತ ಮೊಟ್ಟೆಗಳನ್ನು ಸರಬರಾಜುಮಾಡುತ್ತಿದ್ದಾರೆ. ಇಲ್ಲಿ ಮೊಟ್ಟೆ ಪಡೆದು ಹೋಗುವಂಥವರಿಗೆ ಬೆಳೆಯಕ್ರಮದಲ್ಲಿ ಕೆಲವು ಜವಾಬ್ದಾರಿಗಳನ್ನು ಕಲಿಸಿಕೊಡುವಲ್ಲಿ ಪ್ರಮುಖಪಾತ್ರವನ್ನು ಗೌಡರು ನಿರ್ವಹಿಸುತ್ತಿದ್ದಾರೆ. ಇಲ್ಲಿಯವರೆವಿಗೆ ಆರು ಸಾವಿರ ರೈತರು ಈ ಸಂಸ್ಥೆಯಿಂದ ತರಬೇತು ಪಡೆದಿದ್ದಾರೆ ಎಂಬುದೇ ಮೆಚ್ಚುವ ಸಂಗತಿಯಾಗಿದೆ.

ರಾಮಚಂದ್ರಗೌಡರು ರೇಷ್ಮೆ ಇಲಾಖೆ ಮತ್ತು ಕೃಷಿಕರ ಮಧ್ಯೆ ಸಾಮರಸ್ಯದ ಕೊಂಡಿಯಾಗಿದ್ದಾರೆ. ಹಾಗೆಯೇ ಕಾರ್ಯ ದಕ್ಷತೆಯ ಬಗ್ಗೆ ಪ್ರಾಥಮಿಕ ಗಮನವನ್ನು ಕೊಡುವ ಈ ವ್ಯಕ್ತಿಯ ಕೈಗೆ ಎಂಥ ಕಸವನ್ನು ಕೊಟ್ಟರೂ ಅದನ್ನು ಕೆಲವೇ ಕ್ಷಣಗಳಲ್ಲಿ ರಸವನ್ನು ಮಾಡುವ ಚೈತನ್ಯವುಳ್ಳವರು. ಸರ್ಕಾರದ ಇಲಾಖೆ ಮಾಡದ ಕೆಲವು ಅತ್ಯುತ್ತಮ ಕೆಲಸಗಳನ್ನು ಮಾಡುತ್ತಿದ್ದಾರೆ. ಇದರಿಂದ 1998¥99ನೇ ವರ್ಷದಿಂದ ವಿದೇಶಿತಳಿಯ ಮೊಟ್ಟೆಗಳನ್ನು ತಯಾರಿಸಿ ಹಂಚಲು ಸರ್ಕಾರದಿಂದ ಪರವಾನಿಗಿ ಪಡೆದಿದ್ದಾರೆಂಬುದು ಗೌಡರ ಹಿರಿಮೆಯನ್ನು ತೋರಿಸುತ್ತದೆ. ಇದರಿಂದ 1 ಲಕ್ಷಕ್ಕೂ ಹೆಚ್ಚಿನ ಮೊಟ್ಟೆಗಳನ್ನು ತಯಾರಿಸಿ ಉತ್ತಮ ಫಲಿತಾಂಶವನ್ನು ಪಡೆದು ತೋರಿಸಿದ್ದಾರೆ.

ಇತ್ತೀಚೆಗೆ ನಾವಿಬ್ಬರೂ ಖಾಸಗಿಯಾಗಿ ಏನೇನೋ ಮಾತಾಡುತ್ತಿದ್ದವು. ಆಗ ಗೌಡರು "ನೋಡಿ ಶೂದ್ರರವರೇ ಈ ರೇಷ್ಮೆ ಬೆಳೆಯಿಂದ ೩ ಲಕ್ಷಕ್ಕೂ ಹೆಚ್ಚಿನ ಎಕರೆ ಪ್ರದೇಶದಲ್ಲಿ ವರ್ಷಪೂರ್ತಿ ಹಸಿರು ಇರುತ್ತದೆ. ಪರಿಸರದ ಸಮತೋಲನದ ದೃಷ್ಟಿಯಿಂದ ಇದು ಎಷ್ಟೊಂದು ಮಹತ್ವಪೂರ್ಣವಾದದ್ದು" ಎಂದಾಗ ಹೌದಲ್ಲವೇ ಎಂದು ಚಕಿತನಾಗಿದ್ದೆ.

ರಾಮಚಂದ್ರಗೌಡರು ಕನಸುಗಾರರು, ನಗುನಗುತ್ತ ಎಲ್ಲವನ್ನು ಬೆಳೆಸುವಂತವರು. ಇವರ ಬೆಳವಣಿಗೆಯ ಜೊತೆ ಅಪರೂಪದ ಗೆಳೆಯರಾದ ಶಿವಕುಮಾರ್ (ಶಿವಣ್ಣ) ಮತ್ತು ಪಿ.ವಿ. ಶ್ರೀನಿವಾಸ್‌ರಂಥ ಗೆಳೆಯರಿದ್ದಾರೆ. ಪ್ರಗತಿಪರವಾಗಿ ಯೋಚಿಸಿ ದುಡಿಯುವ ಹೆಂಡತಿ ಮಂಜುಳಾರವರು ಇದ್ದಾರೆ. ಈ ಎಲ್ಲ ಗುಣಾತ್ಮಕ ಸಂಬಂಧಗಳಿಂದ ಗೌಡರ ಕನಸುಗಳು ರೇಷ್ಮೆ ಗೂಡಿನಷ್ಟೇ ಸೂಕ್ಷ್ಮವಾಗಿ ಮನಮೋಹಕವಾಗಿ ಅರಳಲಿ ಎಂದು ಆಶಿಸುವೆ.

ಹಾಗೆಯೇ ಕಳೆದ ವರ್ಷ ಬಹಳಷ್ಟು ಮಂದಿಗೆ ಚಿನ್ನದ ಪದಕಗಳನ್ನು ಮತ್ತು ರಜತ ಪದಕಗಳನ್ನು ತನ್ನ ಮಗ ಪ್ರದಾನ ಮಾಡುವುದನ್ನು ಎರಡು ಮೂರು ಗಂಟೆ ವೇದಿಕೆಯ ಮೇಲೆ ಹಸನ್ಮುಖಿಯಾಗಿ ಕೂತು ಮುನಿನಂಜಪ್ಪನವರು ಆನಂದಿಸಿದರು. 98ನೆಯ ವಯಸ್ಸಿನಲ್ಲಿ ತಮ್ಮ ಕನಸಿನ ಕೂಸಿನ ಮೂಲಕ ಮಗನಿಗೆ ಸೇಠ್ ಬಲದೇವ್ ದಾಸ್ ಪ್ರಶಸ್ತಿ ಬಂದಿರುವುದನ್ನು ಕಂಡು ಈ ತಂದೆ ಎಷ್ಟು ಸಂತೋಷಪಟ್ಟಿರಬಹುದು.

ರೇಷ್ಮೆ ಉದ್ದಿಮೆಯ ಇತಿಹಾಸದಲ್ಲಿ ಈ ತಂದೆ ಮಗನ ಪಾತ್ರ ಎಷ್ಟೊಂದು ಅಪೂರ್ವವಾದದ್ದು. ●

ಚಂದ್ರಶೇಖರ ಕಂಬಾರರಿಗೆ



ನಮಗೆ ಬೇಕಾದವರು ನಮ್ಮವರೆ ಆದರು
ಜೊತೆಯಾಗಿ ಉಳಿಯುವುದು ಸುಲಭವಲ್ಲ
ನಮ್ಮಹಂಕಾರಗಳು ಪುಟಿಯುತ್ತ ಇರುವಾಗ
ಸೆಣಸುತ್ತಲಿರುವಾಗ ನಾವು ನಾವಲ್ಲ.

ನಮ್ಮ ಕೊಬ್ಬಿಳಿದಾಗ ಹಮ್ಮಿನ ಮಬ್ಬು ಸರಿದಾಗ
ಸಾವು ಸಮೀಪಕ್ಕೆ ಹೆಜ್ಜೆ ಇಡುವಾಗ
ಆಗ ನಮ್ಮವರ್ಯಾರು, ನಮಗ್ಯಾಕೆ ಬೇಕವರು
ಅಂತ ತಿಳಿವಾಗುವುದು ಶಕ್ತಿ ಇರದಾಗ.

ಮುಳುಗುವರು ಇಬ್ಬರಿಗೆ ಪ್ರತಿಯೊಬ್ಬನೂ ಕೂಡ
ಆಗುವರು ಒಂದೊಂದು ಹುಲ್ಲುಕಡ್ಡಿ
ಆತುಕೊಳ್ಳುವರಾಗ ಒಬ್ಬ ಇನ್ನೊಬ್ಬನನು
ಅವರ ನಡುವಿಲ್ಲದೆಯೆ ಯಾವ ಅಡ್ಡಿ.

ನೋವಿನಲ್ಲಿರುವಾಗ ಪದವಿ ಪ್ರತಿಷ್ಠೆಗಳು
ಕೀರ್ತಿಕೂಡ ನೆರವು ಕೊಡುವುದಿಲ್ಲ
ಒಂಟಿಯಾಗಿಯೆ ದೂರ ಹೋಗಿ ಸಾಯುವ ನಾಯಿ
ಜೊತೆಗಿದ್ದು ನಾನೇನು ಕಲಿಯಲಿಲ್ಲ.

-ಸುಮತೀಂದ್ರ ನಾಡಿಗ

ನೆನಪಿನ ಬುತ್ತಿ

ಡಾ|| ಕಮಲಾ ಹಂಪನಾ

ಕವಿ ಚಕ್ರವರ್ತಿ ಜನ್ನನನ್ನು ಕುರಿತು ಪರಿಚಯಿಸುವಾಗ ಹೇಳುವ ಸಾಮಾನ್ಯವಾದ ಒಂದು ವಾಕ್ಯವಿದೆ; "ಜನ್ನ, ಬಂಗಾರದ ಚಮಚೆಯನ್ನು ಬಾಯಲ್ಲಿ ಇಟ್ಟುಕೊಂಡು ಹುಟ್ಟಿದವನು" ಎಂದು. ಸಾಹಿತ್ಯಿಕ, ಸಾಂಪತಿಕ ರಾಜಕೀಯ, ಧಾರ್ಮಿಕ, ಶೈಕ್ಷಣಿಕ ಹಾಗೂ ಆರ್ಥಿಕವಾಗಿ ಸದೃಢವಾಗಿದ್ದ ಒಂದು ಮನತನದಲ್ಲಿ ಹುಟ್ಟಿದವನು ಜನ್ನ. ಆದ್ದರಿಂದಲೇ ಅವನಿಗೆ ಮೇಲಿನ ಸೂಕ್ತಿ ಸೂಕ್ತವಾಗಿದೆ. ನನ್ನ ಹೆತ್ತ ತಾಯಿ, ರಂಗಲಕ್ಷ್ಮಮ್ಮ ಸಹ ತನ್ನ ಮಕ್ಕಳ ಹುಟ್ಟಿನ ಬಗೆಗೆ ಇದೇ ಸೂಕ್ತಿಯನ್ನು ಆಗಾಗ ಉಸರುತ್ತಿದ್ದರು. ಹಾಗೆ ಹೇಳುವುದರಲ್ಲಿ ಆಕೆಯ ತವರೂರಿನ ಸಿರಿವಂತ ಮನೆತನ, ತನ್ನ ಗಂಡನ ಮನೆಯ ಹಿರಿತನ ಎಲ್ಲವೂ ಮೇಳೈಸಿರುತ್ತಿತ್ತು.

ನನ್ನ ಎಳೆತನದ ನೆನಪಿನ ಬುತ್ತಿಯನ್ನು ಕೆದಕುವಾಗ ಅನೇಕ ಎಳೆಗಳು ಕೋಲ್ಮಿಂಚಿನಂತೆ ಮಿಂಚಿ ಮಾಯವಾಗುತ್ತವೆ. 'ಮೂರು-ನಾಲ್ಕನೆಯ ವಯಸ್ಸಿನ ಬಾಲ್ಯದ ನೆನಪುಗಳು ದಟ್ಟವಾಗಿರುವುದಿಲ್ಲ, ಕನಸಿನಲ್ಲಿ ಗೋಚರಿಸಿದಂತೆ ಗೋಜಲು ಗೋಜಲಾಗಿರುತ್ತವೆ. ನೆನಪುಗಳಿಗೆ ಖಚಿತತೆ ಸಿಗುವುದು ಆರನೆಯ ವಯಸ್ಸಿನಿಂದ'- ಎಂಬುದು ಮನಃಶಾಸ್ತ್ರಜ್ಞನೊಬ್ಬನ ಉವಾಚ! ನನ್ನ ಬಾಲ್ಯದ ನೆನಪುಗಳಿಗೆ ಈತನ ಮಾತು ಪುಷ್ಟಿ ಕೊಡುತ್ತದೆ.

ಮಸುಕು ಮಸುಕಾದ ನೆನಪು! ತೊಡೆಯ ಮೇಲೆ ತಲೆ ಇಟ್ಟು ಮಲಗಿದ್ದಾಳೆ ಮೊಮ್ಮೊಗಳು. ಅಜ್ಜಿ ಕತೆ ಹೇಳುತ್ತಿದ್ದಾರೆ; ನೀಲಧ್ವಜ- ತಾಮ್ರಧ್ವಜರ ಕತೆ ಮುಗಿಯಿತು. ಅಜ್ಜಿ ಹೇಳಿದ ಕಥೆಯನ್ನು ಹಿಂದಿನ ಸಂಜೆ ಹರಿಕಥೆದಾಸರು ಹೇಳಿದ್ದರು. ಈ ಮೊಮ್ಮೊಗಳೂ ಆ ಕತೆಯನ್ನು ಕೇಳಿದ್ದಳು. ಆದರೆ ಅಜ್ಜಿ ಹೇಳಿದ ಅದೇ ಕಥೆ ಬೇರೆ ರೂಪವನ್ನೇ ಪಡೆದಿತ್ತು. ಮೊಮ್ಮಗಳಿಗೆ ಅಪ್ಯಾಯಮಾನವಾಗಿತ್ತು. ಅಜ್ಜಿ ಹೇಳುವ ಕಥೆಯ ದಾಟಿಯೇ ಬೇರೆ. ಆಕೆಯ ನಿರೂಪಣೆ ಕುತೂಹಲಕಾರಿ. ಒಂದು ಕಥೆಯಲ್ಲಿ ಇನ್ನೂ ಎರಡು ಮೂರು ಕಥೆಗಳು ಹೆಣೆದುಕೊಳ್ಳುತ್ತಿದ್ದವು ಎಂದೇ ಅಜ್ಜಿಯ ಕತೆಗಳಲ್ಲಿ ಮೊಮ್ಮಗಳಿಗೆ ವಿಶೇಷ ಆಸಕ್ತಿ. ಅಜ್ಜಿ ಒಬ್ಬ ಆಶುಕತೆಗಾರ್ತಿ ಆಶು ಹಾಡುಗಾರ್ತಿ!

ಅಜ್ಜಿಯ ಹೆಸರು ದೊಡ್ಡೆಲ್ಲಮ್ಮ, ಓದು-ಬರಹ ಬಲ್ಲವರಲ್ಲ, ಅವಕಾಶ ದೊರೆತಾಗಲೆಲ್ಲ ಕೇಳುವ ಕಾವ್ಯವಾಚನ (ಗಮಕ) ಆಗಾಗ ಕೇಳುವ ಹರಿಕತೆ, ಶಿವಕತೆ ಹಾಗೂ ಜಿನಕಥೆಗಳು, ದೇವಾಲಯಗಳಲ್ಲಿ, ಮನೆಯಲ್ಲಿ ವ್ರತಪೂಜಾದಿ ಅರ್ಚನೆಗಳು ನಡೆಯುವ ಸನ್ನಿವೇಶಗಳಲ್ಲಿ ಅರ್ಚಕರು ಪುರೋಹಿತರು ಹೇಳುವ ಪೌರಾಣಿಕ ಕಥೆಗಳು, ಚೌಟಿಕೆಯರು ಹಾಡುತ್ತಿದ್ದ ಯಲ್ಲಮ್ಮ ಮಾರಮ್ಮನ ಕಥೆಗಳ ಜೊತೆಗೆ ಅಸಂಖ್ಯಾತ ಜಾನಪದ ಕಥೆಗಳು, ರಾಮಾಯಣ, ಭಾರತ ಭಾಗವತ ಹಾಗೂ ಶಿವ ಕಥೆಗಳು ಆಕೆಯ ಕಥಾ ಬತ್ತಳಿಕೆಯಲ್ಲಿದ್ದವು. ಅದೊಂದು ಅಕ್ಷಯ ಬತ್ತಳಿಕೆ! ಅಜ್ಜಿ ಕಥೆ ಹೇಳುತ್ತಾ ಹೇಳುತ್ತಾ ಮೈಮರೆಯುತ್ತಿದ್ದರು. ಮೊಮ್ಮಗಳಾದ ನಾನು ಕಥೆ ಕೇಳುತ್ತಾ ಕೇಳುತ್ತಾ ನಿದ್ರೆಗೆ ವಶವಾಗುತ್ತಿದ್ದೆ.

ಸಾಕಷ್ಟು ದೊಡ್ಡ ಮನೆ, ಆ ಮನೆ ಸುಮಾರು ಎಂಟು-ಹತ್ತು ದಿವಸಗಳಿಂದಲೂ ಯಾರನ್ನೋ ನಿರೀಕ್ಷಿಸುತ್ತಿದೆ, ಸಡಗರದ ಸಿದ್ಧತೆಗಳು ನಡೆದಿವೆ. ಚಿರೋಟಿ ರವೆ, ಸಕ್ಕರೆ,

ಬೂರಾಸಕ್ಕರೆ, ಬೆಣ್ಣೆ-ತುಪ್ಪ, ಗೋಡಂಬಿ, ದ್ರಾಕ್ಷಿ, ಬಾದಾಮಿ ಕೇಸರಿ, ಕೆಂಪು ಕಲ್ಲು ಸಕ್ಕರೆ-ಸಾಕಷ್ಟು ದಾಸ್ತಾನು ಬಂದು ಮನೆಯಲ್ಲಿ ಕುಳಿತಿದೆ. ಮನೆಯ ಯಜಮಾನಿ ಇತರರ ಸಹಾಯದಿಂದ ಚಕ್ಕುಲಿ, ಕೋಡುಬಳೆ, ನಿಪ್ಪಟ್ಟು, ತೇಂಗೊಳಲು ರವೆ ಉಂಡೆ, ಕಜ್ಜಾಯ-ಮೊದಲಾದ ಭಕ್ಷ್ಯಗಳನ್ನು ಮಾಡಿಸಿ ಹಿತ್ತಾಳೆಯ ದೊಡ್ಡ ದೊಡ್ಡ ಡಬ್ಬಿಗಳಲ್ಲಿ ತುಂಬಿಸಿ ಇಡಿಸುತ್ತಿದ್ದಾರೆ. ಮನೆಯವರು ಯಜಮಾನತಿಗೆ ಹೇಳುತ್ತಿದ್ದಾರೆ; 'ಇವತ್ತು ನಾಲ್ಕು ಗಂಟೆ ಬಸ್ಸಿಗೆ ಅವರೆಲ್ಲ ಬರುತ್ತಾರೆ. ಅಷ್ಟು ಹೊತ್ತಿಗೆ ತಿಂಡಿ-ಕಾಫಿ ಎಲ್ಲ ಸಿದ್ಧವಿರಬೇಕು. ಹಾಗೆ ರಾತ್ರಿ ಊಟ, ಪ್ರತಿದಿವಸ ರಾತ್ರಿ ಅವರಿಗೆಲ್ಲಾ ಕುಡಿಯಲು ಬಾದಾಮಿ ಹಾಲು ಬೇಕು, ಹಾಲು ಹೆಚ್ಚಿಗೆ ತರಿಸಿದ್ದೀಯಾ ತಾನೆ?' ಯಜಮಾನಿ ಉತ್ತರಿಸುತ್ತಾರೆ, 'ಎಲ್ಲ ಏರ್ಪಾಡು ಆಗಿದೆ. ಸ್ನಾನ-ಪೂಜೆ, ತಿಂಡಿ, ಊಟ ಕೆಳಗಿನ ಮನೆಯಲ್ಲಿ, ಅವರುಗಳ ಬಿಡಾರ ಮಹಡಿಯ ಮೇಲೆ ಅವರುಗಳ ಊಟ-ತಿಂಡಿ ಯೋಚನೆ ನಿಮಗೇನೂ ಬೇಡ, ನೀವು ಅವರ ಕಛೇರಿ ಕಾರ್ಯಕ್ರಮಗಳಿಗೆ ಸಿದ್ಧತೆ ಮಾಡಿ'. ಪುಟ್ಟ ಹುಡುಗಿಯೊಬ್ಬಳ ತಂದೆ-ತಾಯಿ, ಅಣ್ಣಂದಿರು ಅಕ್ಕಂದಿರು ಆಳು-ಕಾಳು ಎಲ್ಲರೂ ಸಡಗರದ ಸಿದ್ಧತೆಗೆ ತೊಡಗಿದ್ದಾರೆ.

ಸಂಜೆ ಬಂದೇ ಬಿಟ್ಟಿತು. ಸುಮಾರು ಹನ್ನೆರಡರಿಂದ ಹದಿನೈದು ಜನರ ತಂಡವೊಂದು ಮನೆಯನ್ನು ಪ್ರವೇಶಿಸಿತು. ಅದನ್ನು ಹಿಂಬಾಲಿಸಿ ಅನೇಕ ವಾದ್ಯಗಳು ಒಳಹೊಕ್ಕವು. ಆ ಗುಂಪಿನಲ್ಲಿ ಮುಂದೆ ಬಂದ ಹಿರಿಯರೊಬ್ಬರ ಕಡೆ ಹುಡುಗಿಯ ಗಮನ ಹರಿಯಿತು. ತಲೆಯ ಮೇಲೆ ಜರತಾರಿ ಪೇಟ, ಉದ್ದನೆಯ ಕಪ್ಪು ಕೋಟು, ಕೊರಳಲ್ಲಿ ಹೊಳೆಯುವ ಪದಕದ ಒಂದೆಳೆಯ ದಪ್ಪ ಉದ್ದನೆಯ ಸರ, ಎರಡು ಕೈ ಬೆರಳುಗಳಲ್ಲಿಯೂ ತಳತಳಿಸುವ ಉಂಗುರಗಳು - ನೋಡಿದೊಡನೆಯೇ ಗೌರವಭಾವ ಮುಡುವ ವ್ಯಕ್ತಿತ್ವ ಅವರದಾಗಿತ್ತು. ಮನೆಯ ಮುಂಭಾಗದಲ್ಲಿಯೇ ಮನೆಯ ಯಜಮಾನರ ಹಾಗೂ ಬಂದ ವ್ಯಕ್ತಿಯ ಗಾಢಾಲಿಂಗನವಾಯಿತು. ಒಳಗೆ ಬಂದ ಅವರನ್ನು 'ಬನ್ನಿ ಅಣ್ಣ' ಎಂದು ಯಜಮಾನಿತಿ ಸ್ವಾಗತಿಸಿದರು. 'ಚೆನ್ನಾಗಿದ್ದೀಯಾ ತಾಯಿ' ಎಂದು ಕೇಳುತ್ತಲೇ ಅವರು ತಾಯಿಯ ಸೆರಗು ಹಿಡಿದು ನಿಂತಿದ್ದ ಪುಟ್ಟ ಹುಡುಗಿಯನ್ನು ತಮ್ಮ ಎರಡು ಕೈಗಳಿಂದಲೂ ಮೇಲಕ್ಕೆ ಎತ್ತಿ 'ನನ್ನ ಚಿಕ್ಕ ಮುದ್ದು ಸೋದರ ಸೊಸೆ'- ಎಂದು ಕೆನ್ನೆಗೆ ಮುತ್ತುಕೊಟ್ಟು ಎತ್ತಿಕೊಂಡೇ ನಿಂತರು. ಹುಡುಗಿಗೆ ಸಂತೋಷ-ಸಂಕೋಚ ಎರಡೂ ಏಕಕಾಲದಲ್ಲಿ ಮೂಡಿತ್ತು. ಸ್ವಲ್ಪ ಹೊತ್ತಿನಲ್ಲೇ ಆ ಪುಟ್ಟ ಹುಡುಗಿ ಆ ಗುಂಪಿನವರಲ್ಲಿ ಒಬ್ಬಳಾಗಿ ಹೋಗಿದ್ದಳು. ತನ್ನದೇನೂ ಕೆಲಸವಿಲ್ಲದಿದ್ದರೂ ಅಲ್ಲಿಂದ ಇಲ್ಲಿಗೆ, ಇಲ್ಲಿಂದ ಅಲ್ಲಿಗೆ ಓಡಾಡುತ್ತಾ ತನ್ನ ಅಸ್ತಿತ್ವವನ್ನು ಎಲ್ಲರೂ ಗಮನಿಸುವಂತೆ ಮಾಡಿದ್ದಳು.

ಮನೆಗೆ ಬಂದಿದ್ದ ತಂಡದ ಯಜಮಾನರು ಮೈಸೂರು ಅರಸರ ಆಸ್ಥಾನ ಸಂಗೀತ ವಿದ್ವಾಂಸರಾದ ಬಿ. ದೇವೇಂದ್ರಪ್ಪನವರಾಗಿದ್ದರು. ಪುಟ್ಟ ಹುಡುಗಿಯ ಚಿಕ್ಕಮ್ಮನ ಯಜಮಾನರಾದ

ರಾಚಪ್ಪನವರೂ ದೇವೇಂದ್ರಪ್ಪನವರ ಮೊದಲ ಹೆಂಡತಿ ತಾಯಮ್ಮನವರೂ ಅಣ್ಣತಂಗಿಯರಾಗಿದ್ದರು.

ಮಾರನೆಯ ಸಂಜೆ ಸಾರ್ವಜನಿಕ ಸಭೆಯಲ್ಲಿ ದೇವೇಂದ್ರಪ್ಪನವರ ಸಂಗೀತ ಕಛೇರಿ. ಮರುದಿನ ವೀಣಾವಾದನ. ಅದರ ಮುಂದಿನ ದಿನ ಜಲತರಂಗ. ಪುಟ್ಟ ಹುಡುಗಿ ಬಿಟ್ಟ ಕಣ್ಣು ಬಿಟ್ಟ ಬಾಯಿಂದ ಸಂಗೀತ ಕೇಳಿ ಆನಂದಿಸಿದಳು. ತನ್ನ ತಾಯಿ, ಅಕ್ಕಂದಿರು ಹಾಡುತ್ತಿದ್ದ ವರ್ಣ, ಕೀರ್ತನೆ, ದೇವರನಾಮಗಳು ಆ ಪಿಂಗಾಣಿಯ ಬಟ್ಟಲುಗಳಿಂದ ಹೊರಹೊಮ್ಮಿದ್ದಾಗ ಆ ಹುಡುಗಿಗೆ ಆದ ವಿಸ್ಮಯ ಅಷ್ಟಿಷ್ಟಲ್ಲ. ತಂಗಿಯ ತೊಡೆಯ ಮೇಲೆ ಕುಳಿತಿದ್ದ ಅವಳಿಗೆ ಉಕ್ಕುವ ಸಂತಸವಾಗಿತ್ತು.

ಹದಿನೈದು ದಿವಸಗಳೂ ಮನೆಯಲ್ಲಿ ಎಲ್ಲರಿಗೂ ಹಬ್ಬದೂಟ ಸಂಜೆ ಸಂಗೀತಕೂಟ. ದಿವಸಗಳು ಕಳೆದದ್ದು ತಿಳಿಯದು. ಬಂದವರು ಜನತೆಯಲ್ಲಿ ಸಂಗೀತಾಸಕ್ತಿ ಮೂಡಿಸಿ ಹಿಂತಿರುಗಿದರು. ಎಲ್ಲರ ಬಾಯಲ್ಲೂ ದೇವೇಂದ್ರಪ್ಪನವರ ಸಂಗೀತದ ಕೊಂಡಾಟ ನಡೆದೇ ಇತ್ತು.

ಅಷ್ಟರಲ್ಲಿ ಜಿನಕತೆ ಮಾಡುವ ತಂದೆಯ ಸ್ನೇಹಿತರ ತಂಡದ ಆಗಮನ! ಅವರ ಊಟ, ತಿಂಡಿ, ವಾಸದ ವ್ಯವಸ್ಥೆಯೆಲ್ಲಾ ಬೇರೆ ಪ್ರತ್ಯೇಕವಾಗಿಯೇ ಆಗಬೇಕು. ಬಂದವರು ಆ ಹುಡುಗಿಯ ಮನೆಯಲ್ಲಿ ಊಟ ಮಾಡುವವರಲ್ಲ. ಹಾಲು, ಮೊಸರು, ಬೆಣ್ಣೆ ತುಪ್ಪ ಹಣ್ಣು ಪೂಜೆಗೆ ಹೂವು ಈ ಎಲ್ಲ ಪದಿತರ ಪದಾರ್ಥಗಳು ಆ ಹುಡುಗಿಯ ಮನೆಯಿಂದ ಬಿದಾರದ ಮನೆಗೆ ಹೋಗಬೇಕು. ಅವರು ಉಳಿಯುತ್ತಿದ್ದ ಎಂಟು, ಹತ್ತು ದಿವಸಗಳೂ ತಂದೆಯ ಜೊತೆಯಲ್ಲಿ ಪುಟ್ಟ ಹುಡುಗಿಗೆ ಬಿದಾರದ ಮನೆಯಲ್ಲಿಯೆ ಊಟ-ತಿಂಡಿ ನಡೆಯುತ್ತಿತ್ತು. ಆ ವಿದ್ವಾಂಸರು ತಂದೆಯ ಸ್ನೇಹಿತರೂ ಹಿತೈಷಿಗಳೂ ಆದ ಕಾ.ಸ. ಧರಣೇಂದ್ರಯ್ಯನವರು ಅನೇಕ ಕನ್ನಡ ಗ್ರಂಥಗಳಿಂದ ಕಾವ್ಯಭಾಗಗಳನ್ನು ಆರಿಸಿ ರಾಗವಾಗಿ ಹಾಡುತ್ತಾ ಅವುಗಳಿಗೆ ಅವರು ಕೊಡುತ್ತಿದ್ದ ವಿವರಣೆ ಅಮೋಘವಾಗಿರುತ್ತಿತ್ತು. ಎರಡು-ಮೂರು ಸಂಜೆಗಳು 'ಜಿನಕಥಾಮೃತ' ಕಛೇರಿ ನಡೆಯುತ್ತಿತ್ತು. ಹರಿಕಥೆ ದಾಸರಿಗೂ, ಶಿವಕಥೆ ಶರಣರಿಗೂ ಇದೇ ರೀತಿಯ ಉಪಚಾರ ಆ ಪುಟ್ಟಹುಡುಗಿಯ ಮನೆಯಿಂದ ನಡೆಯುತ್ತಿತ್ತು. ಮನೆಯ ಯಜಮಾನರು ಅವರಿಗೆಲ್ಲಾ ತಮ್ಮ ಸ್ವಂತ ಖರ್ಚಿನಿಂದ ಸನ್ಮಾನಿಸಿ ಉಡುಗೊರೆ ಕೊಟ್ಟು ಗೌರವದಿಂದ ಅವರನ್ನು ಕಳುಹಿಸುತ್ತಿದ್ದರು.

ಆ ಮನೆಯ ಯಜಮಾನರು, ಪುಟ್ಟ ಹುಡುಗಿಯ ತಂದೆ, ನಿಷ್ಠ ದೈವಭಕ್ತರು. ಸ್ನಾನ-ಪೂಜೆ ಇಲ್ಲದೆ ಒಂದು ತೊಟ್ಟು ನೀರನ್ನೂ ಬಾಯಿಗೆ ಹಾಕಿದವರಲ್ಲ. ಸಾಹಿತ್ಯ-ಸಂಗೀತದ ಪರಿಜ್ಞಾನವಿತ್ತು. ಕನ್ನಡ-ಇಂಗ್ಲೀಷಿನಲ್ಲಿ ಉಪನ್ಯಾಸ ನೀಡುವ ವಿದ್ವತ್ತಿತ್ತು. ಲೋಕೋಪಯೋಗಿ ಇಲಾಖೆಯಲ್ಲಿ ಸಬ್-ಎಂಜಿನಿಯರ್ ಆಗಿ ಕಾರ್ಯ ನಿರ್ವಹಿಸುತ್ತಿದ್ದರು. ಅವರ ತಂದೆ ಜೈನ ಧರ್ಮೀಯರಾದ ಮಧುಗಿರಿಯ ಚಂದ್ರಪ್ಪನವರು. ತಾಯಿ ಬೇಡ ಜನಾಂಗದ ಪಾವಗಡದ ರಂಗಮ್ಮನವರು. ಪುಟ್ಟ ಹುಡುಗಿಯ ತಂದೆಯನ್ನು ಅಂದಿನ ಕಾಲದಲ್ಲಿ ಜೈನಸಮಾಜ ಸ್ವೀಕರಿಸಲಿಲ್ಲ. ಆದ್ದರಿಂದ ಅವರು ತಮ್ಮನ್ನು ಬೇಡ ಜನಾಂಗದಲ್ಲಿಯೇ ಗುರುತಿಸಿಕೊಂಡರು.

ಪುಟ್ಟ ಹುಡುಗಿಯ ತಾಯಿ ರಂಗಲಕ್ಷ್ಮಮ್ಮ ತುಮಕೂರು ಬಳಿಯ ಕ್ಯಾತ್ಸಂದ್ರ ಆಕೆಯ ತವರು ಮನೆ. ರಂಗಲಕ್ಷ್ಮಮ್ಮನ ತಾತ ಕೆಂಪಲ್ಲೆಯ್ಯನವರು ಅಂದಿನ ಕಾಲದಲ್ಲಿ ಡಿಸ್ಟ್ರಿಕ್ಟ್ ಬೋರ್ಡ್‌ಗೆ ಮೆಂಬರಾಗಿದ್ದರು. ಅಂದಿಗೆ 500 ರೂ.ಗಳ ಕಂದಾಯ ಕಟ್ಟುತ್ತಿದ್ದ ಸಿರಿವಂತ ಮನೆತನ. ಮೈಸೂರು ಅರಮನೆಯ ಸದಸ್ಯತ್ವ ಅವರಿಗಿತ್ತು. ಪ್ರತಿ ವರುಷದ ನವರಾತ್ರಿಯಲ್ಲಿ ಕೆಂಪಲ್ಲೆಯ್ಯನವರಿಗೆ ಅರಮನೆಯಿಂದ ಆಹ್ವಾನವಿದ್ದು, ದರ್ಬಾರ್ ಉಡುಪಿನಲ್ಲಿ ಅವರು ಹತ್ತು

ದಿವಸಗಳೂ ಅರಮನೆಯ ನವರಾತ್ರಿ ಅತಿಥಿಗಳಾಗಿ ಇರುತ್ತಿದ್ದರು. ಉತ್ಸವದಲ್ಲಿ ಪಾಲುಗೊಳ್ಳುತ್ತಿದ್ದರು: ಅವರ ಕುಟುಂಬದವರೆಲ್ಲ ಅರಮನೆಯ ಅಚ್ಚುಮೆಚ್ಚಿನ ಮೊದಲ ಮೊಮ್ಮಗಳು ರಂಗಲಕ್ಷ್ಮಮ್ಮನಿಗೆ ಅಂದಿನ ಕಾಲದಲ್ಲಿ ಶಿಕ್ಷಣ ಕೊಡಿಸಿ, ಸಂಗೀತಪಾಠವನ್ನು ಹೇಳಿಸಿ, ಪಿಟೀಲು ನುಡಿಸುವ ಸುಶಿಕ್ಷಿತಳನ್ನಾಗಿ ಬೆಳಸಿದ್ದರು. ಸಂಗೀತ-ಸಾಹಿತ್ಯದ ಜೊತೆ ರಂಗವಲ್ಲಿ, ಕಸೂತಿ ಕೆಲಸಗಳಲ್ಲಿ, ಮಣಿ ತೋರಣಗಳಲ್ಲಿ ಕುಸುರಿಗೆಲಸಗಳಲ್ಲಿ ಆಕೆ ಪ್ರವೀಣೆಯಾಗಿದ್ದರು. ಬದುಕನ್ನು ತುಂಬ ಪ್ರೀತಿಸುವ ಅದಮ್ಯ ಚೈತನ್ಯ ಆಕೆಯದಾಗಿತ್ತು.

ಇಲ್ಲಿಯವರೆಗೂ ಪರಿಚಯಿಸಿದ ಪುಟ್ಟಹುಡುಗಿಯೇ ನಾನು. ನನ್ನ ತಂದೆ-ತಾಯಿ ನಮ್ಮ ಮನೆಯ ಪರಿಸರದ ಅಲ್ಪಸ್ವಲ್ಪ ಪರಿಚಯ ಇಲ್ಲಿದೆ. ನನ್ನ ತಂದೆ ಲೋಕೋಪಯೋಗಿ ಇಲಾಖೆಯ ಕೆಲಸದಲ್ಲಿ ಇದ್ದುದರಿಂದ ಊರಿಂದ ಊರಿಗೆ ವರ್ಗವಾಗುತ್ತಿತ್ತು. ವಿದ್ಯಾವಂತರಾದ ಈ ದಂಪತಿಗಳು ಮಕ್ಕಳೆಲ್ಲರ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಮಹತ್ವ ನೀಡಿದವರಾಗಿದ್ದರು.

ನನ್ನ ಪ್ರಾಥಮಿಕ ಶಾಲೆಯ ವಿದ್ಯಾಭ್ಯಾಸ ಪ್ರಾರಂಭವಾದುದು ಚಳ್ಳಕೆರೆಯಲ್ಲಿ. ನನಗೆ ಐದು ವರುಷಗಳು. ಒಂದನೆಯ ತರಗತಿ, ನನ್ನ ಅಕ್ಕ ನನ್ನ ಜೊತೆ; ಆಕೆ ಮೂರನೆ ತರಗತಿ, ಇನ್ನೊಬ್ಬ ಅಕ್ಕ-ಅಣ್ಣ ಎಂಟನೆ ತರಗತಿ, ಒಬ್ಬ ಅಕ್ಕನನ್ನು ಡಾಕ್ಟರಿಗೆ ಕೊಟ್ಟು ಮದುವೆಯಾಗಿತ್ತು. ಇನ್ನೊಬ್ಬ ದೊಡ್ಡ ಅಣ್ಣ ಸಿ.ಆರ್. ಕೇಶವಮೂರ್ತಿ ಮೈಸೂರು ಮಹಾರಾಜಾ ಕಾಲೇಜಿನಲ್ಲಿ ಬಿ.ಎ. ಪದವೀಧರರಾಗಿ ಪೂನಾದಲ್ಲಿ ಎಲ್.ಎಲ್.ಬಿ. ಓದುತ್ತಿದ್ದರು. ಆಗ 1941-42ನೇ ಇಸವಿ. ದೇಶದ ಸ್ವಾತಂತ್ರ್ಯದ ಹೋರಾಟ ರಭಸದಿಂದ ನಡೆದಿತ್ತು. ಚಳ್ಳಕೆರೆಯ ನನ್ನ ಶಾಲೆ, ಅಲ್ಲಿಯ ಸಂತೆ, ಆ ಊರಿನಲ್ಲಿ ಇದ್ದ ಒಂದು ಪುಟ್ಟ ಪಾರ್ಕ್, ನನ್ನ ತಂದೆಯ ಕಛೇರಿ, ನಾವು ವಾಸವಿದ್ದ ದೊಡ್ಡ ಕಾಂಪೌಂಡ್ ಇದ್ದ ದೊಡ್ಡ ಮನೆ, ನಮ್ಮ ಮನೆ ಮುಂದೆ ಇದ್ದ ಕಾಳಪ್ಪ-ತವನಪ್ಪನವರ ಶ್ರೀಮತಿಯರಾದ ಶ್ರೀಕಾಂತಮ್ಮ-ಪ್ರಭಾವತಮ್ಮ, ಚಳ್ಳಕೆರೆಗೆ ಸ್ವಲ್ಪ ದೂರದಲ್ಲಿದ್ದ ಅಜ್ಜಪ್ಪನ ದೇವಾಲಯ, ನಮ್ಮ ಮನೆಯಲ್ಲಿದ್ದ ಗ್ರಾಮೋಫೋನು, ಆ ಊರಿಗೆ ಆಗ ಹೊಸದಾಗಿ ಬಂದ ಕಲ್ಲಿದ್ದಿಲಿನಿಂದ ಓಡುವ ಮೋಟಾರುಗಾಡಿ, ಅಲ್ಲಿಗೆ ಆಗಾಗ ಬರುತ್ತಿದ್ದ ಟೆಂಟ್ ಸಿನೇಮಾ, ರಜಕ್ಕೆ ಊರಿಗೆ ಬರುತ್ತಿದ್ದ ನನ್ನ ಅಣ್ಣ ಸಿ.ಆರ್. ಕೇಶವಮೂರ್ತಿಯಿಂದ ಕೇಳುತ್ತಿದ್ದ ಸ್ವಾತಂತ್ರ್ಯ ಸಮರದ ಕಥೆಗಳು, ಡಾ : ಅಂಬೇಡ್ಕರರ ವಿಚಾರಧಾರೆ, ತುಂಬಾ ಇಂಪಾಗಿ ಹಾಡುತ್ತಿದ್ದ ಹಿಂದಿಯ ಹಾಡುಗಳನ್ನು ನಮಗೆ ಕಲಿಸುತ್ತಿದ್ದ ಪರಿ, ತಾನೇ ನೂತನ ರಾಗ ಸಂಯೋಜಿಸಿ ದೇವರನಾಮ, ಭಾವಗೀತೆಗಳನ್ನು ನಮಗೆ ಹೇಳಿಕೊಡುತ್ತಿದ್ದ ಪರಿ - ಎಲ್ಲವೂ ನನ್ನ ಮೇಲೆ ಗಾಢ ಪ್ರಭಾವ ಬೀರಿದವು.



ಮನೆಯಲ್ಲಿ ನಡೆಯುತ್ತಿದ್ದ ಹಬ್ಬ-ಹರಿದಿನಗಳ ಸಡಗರವನ್ನು ನಾನು ಸ್ವಲ್ಪ ಹೇಳಲೇಬೇಕು. ನನ್ನ ತಾಯಿ ಬೆಳಗಿನ ಜಾವಕ್ಕೆ ಎದ್ದು ಮಕ್ಕಳಿಗೆ ಎಣ್ಣೆ ನೀರು ಹಾಕಿ ಜಡೆ ಹೆಣೆದು ಹೂ ಮುಡಿಸಿ ಹೊಸಬಟ್ಟೆ ತೊಡಿಸುತ್ತಿದ್ದರು. ಹಬ್ಬದ ಊಟದ ನಂತರ ಮಧ್ಯಾಹ್ನ ಎರಡು ಗಂಟೆಗೆಲ್ಲಾ

ಪುನಃ ತಲೆಬಾಚಿ, ಬಂಗಾರದ ನಾಗರ ಕುಚ್ಚು, ಜಡೆ ಬಿಲ್ಲೆ ಹಾಕಿ ಜಡೆ ಹೆಣೆದು ಹೂ ಮುಡಿಸಿ, ಮುಖಕ್ಕೆ ಪೌಡರ್ ಹಾಕಿ ಹಣೆಗೆ ಸಾದು ತೇದು ಇಟ್ಟು ಜರತಾರಿ ಲಂಗಾ ಜಂಪರ್ ತೊಡೆಸಿ ನೋಡುವ ಆನಂದ ಆ ನನ್ನ ತಾಯಿಯದು. ನಾನು ನನ್ನ ಅಕ್ಕ ವಿಶಾಲ – ಇಬ್ಬರೂ ಈ ರೀತಿಯ ಅಲಂಕಾರಕ್ಕೆ ಒಳಗಾಗುತ್ತಿದ್ದೆವು. ತಲೆಯಲ್ಲಿ ಮುಡಿಸಿದಿ ಹೂವಿನ ಮೇಲೆ ಬಂಗಾರದ ಮಲ್ಲಿಗೆ ಮೊಗ್ಗನ್ನು ಸಿಕ್ಕಿಸಿ ಕಟ್ಟುತ್ತಿದ್ದರು. ಬಂಗಾರದ ಸೂಜಿಮಲ್ಲಿಗೆ ಒಬ್ಬಳಿಗಾದರೆ, ದುಂಡುಮಲ್ಲಿಗೆ ಮೊಗ್ಗು ಮತ್ತೊಬ್ಬಳಿಗೆ! ಹೀಗೆ ಅಲಂಕಾರಗೊಂಡ ಪುಟ್ಟ ಹುಡುಗಿಯರಿಬ್ಬರೂ ಕುಂಕುಮದ ಬೆಳ್ಳಿ ಬಟ್ಟಲು ಹಿಡಿದು, ಜೊತೆಯಲ್ಲಿ ಬರುವ ಆಳಿನ ಒಡಗೂಡಿ ಮನೆ-ಮನೆಗೆ ಹೋಗಿ ಅರಿಸಿನ-ಕುಂಕುಮ ಆರತಿಗೆ ಮುತ್ತೈದೆಯರನ್ನು ಕರೆದು ಬರುವ ಸಂಭ್ರಮ ಹೇಳತೀರದು.

ದಸರಾ ಹಬ್ಬದಲ್ಲಿ ನಮ್ಮ ಮನೆ ಒಂದು ಪುಟ್ಟ ಅರಮನೆಯೇ ಆಗುತ್ತಿತ್ತು. ಸುಮಾರು ನಾಲ್ಕೈದು ದೊಡ್ಡ ದೊಡ್ಡ ಜಾಕಾಯಿ ಪೆಟ್ಟಿಗೆಗಳಲ್ಲಿ ತುಂಬಿ ಇಟ್ಟಿರುತ್ತಿದ್ದ ಬೊಂಬೆಗಳು ಸುಮಾರು 10, 15 ಮೆಟ್ಟಿಲುಗಳ ಅಟ್ಟಣಿಗೆಯ ಮೇಲೆ ಕುಳಿತು ಸಂಭ್ರಮಿಸುತ್ತಿದ್ದವು. ಪ್ರತಿದಿವಸವೂ ಬೊಂಬೆಗೆ ಆರತಿ, ಹಿರಿಯರಿಗೆ ಎಲೆ, ಅಡಿಕೆ, ತಾಂಬೂಲ ತಿಂಡಿ ಬಾಗಿನ, ಮಕ್ಕಳಿಗೆ ತರತರದ ತಿಂಡಿಗಳ ಬೊಂಬೆಬಾಗಿನ. ದಶಾವತಾರದ ವಿಗ್ರಹಗಳಿಂದ ಕೂಡಿದ್ದ ಬಾದಾಮಿ ಆಕಾರದ ಬೆಳ್ಳಿ ಹೂಬುಟ್ಟಿಯಿಂದ ಹೂಕೊಡುವ ಕೆಲಸ ನನ್ನ ಅಕ್ಕನದಾದರೆ, ಬೆಳ್ಳಿ ಪನ್ನೀರು ದಾನಿಯಿಂದ ಪನ್ನೀರು ಹನಿಸುವ ಕೆಲಸ ನನ್ನದು. ಭೀಮನ ಅಮಾವಾಸ್ಯೆ, ವರಮಹಾಲಕ್ಷ್ಮಿ, ಗೌರಿ-ಗಣೇಶ, ನವರಾತ್ರಿ, ದೀಪಾವಳಿ, ಉತ್ಥಾನ ದ್ವಾದಶಿ, ಸಂಕ್ರಾಂತಿ, ಯುಗಾದಿ ಈ ಹಬ್ಬಗಳ ಆಚರಣೆ ವ್ರತಗಳ ಪಾಲನೆ ನನಗೆ ಕನ್ನಡನಾಡಿನ ಸಾಂಸ್ಕೃತಿಕ ಆಚರಣೆಯ ಮಹತ್ವವನ್ನು ಸ್ವಲ್ಪ ಮಟ್ಟಿಗೆ ಮನದಟ್ಟು ಮಾಡಿಕೊಟ್ಟವು. ಪ್ರತಿದಿವಸವೂ ಒಂದಲ್ಲ ಒಂದು ಇಂಥ ಕೆಲಸಗಳಲ್ಲಿ ತೊಡಗಿರುತ್ತಿದ್ದ ಚಟುವಟಿಕೆಯ ಕೇಂದ್ರವಾಗಿದ್ದರು ನನ್ನ ತಾಯಿ, ಬದುಕಿನಲ್ಲಿ ಉಕ್ಕುತ್ತಿದ್ದ ಜೀವನೋತ್ಸಾಹ, ದಣಿವಿಲ್ಲದ ದುಡಿಮೆ ಆಕೆಯದು. ಮಕ್ಕಳಲ್ಲಿಯೂ ಇದೇ ಗುಣಗಳನ್ನು ಆಕೆ ಬೆಳೆಸಿದರು.

ನನ್ನ ತಂದೆ-ತಾಯಿ ಇಬ್ಬರೂ ಪ್ರೀತಿ-ಅಕ್ಕರೆಯ ಮಹಾಪೂರದಲ್ಲಿಯೇ ನಮ್ಮನ್ನು ತೋಯಿಸಿದರೂ, ನಡೆ-ನುಡಿಯಲ್ಲಿ ತುಂಬಾ ಶಿಸ್ತನ್ನು ಕಲಿಸಿದರು. ಅವರೀರ್ವರ ಬದುಕೂ ಅತ್ಯಂತ ಶಿಸ್ತಿನಿಂದ ಕೂಡಿತ್ತು. ಪ್ರತಿದಿವಸ ಸ್ನಾನ ಮಾಡಿ ದೇವರಪೂಜೆ, ಮಂಗಳಾರತಿಯ ನಂತರವೇ ಮಕ್ಕಳಿಗೆ ತಿಂಡಿ-ಕಾಫಿಯ ಸಮಾರಾಧನೆ. ಸಂಜೆ ಶಾಲೆಯಿಂದ ಬಂದ ಮಕ್ಕಳು ಆಟದ ನಂತರ ಕೈಕಾಲು ಮುಖ ತೊಳೆದು, ತಾಯಿ ಆಗಲೇ ದೀಪ ಬೆಳಗಿಸಿ ಊದುಕಡ್ಡಿ ಹಚ್ಚಿ ಇಟ್ಟಿದ ದೇವರ ಮಂದಾಸನದ ಮುಂದೆ ಕುಳಿತು, 'ಶುದ್ಧಬ್ರಹ್ಮ ಪರಾತ್ಪರ ರಾಮ' ಹಾಡಿ, ಸರಸ್ವತಿ, ವಿಘ್ನೇಶ್ವರರ ಸ್ತೋತ್ರ, ಶ್ಲೋಕಗಳನ್ನು ಹಾಡಿ ಅನಂತರ ಓದಲು ಕುಳಿತುಕೊಳ್ಳಬೇಕು. ಈ ಮಧ್ಯೆ ವಾರದಲ್ಲಿ ಮೂರು ದಿವಸ ಸಂಜೆ ಹೊತ್ತು ಸಂಗೀತಪಾಠ ಆಗಲೇಬೇಕು. ಈ ವಿಷಯಗಳಲ್ಲಿ ಮಕ್ಕಳಿಗೆ ರಿಯಾಯಿತಿ ಇರಲಿಲ್ಲ.

ಚಳ್ಳಕೆರೆಯಿಂದ ನನ್ನ ತಂದೆಗೆ ಮೈಸೂರು ಜಿಲ್ಲೆ ಯಳಂದೂರಿಗೆ ವರ್ಗವಾಯಿತು. ಅಲ್ಲಿ ನನ್ನ ಎರಡನೆಯ ತರಗತಿ ವಿದ್ಯಾಭ್ಯಾಸ ಮುಗಿಯಿತು. ಅಲ್ಲಿಯ ದಿವಾನ್ ಪೂರ್ಣಯ್ಯನವರ ಬಂಗಲೆ, ಅದರ ಎಡಭಾಗಕ್ಕೆ ಇದ್ದ, ಈಗಲೂ ಇರುವ ದೇವಾಲಯ, ವಿಶಾಲವಾದ ಬಸರೀಮರಗಳು ಅಲ್ಲಿಯೇ ಇದ್ದ ಸಿಹಿನೀರು ಬಾವಿ, ಬಹುದೊಡ್ಡದಾಗಿದ್ದ ನನ್ನ ಮನೆ, ಮನೆಯ ಹಿತ್ತಲು ನದಿ, ನದಿಯ ತೀರಕ್ಕೆ ಅಂಟಿದಂತಿದ್ದ ಶಾಲೆ-ಎಂದಿಗೂ ಮರೆಯದ

ತಾಣಗಳು. ಅಲ್ಲಿ ಹೆಚ್ಚಿನ ಸಂಖ್ಯೆಯಲ್ಲಿದ್ದ ಪರಿವಾರ ನಾಯಕರು, ನಮ್ಮನ್ನು ಅವರ ಬಳಗದವರೆಂದೇ ಭಾವಿಸಿದ್ದರು. ಆದರೆ ಅವರ ತಕರಾರು ಏನೆಂದರೆ, 'ಎಂಜಿನಿಯರ್ ಮನೆಯವರು ಬ್ರಾಹ್ಮಣರ ತರಹ ಪ್ರತಿದಿವಃ ಸ್ನಾನಮಾಡಿ ಮಡಿ ಬಟ್ಟೆ ಉಡುತ್ತಾರೆ. ಹಬ್ಬ-ಆಚರಣೆಗಳನ್ನು ಅವರಿಗಿಂತ ಮಿಗಿಲಾಗಿ ಇವರ ಮನೆಯಲ್ಲಿ ಆಚರಿಸುತ್ತಾರೆ. ನಮ್ಮಗಳ ಮನೆಯಲ್ಲಿ ಇವರು ಊಟ ಮಾಡುವುದಿಲ್ಲ. ನಾವು ಮುಟ್ಟಿದ ನೀರನ್ನು ಇವರು ಕುಡಿಯುವುದಿಲ್ಲ'- ಎನ್ನುವುದಾಗಿತ್ತು. ನಮ್ಮ ಮನೆಯಲ್ಲಿಯೂ ವೈದಿಕ ಸಂಸ್ಕೃತಿ, ಜೈನಸಂಸ್ಕೃತಿಯ ಪ್ರಭಾವಗಳು ಹೆಚ್ಚಾಗಿ ಆಗಿದ್ದು ಅವರ ಮಾತುಗಳಲ್ಲಿ ಹುರುಳಿಲ್ಲದೆ ಇರಲಿಲ್ಲ; ಜೊತೆಗೆ ಸಿರಿವಂತಿಕೆಯ ಸೊಬಗು ಬೇರೆ, ಮನೆಯಲ್ಲಿ ಲೋಕೋಪಯೋಗಿ ಇಲಾಖೆಯ ಆಳು-ಕಾಳುಗಳಲ್ಲದೆ, ಇತರ ಆಳುಗಳೂ ಬೇರೆ ಇದ್ದು ಮನೆ ಕೆಲಸ ನೋಡಿಕೊಳ್ಳುತ್ತಿದ್ದರು. ಇವೆಲ್ಲವೂ ಆ ಜನರಿಂದ ನಮ್ಮನ್ನು ಸ್ವಲ್ಪ ಬೇರೆಯಾಗಿಯೇ ಗುರುತಿಸುವಂತೆ ಮಾಡಿದ್ದವು.

ಯಳಂದೂರಿನಲ್ಲಿ ನನ್ನ ತಂದೆ ಕೆಲಸದಲ್ಲಿ ಇದ್ದಾಗಲೇ ಆನಂದ ತುಂಬಿದ್ದ ಮನೆಗೆ ಬರಸಿಡಿಲೆರಗಿತು. ತಂದೆ ಹೃದಯಾಘಾತದಿಂದ ಮೃತ್ಯುವಶರಾದರು. ಪೂನಾದಲ್ಲಿ ಓದುತ್ತಿದ್ದ ದೊಡ್ಡ ಮಗನಿಗೆ ಇಪ್ಪತ್ತೊಂದು ವರುಷ, ನನ್ನ ಪುಟ್ಟ ತಂಗಿಗೆ ಒಂದೂವರೆ ವರುಷ. ಮಧ್ಯದಲ್ಲಿ ನಾವು ಆರು ಜನ. ಒಟ್ಟು ಎಂಟು ಮಕ್ಕಳು. ಇಡೀ ಮನೆ ತಬ್ಬಲಿಯಾಯಿತು. ಮನೆಯಜಮಾನಿ ದುಃಖದಿಂದ ಖಾಯಿಲೆ ಮಲಗಿದರು.

ಮನೆಯ ವೈಭವಾಚರಣೆಗಳು ಯಾವುವೂ ನಿಲ್ಲಲಿಲ್ಲ. ತುಂಬ ಇರುತ್ತಿದ್ದ ನೆಂಟರಿಷ್ಟರ ಬಳಗ ದೂರ ಸರಿಯಲಿಲ್ಲ. ಮನೆಯಲ್ಲಿ ದುಡಿಯುವವರಿಲ್ಲ. ದೂರದಲ್ಲಿ ಓದುತ್ತಿದ್ದ ಹಿರಿಯ ಮಗನ ವಿದ್ಯಾಭ್ಯಾಸ, ಮಕ್ಕಳ ವಿದ್ಯಾಭ್ಯಾಸ, ವಯಸ್ಸಿಗೆ ಬಂದ ಮಕ್ಕಳ ಮದುವೆ ಎಲ್ಲವೂ ನಡೆಯಲೇಬೇಕಾದ ಕಾರ್ಯಗಳಾದುದರಿಂದ ಕೂಡಿ ಇಟ್ಟಿದ್ದ ಆಸ್ತಿ ಕರಗಲಾರಂಭಿಸಿತು. ಹೊಲ, ಗದ್ದೆ, ಮನೆ, ತೋಟ ಪಾತ್ರೆಪಡಗಗಳು ಅನಂತರ ಒಡವೆಗಳು ಕರಗಿ ಕಣ್ಮರೆಯಾದುವು. ನನ್ನ ತಾಯಿಯ ಸೊಂಟದಲ್ಲಿದ್ದ ಒಂದೂವರೆ ಸೇರಿನ ಬಂಗಾರದ ಡಾಬು ಒಂದು ಸೇರಿಗೆ ಇಳಿಯಿತು, ಅನಂತರ ಮೂರು ಪಾವಿಗೆ, ಮಗದೊಂದು ದಿನಪೂರ್ತಿ ಮಾರಾಟವಾಯಿತು. ನನ್ನ ತಂದೆ ಸತ್ತ ಏಳೆಂಟು ವರುಷಗಳು ಬಡತನದ ಬೇಗೆ ಮಕ್ಕಳಾದ ನಮ್ಮನ್ನು ಅಷ್ಟು ಕಾಡಲಿಲ್ಲ, ನನ್ನ ತಾಯಿ ಮೊದಲಿನ ಸುಖವನ್ನೇ ಮಕ್ಕಳಿಗೆ ಉಣಿಸಿದರು.

ಯಳಂದೂರಿನಿಂದ ಹೊರಟ ನಮ್ಮ ಸಂಸಾರ ಕ್ಯಾತ್ಸಂದ್ರದಲ್ಲಿ ನೆಲಸಿತು. ನನ್ನ ಪ್ರಾಥಮಿಕ ಮೂರು, ನಾಲ್ಕನೆಯ ತರಗತಿ ಕ್ಯಾತ್ಸಂದ್ರದಲ್ಲಿಯೇ ನಡೆಯಿತು. ತುಂಬಾ ಸುಶ್ರಾವ್ಯವಾಗಿ ಹಾಡುತ್ತಿದ್ದ ನನಗೂ ನನ್ನ ಅಕ್ಕನಿಗೂ ಇದರತ್ತ ಹೊಗಳಿಕೆಯಿಂದ ಉಬ್ಬಿಹೋಗುತ್ತಿದ್ದೆವು. ಚಳ್ಳಕೆರೆಯಲ್ಲಿಯೇ ಹಾಡು, ನೃತ್ಯ, ನಾಟಕಾಭಿನಯದ ಚಟುವಟಿಕೆಯಿಂದಿದ್ದ ನಮಗೆ ಯಳಂದೂರಿನಲ್ಲಿ ಹಾಗೂ ಕ್ಯಾತ್ಸಂದ್ರದಲ್ಲಿ ಇನ್ನೂ ಹೆಚ್ಚಿನ ಅವಕಾಶಗಳು ದೊರೆತವು. ನಮ್ಮ ತಾಯಿ ಹಾಗೂ ಮನೆಯವರೆಲ್ಲರ ನಿರಂತರ ಪ್ರೋತ್ಸಾಹ ನಮ್ಮ ಪಾಲಿನದಾಗಿತ್ತು. ಐದನೆಯ

ತರಗತಿಯಲ್ಲಿ ಮಾಧ್ಯಮಿಕಶಾಲೆ ಪ್ರವೇಶಿಸಿದೆ. ಅಲ್ಲಿ ಕನ್ನಡದ ಮೇಷ್ಟ್ರು ನರಸೀಯಪ್ಪನವರೂ ಇಂಗ್ಲೀಷಿನ ಮೇಷ್ಟ್ರು ವರ್ಧಮಾನಯ್ಯನವರೂ ತಮ್ಮ ಪಾಠಗಳಿಂದ ನನ್ನ ಮೇಲೆ ಪ್ರಭಾವ ಬೀರಿದವರು. ನರಸೀಯಪ್ಪನವರು ನನ್ನಿಂದ ಪದ್ಯಗಳನ್ನು ಇಂಪಾಗಿ ಹಾಡಿಸಿ, ತರಗತಿಯಲ್ಲಿ ಕೇಳುತ್ತಿದ್ದರು. ಮನೆಯ ಪರಿಸರ ಹಾಗೂ ಈ ಅಧ್ಯಾಪಕರ ಪ್ರೀತಿ-ವಿಶ್ವಾಸ ನನ್ನಲ್ಲಿ ಕನ್ನಡದ ಮೇಲಿನ ಅಭಿಮಾನವನ್ನು ಇಮ್ಮಡಿಸಿತು. ಅನಂತರದ ನನ್ನ ಪಯಣ ನನ್ನ ಅಕ್ಕ-ಭಾವನ ಮನೆಯಿದ್ದ ಅಮೃತೂರಿಗೆ ನಡೆಯಿತು. ಅಲ್ಲಿ ನನ್ನ ದೊಡ್ಡ ಭಾವ ಪಿ.ಪಾಂಡುರಂಗನಾಯ್ಕರು ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯರಾಗಿದ್ದರು. ಅಲ್ಲಿ ನನ್ನ ತರಗತಿಯ ಮೇಡಂ ಲಕ್ಷ್ಮಿ ನನಗೆ ತುಂಬಾ ಉತ್ತೇಜನ ಕೊಟ್ಟರು. ಅಂದಿನ ದಿವಸಗಳಲ್ಲಿ ಮೈಸೂರು ಮಹಾರಾಜರ ಜಯಂತ್ಯುತ್ಸವವನ್ನು ಅದ್ಧೂರಿಯಿಂದ ಶಾಲೆಗಳಲ್ಲಿ ಆಚರಿಸುವ ಸಂಪ್ರದಾಯವಿತ್ತು. ನನ್ನ ಹಾಗೂ ಗೆಳತಿಯರಿಂದೊಡಗೂಡಿದ ಕೋಲಾಳಿ ಜಡೆ ಕೋಲಾಟ ಅಂದಿನ ಸಮಾರಂಭದಲ್ಲಿ ಹೊಗಳಿಕೆಗೆ ಪಾತ್ರವಾಗಿದ್ದವು. ಪ್ರತಿ ದಿವಸ ಶಾಲೆಯಲ್ಲಿ 'ಕಾಯ್ವೊ ಶ್ರೀ ಗೌರಿ ಕರುಣಾಲಹರಿ'- ಮಹಾರಾಜರ ರಚನೆಯನ್ನೆ, ಪ್ರಾರ್ಥನೆಯ ಹಾಡಾಗಿ ಹಾಡಲಾಗುತ್ತಿತ್ತು. ಅದನ್ನು ಹೇಳಿಕೊಡುವ ಸರತಿ ನನ್ನದೇ ಆಗಿತ್ತು.

ನನ್ನ ಭಾವನಿಗೆ ಅಲ್ಲಿಂದ ಶಿವಮೊಗ್ಗ ಜಿಲ್ಲೆಯ ರಿಪ್ಪನ್‌ಪೇಟೆಗೆ ವರ್ಗವಾಯಿತು. ಅಲ್ಲಿ ನನ್ನ ಆರು, ಏಳನೆಯ ತರಗತಿಗಳು ನಡೆದವು. ನಾನು ಆರನೆಯ ತರಗತಿಯಲ್ಲಿದ್ದಾಗ, ದೇಶದಲ್ಲಿ ಸ್ವಾತಂತ್ರ್ಯ ಚಳುವಳಿ ಬಿರುಸಾಗಿ ನಡೆಯುತ್ತಿದ್ದ ಕಾಲ ಅದು. ಊರಿನ ಕೆಲವು ಮುಖ್ಯರಿಂದ ಒಡಗೂಡಿ ಶಾಲಾ ಮಕ್ಕಳೆಲ್ಲ ಊರಿನ ಪ್ರಮುಖ ಬೀದಿಯಲ್ಲಿ ಬಾವುಟ ಹಿಡಿದು 'ಝುಂಡಾ ಊಂಛ ರಹೇ ಹಮಾರ' 'ಬನ್ನಿ ಭಾರತೀಯರೇ, ಬನ್ನಿ ಧೀರಶೂರರೇ', - ಹಾಡನ್ನು ಹಾಡುತ್ತಾ, ಭಾರತ್ ಮಾತಾಕಿ ಜೈ, ಮಹಾತ್ಮಗಾಂಧಿಕಿ ಜೈ - ಎನ್ನುತ್ತ ಮೆರವಣಿಗೆ ಹೋಗುತ್ತಿದ್ದೆವು. ಸೊಗಸಾಗಿ ಹಾಡುತ್ತಿದ್ದ ನನ್ನ ಸಾಲು ಮೆರವಣಿಗೆಯಲ್ಲಿ ಬಾವುಟ ಮುಂದೆ ಇರುತ್ತಿತ್ತು. ಶಾಲೆಯ ಬಳಿ, ಬಂದು ಧ್ವಜಾರೋಹಣ ಮಾಡಿ, ಯಾರಾದರೂ ಹಿರಿಯರು ಮತನಾಡಿದ ದೇಶಭಕ್ತಿಯ ಭಾವನೆಯನ್ನು ಹೃದಯದಲ್ಲಿ ತುಂಬಿಕೊಂಡು ಮನೆಗೆ ಹಿಂದಿರುಗುತ್ತಿದ್ದೆ. ಬಿಳಿ ಉಡುಪು ಧರಿಸಿ ಮೆರವಣಿಗೆಯಲ್ಲಿ ತಪ್ಪದೆ ಪ್ರತಿ ದಿವಸವೂ ಭಾಗವಹಿಸಿದ ಆನಂದ ನನ್ನದಾಗಿತ್ತು. ನಾನು ರಿಪ್ಪನ್ ಪೇಟೆಯಲ್ಲಿ ಇದ್ದಾಗಲೇ ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದದ್ದು. ಆಗ ನಾನು ಯೋಚಿಸಿದ್ದೆ; 'ನಾನೂ ದೇಶದ ಹೋರಾಟದಲ್ಲಿ ಭಾಗಿಯಾಗಿದ್ದೇನೆ. ಪ್ರತಿದಿವಸ ನಾನು ಹಾಡನ್ನು ಹಾಡುತ್ತಾ ಮೆರವಣಿಗೆಯಲ್ಲಿ ಹೋಗಿಲ್ಲವೇ? ಅದೇನು ಸಾಮಾನ್ಯ ಕೆಲಸವೇ. ಆದ್ದರಿಂದ ನಾನೂ ಒಬ್ಬ ದೇಶಭಕ್ತಳು - ಎಂದು ಹೆಮ್ಮೆಯಿಂದ ಬೀಗಿದ್ದೆ.

ಆ ವೇಳೆಗೆ ನನ್ನ ಅಣ್ಣ ಪೂನಾದಲ್ಲಿ ಎಲ್.ಎಲ್.ಬಿ. ಮುಗಿಸಿ ಭದ್ರಾವತಿಯ ಕಾಗದ ಮತ್ತು ಉಕ್ಕಿನ ಕಾರ್ಖಾನೆಯ ಲೇಬರ್ ಡಿಪಾರ್ಟ್‌ಮೆಂಟಿನಲ್ಲಿ ಅಸಿಸ್ಟೆಂಟ್ ಕಮೀಷನರ್ ಆಗಿ ಕೆಲಸದಲ್ಲಿದ್ದರು. ನಮ್ಮ ಅಕ್ಕನ ಮನೆಯಿಂದ ಭದ್ರಾವತಿಯ ನನ್ನ ಅಣ್ಣನ ಮನೆಗೆ ನನಗೆ ವರ್ಗವಾಯಿತು. ಭದ್ರಾವತಿಯ ವೆಲ್‌ಫೇರ್ ಗರ್ಲ್ಸ್‌ಸ್ಕೂಲಿನಲ್ಲಿ ಒಂದು ವರ್ಷ ಓದಿ ಎಲ್.ಎಸ್. ಪಬ್ಲಿಕ್ ಪರೀಕ್ಷೆಯಲ್ಲಿ ಪ್ರಥಮ ಶ್ರೇಣಿಯಲ್ಲಿ ತೇರ್ಗಡೆಯಾದೆ. ನನ್ನ ಎಂಟು ವರುಷಗಳ ಪ್ರಾಥಮಿಕ ಹಾಗೂ ಮಾಧ್ಯಮಿಕ ವಿದ್ಯಾಭ್ಯಾಸ ಆರು ಊರುಗಳಲ್ಲಿ ನಡೆದಿತ್ತು. ಇಷ್ಟಾದರೂ ಎಲ್ಲೂ ನನ್ನ ವಿದ್ಯಾಭ್ಯಾಸ ಕುಂಠಿತವಾಗಲಿಲ್ಲ. ವರ್ಷದಿಂದ ವರ್ಷಕ್ಕೆ ಉತ್ತಮ ಶ್ರೇಣಿಯಲ್ಲಿ ತೇರ್ಗಡೆಯಾಗುತ್ತಾ ಬಂದಿದ್ದೆ. ಭದ್ರಾವತಿಯಲ್ಲಿ ನಮ್ಮ ಮುಖ್ಯೋಪಾಧ್ಯಾಯಿನಿಯಾಗಿದ್ದ

ಮದರ್ ರೋಸ್ ನನ್ನನ್ನು ತುಂಬಾ ಚೆನ್ನಾಗಿ ನೋಡಿಕೊಂಡರು.

'ನನ್ನ ಎಲ್.ಎಸ್. ತೇರ್ಗಡೆಯ ನಂತರ ತುಮಕೂರಿನ ಪ್ರೌಢಶಾಲೆಗೆ ಸೇರುತ್ತೇನೆ. ಟಿ.ಸಿ. ಕಳುಹಿಸಿ'- ಎಂದು ಅವರಿಗೆ ಪತ್ರ ಬರೆದಾಗ ಟಿ.ಸಿ. ಹಾಗೂ ಅಂಕಪಟ್ಟಿಯ ಜೊತೆಗೆ ನನ್ನ ವಿದ್ಯಾಭ್ಯಾಸ ನಿರ್ವಿಘ್ನವಾಗಿ ನೆರವೇರಲೆಂದು ಹಾರೈಸಿ ನನ್ನ ಗುಣಗಾನ ಮಾಡಿ ಪತ್ರ ಬರೆದಿದ್ದರು. ಅದು ಅವರು ನನಗೆ ಕೊಟ್ಟ ಪ್ರಥಮ ಅರ್ಹತಾ ಪತ್ರವಾಯಿತು. ಆ ಪತ್ರ ಬಹಳ ವರುಷಗಳವರೆಗೂ ನನ್ನ ಬಳಿ ಇತ್ತು.

ನನ್ನ ಪ್ರೌಢಶಾಲೆಯ ವಿದ್ಯಾಭ್ಯಾಸಕ್ಕೆ ಮನೆಯಲ್ಲಿ ಯಾರಿಂದಲೂ ವಿರೋಧ ಬರಲಿಲ್ಲ. ನನ್ನ ಮೂವರು ಅಕ್ಕಂದಿರೂ ಎಲ್.ಎಸ್. ತೇರ್ಗಡೆಯಾಗಿದ್ದರು. ಅವರಿಗೆ ಮುಂದೆ ಓದಲು ಆಸೆ ಇದ್ದರೂ ಅವಕಾಶ ಸಿಗಲಿಲ್ಲ. ನನಗೆ ಅವಕಾಶ ದೊರಕಿತ್ತು. ಆದರೆ ಓದುವುದು ಎಲ್ಲಿ? ಆ ವೇಳೆಗೆ ನಾನು ನನ್ನ ತಾಯಿಯ ಬಳಿಗೆ ಹಿಂತಿರುಗಿದ್ದೆ. ಕ್ಯಾತ್ಸಂದ್ರದಲ್ಲಿ ಪ್ರೌಢಶಾಲೆ ಇರಲಿಲ್ಲ. ತುಮಕೂರಿಗೆ ಹೋಗಬೇಕು, ಇದೊಂದು ಸಮಸ್ಯೆಯೇ ಆಯಿತು. ಆದರೆ ಮನಸ್ಸಿದ್ದರೆ ಮಾರ್ಗ ಇದ್ದೇ ಇದೆ. ಶಾಲೆ ಇಲ್ಲದಿದ್ದರೇನು? ಗರ್ಲ್ಸ್ ಹೈಸ್ಕೂಲಿಗೆ ಸೇರಿದೆ. ಪ್ರತಿದಿವಸ ರೈಲಿನಲ್ಲಿ ಓಡಾಟ. ಒಬ್ಬ ಹುಡುಗಿ ಹೈಸ್ಕೂಲ್ ಓದುವುದು, ರೈಲಿನಲ್ಲಿ ಪ್ರತಿದಿವಸ ಊರಿಂದ ಊರಿಗೆ ಓಡಾಡುವುದು - ಇದು ನಮ್ಮೂರಿನ ಜನರಿಗೆ ಅಂದು (1950) ಒಂದು ಕುತೂಹಲದ ಸಂಗತಿಯಾಯಿತು. ಅದರಲ್ಲಿಯೂ ಮೇಲ್ಜಾತಿಯ ಹೆಣ್ಣುಮಕ್ಕಳು ಓದದೆ ಮನೆಯಲ್ಲಿ ಕುಳಿತಿರುವಾಗ, ಈ ಶೂದ್ರ ಹೆಣ್ಣುಮಗಳಿಗ್ಯಾಕೆ ಇಂಥ ಶ್ರಮದ ವಿದ್ಯಾಭ್ಯಾಸ ಎಂದು ಕೆಲವರು ಮಾತನಾಡಿಕೊಂಡದ್ದೂ ಉಂಟು. ನನಗಾದರೋ ಅದ್ಯಾವುದರ ಕಡೆಗೂ ಗಮನವಿಲ್ಲ, ನಾನಾಯಿತು, ನನ್ನ ಓದಾಯಿತು. ಮೂರು ವರ್ಷಗಳೂ ಮೂರು ದಿವಸಗಳಂತೆ ಕಳೆಯಿತು. ಸಾಹಿತ್ಯಿಕ, ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ನನ್ನ ಆಸಕ್ತಿಗೆ ಆ ಶಾಲೆಯಲ್ಲಿ ಸಾಕಷ್ಟು ಅವಕಾಶ ಸಿಕ್ಕಿತು. ನಾನು ಎಸ್. ಎಸ್. ಎಲ್. ಸಿ. ತರಗತಿಯಲ್ಲಿದ್ದಾಗ, ಶಾಲೆಯ ವಾರ್ಷಿಕೋತ್ಸವಕ್ಕೆ ಹಾಸ್ಯ ಸಾಹಿತಿ ನಾ. ಕಸ್ತೂರಿ ಹಾಗೂ ಅವರ ಪತ್ನಿಯನ್ನು ಕರೆಸಿದ್ದರು. ಹಾಸ್ಯ ತುಂಬಿದ, ಅವರ ಭಾಷಣ ಕೇಳಿದ ನನ್ನ ತುಟಿಯ ಮೇಲೆ ಇನ್ನೂ ಮುಗುಳ್ನಗೆ ಚೆಲ್ಲುತ್ತಿದೆ.

ಉತ್ತಮ ದರ್ಜೆಯಲ್ಲಿ ತೇರ್ಗಡೆ ಹೊಂದಿದ್ದೆ (1953). ನನ್ನ ತೇರ್ಗಡೆ ನಮ್ಮೂರಿನವರಿಗೆಲ್ಲಾ ಸಂತಸ ತಂದಿತ್ತು. ನಮ್ಮೂರಿನಿಂದ ನಾನೊಬ್ಬಳು ಹುಡುಗಿ, ಹದಿಮೂರು ಜನ ಹುಡುಗರು ಎಸ್. ಎಸ್. ಎಲ್. ಸಿ ಪರೀಕ್ಷೆಗೆ ಕಟ್ಟಿದ್ದೆವು. ತೇರ್ಗಡೆಯಾಗಿದ್ದವಳು ನಾನೊಬ್ಬಳೆ! ಅದೂ ಉತ್ತಮ ದರ್ಜೆಯಲ್ಲಿ ನಮ್ಮೂರಿಗೆ ನಾನೊಬ್ಬಳು ಆದರ್ಶ ವಿದ್ಯಾರ್ಥಿನಿಯಾದೆ. ಮನೆ-ಮನೆಯಲ್ಲಿ ಚಿಕ್ಕಮಕ್ಕಳಿಗೆ ತಂದೆ-ತಾಯಂದಿರು 'ಕಮಲಮ್ಮ ಓದುತ್ತಾಳಲ್ಲ, ಹಾಗೆ ನೀವೆಲ್ಲ ಓದಬೇಕು'- ಎಂದು ಹೇಳುವುದು ಸಾಮಾನ್ಯ ಸಂಗತಿಯಾಯಿತು.

ವಿದ್ಯಾಭ್ಯಾಸದ ವಿಷಯದಲ್ಲಿ ನಾನೆಂದೂ ಅಂದಿನಿಂದ ಹಿಂದಿರುಗಿ ನೋಡಲಿಲ್ಲ. ಮುಂದೆ ತುಮಕೂರಿನ ಪ್ರಥಮ ದರ್ಜೆ ಕಾಲೇಜಿಗೆ ಜೂನಿಯರ್ ಇಂಟರ್‌ಮೀಡಿಯೇಟ್‌ಗೆ ಸೇರಿದೆ. ಆಗ ಇನ್ನೂ ಪಿ.ಯು.ಸಿ. ಬಂದಿರಲಿಲ್ಲ. ಇಂಟರ್ ಮೀಡಿಯಟ್‌ನ್ನು (ಸೀನಿಯರನ್ನು) ಪ್ರಥಮ ಪ್ರಯತ್ನದಲ್ಲಿಯೇ ತೇರ್ಗಡೆ ಹೊಂದಿ ಮುಗಿಸಿ ಮೈಸೂರಿನ ಮಹಾರಾಜಾ ಕಾಲೇಜಿನಲ್ಲಿ ಬಿ.ಎ. ಆನರ್ಸ್, ಎಂ.ಎ. ಪದವಿಗಳನ್ನು ಗಳಿಸಿದೆ. ಅನಂತರ ಪಿಎಚ್.ಡಿ.ಯನ್ನೂ ಮೈಸೂರು ವಿಶ್ವವಿದ್ಯಾನಿಲಯದಿಂದಲೇ ಪಡೆದೆ. ಕಾಲೇಜು ಶಿಕ್ಷಣದ ಅನುಭವವೇ ಬೇರೆ ರೀತಿಯದಲ್ಲವೆ! ಅಲ್ಲಿಯ ವಿಚಾರಗಳು ಪ್ರೌಢತೆಯ ನೆಲೆಯಲ್ಲಿ ವಿಹರಿಸಬಲ್ಲವಾಗಿರುತ್ತವೆ.

ರಂಗೋಲಿ ಧ್ಯಾನ

ಇಲ್ಲೂ ಇದೆ ಸಮಾಧಾನ
ಸಂತೆ ಬೆಟ್ಟ ಸಮುದ್ರ

ಮಧ್ಯಾಹ್ನ ಅಂಗಾಲಿಗಂಟಿ ಕಿರಿಕಿರಿಕೊಟ್ಟ
ಮನೆಯಂಗಳದ ಅದೇ ಟಾರು ರೋಡಿನ ಮೇಲೆ
ಮಧ್ಯರಾತ್ರಿ ರಂಗೋಲಿ ಧ್ಯಾನ

ಕುಕ್ಕೆ ಕನಸುಗಳ ಜೊತೆಗೆ
ಚುಕ್ಕೆ ಹಕ್ಕಿಯೂ ನಿಜ
ನವಿಲಿಗಿಕ್ಕಿದ ಬಣ್ಣ ನಿಜ
ಸಮಾಧಾನ, ಸಮಚಿತ್ತ
ಅದು ಜೀವ ಚಿತ್ರ
ನೆನಪುಗಳ ಅಡವಿಟ್ಟು ಹುಟ್ಟಿಸಿದ ಪತ್ರ,
ಸಂಕಟ ಸರಿದು, ಬದುಕು ಹಗೂರಾಗಿ
ನಿರಾಳವಾಗಿ ರಾತ್ರಿ ಮುಗಿಯುತ್ತಿತ್ತು.



ಚಿತ್ರದ ಮೇಲೆ ಚಕ್ರಗಳು ಹತ್ತಿ
ಅಪ್ಪಚ್ಚಿಯಾದಾಗ ಬೆಳಗು ಹರಿದು ಹಗಲು ಕಿವುಡಾಯಿತು
ಕುರುಡಾಯಿತು,
ಚಿತ್ತಾರ ನಿರಾಧಾರ ರಾತ್ರಿ
ಕನಸಿಗೇನು ಆಧಾರ
ಸಾವೇ, ನೋವೆ ಸಹಜವೇ ಇಲ್ಲ ಸಮಾಧಾನವೇ
ಕಣ್ಣೊಳಗೆ ಕಣ್ಣಿಟ್ಟು ನೋಡಿದರೆ
ಇದು ಒಬ್ಬಳದಲ್ಲ
ಸಂತೆಯದು,
ಬೆಟ್ಟದ್ದು
ಕಾಡಿನದು
ನದಿ ಸಮುದ್ರಗಳದ್ದು
ಇಲ್ಲಿ ಹೀಗೇ
ಕಟ್ಟುತ್ತಲೇ ಕೆಡಹುವುದು
ಹುಟ್ಟುತ್ತಲೇ ಸಾಯತೊಡಗುವುದು

– ಕೃಷ್ಣಮೂರ್ತಿ ಬಿಳಿಗೆರೆ

ಸ್ವಾತಂತ್ರ್ಯೋತ್ತರ ಕನ್ನಡ ಸಾಹಿತ್ಯ ಹಾಗೂ ವಿಭಿನ್ನ ವಾದಗಳು

ಡಾ|| ಬಿ. ಮುರಾರಿ ಬಲ್ಲಾಳ

(ಹಿಂದಿನ ಸಂಚಿಕೆಯಿಂದ)

ಈ ದೃಷ್ಟಿಯಲ್ಲಿ ಕಳೆದ 50 ವರುಷಗಳ ಸಾಹಿತ್ಯಿಕ ವಾದಗಳನ್ನು ಅವಲೋಕಿಸಿದಾಗ ಯಾವ ಸೈದ್ಧಾಂತಿಕ ಚೌಕಟ್ಟಿನೊಳಗೂ ಸಂಪೂರ್ಣವಾಗಿ ನೆಲೆಗೊಳ್ಳದೆ ಸತ್ಯ ನಿಷ್ಠವಾದ ಕೆಲವೊಂದು ಪ್ರಮುಖ ಸಾಹಿತಿಗಳನ್ನು ಉಲ್ಲೇಖಿಸಬಹುದು.

20ನೆಯ ಶತಮಾನದುದ್ದಕ್ಕೂ, ಅಂದರೆ ನವ್ಯೋತ್ತರ ಕಾಲಘಟ್ಟದವರೆಗೂ ಚಾಚಿ ನಿಂತ ವಿಶಾಲ ಜೀವಿತಾವಧಿಯಲ್ಲಿ ಬದುಕಿದ ಶಿವರಾಮ ಕಾರಂತರ 'ಚೋಮನದುಡಿ' ಸ್ವಾತಂತ್ರ್ಯಕ್ಕಿಂತ ಬಹಳ ಪೂರ್ವದಲ್ಲಿ ಬರೆದಿದ್ದರೂ ಕೂಡ ಆ ಕಾದಂಬರಿಯು ಎತ್ತುವ ಮೂಲಭೂತ ಸವಾಲುಗಳು ಇಂದಿಗೂ ಪ್ರಸ್ತುತವಾಗಿವೆ. 1970ರ ದಶಕದಲ್ಲಿ ಬಿ.ವಿ. ಕಾರಂತರು ಚೋಮನ ದುಡಿಯನ್ನು ಸಿನೆಮಾ ಮಾಡಿದಾಗಲೂ, ಆ ಸಿನೆಮಾದ ವಸ್ತು ಹಳೆಯ ಸರಕೆಂದು ಎನಿಸಲಿಲ್ಲ. ಆದರೆ ಮಾಸ್ತಿಯವರ ಅನೇಕ ಕತೆಗಳು ಇಂದು ಸ್ವಲ್ಪಮಟ್ಟಿಗೆ ಹಳತು ಅನ್ನಿಸಿಬಿಡುತ್ತದೆ. ನರಸಿಂಹಸ್ವಾಮಿಯವರ ದಾಂಪತ್ಯದ ಕಲ್ಪನೆಯೂ ತೀರ ಸರಳವಾಗಿ ಸ್ವಲ್ಪ ಹಳತೆಂದೆನಿಸುತ್ತದೆ. ನಿರಂಜನ, ಅನಕೃ, ಬಸವರಾಜ ಕಟ್ಟೀಮನಿ ಮೊದಲಾದ ಪ್ರಗತಿಶೀಲರ ವಸ್ತುವೂ ಸ್ವಲ್ಪ ಮಟ್ಟಿಗೆ ಪ್ರಸ್ತುತತೆ ಕಳಕೊಂಡಂತೆನ್ನಿಸುತ್ತದೆ. ಇವುಗಳಲ್ಲಿ ಹೆಚ್ಚಿನವು ಮಧ್ಯಮ ವರ್ಗದ ಲೋಕದೃಷ್ಟಿ, ಹುಸಿ ಆದರ್ಶ, ಹುಸಿ ಸೌಂದರ್ಯದ ಕಲ್ಪನೆಯಿಂದ ಪ್ರೇರಿತವಾದವುಗಳೆನ್ನಬಹುದು. ಆದರೆ, ಚೋಮನ ದುಡಿಯಲ್ಲಿ ನಿಷ್ಠುರ ಸತ್ಯ ದರ್ಶನವಿದೆ. ಕಾರಂತರು ಅಲ್ಲಿ ತನ್ನ ವರ್ಗ ಪ್ರಜ್ಞೆಯನ್ನೂ ಮೀರಿ ಬಿಡುವುದರಿಂದಲೇ 'ಚೋಮನದುಡಿ' ಇಂದಿಗೂ 'ಔಟ್ ಆಫ್ ಡೇಟ್' (out of date) ಅಂತ ಅನಿಸುವುದಿಲ್ಲ. 1950ರಲ್ಲಿ ಬರೆದ ಕಾರಂತರ 'ಔದಾರ್ಯದ ಉರುಳಲ್ಲಿ' ಎಂಬ ಕಾದಂಬರಿಯಲ್ಲಿ, ಸ್ವಾತಂತ್ರ್ಯ ಹೋರಾಟಕ್ಕೆ ಒಳಗಿನವರಾಗಿದ್ದ ಕಾರಂತರ ಸ್ವಾತಂತ್ರ್ಯ ಹೋರಾಟದ ಭ್ರಮ ನಿರಸನದ ಚಿತ್ರಣವಿದೆ. ಕಾರಂತರ ಭ್ರಮ ನಿರಸನದ ಜತೆ ಕಟ್ಟೀಮನಿಯ 'ಮಾಡಿ ಮಡಿದವರು' ಅಥವಾ ಪ್ರಗತಿಶೀಲರ ಕೆಲವು ಕಾದಂಬರಿಗಳ ಅಬ್ಬರವನ್ನು ಹೋಲಿಸಿದರೆ, ಭಾರತದ ಸ್ವತಂತ್ರ ಪ್ರಭುತ್ವದ ನಿರ್ಮಾಣದ ಹುಸಿ ಅಬ್ಬರಕ್ಕಿಂತ ಕಾರಂತರ ಭ್ರಮ ನಿರಸನವೇ ಹೆಚ್ಚು ಮೌಲಿಕವಾಗಿ ನಿಲ್ಲುತ್ತದೆ.

ಕುವೆಂಪು ಅವರ ಆತ್ಮ ಚರಿತ್ರೆಯಂತಿರುವ 'ಮಲೆಗಳಲ್ಲಿ ಮದುಮಗಳು' ಕೂಡ ಈ

ರೀತಿಯ ಮನೋಧರ್ಮದ ಕಾದಂಬರಿ ಎನ್ನಬಹುದು. 'ಕಾನೂನು ಹೆಗ್ಗಡಿತಿ'ಯಲ್ಲಿದ್ದ ಆದರ್ಶಗಳು, ಹೊಸ ಯುಗದ ಸಂಭ್ರಮಗಳು, 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ವ್ಯಕ್ತವಾಗುವುದಿಲ್ಲ. ದೈನಂದಿನ ಬದುಕಿನ ಕಟುವಾಸ್ತವತೆ, ಭ್ರಮ ನಿರಸನಗಳು ಈ ಕಾದಂಬರಿಯ ಮೂಲ ದ್ರವ್ಯವಾಗಿದೆ. ಸ್ವಾತಂತ್ರ್ಯ ಹೋರಾಟದ ಸಂಭ್ರಮದ ಜತೆಜತೆಯೇ ಮನುಷ್ಯ ದಾಸ್ಯ-ಬಂಧನಗಳಲ್ಲಿರುವ ವಿವಿಧ ಮುಖಗಳೂ, ಆ ಸ್ವಾತಂತ್ರ್ಯದ ವಿವಿಧ ಹಂತಗಳ ಚಿತ್ರಣಗಳೂ ಈ ಕಾದಂಬರಿಯಲ್ಲಿ ಬಿಚ್ಚಿಕೊಳ್ಳುತ್ತವೆ. ಸ್ವಾತಂತ್ರ್ಯವೆಂಬುದೂ ಸಾಪೇಕ್ಷವಾದುದು ಎಂಬ ಪಠ್ಯದ ಸುತ್ತ ಈ ಕಾದಂಬರಿ ಹೆಣೆಯಲ್ಪಟ್ಟಿದೆ. ಬಂಧನ, ಸ್ವಾತಂತ್ರ್ಯ ದಾಸ್ಯ ಹುಸಿ ಆದರ್ಶ - ಇವೆಲ್ಲವನ್ನೂ ಭೂಮಿ, ಹೆಣ್ಣು ಪ್ರೀತಿ, ಹಸಿವು, ಸಂಬಂಧಗಳ ದೌರ್ಬಲ್ಯ ಮುಂತಾದ ಮೂಲಭೂತ ಮೂರ್ತ ಸಂಗತಿಗಳ ಮೂಲಕವೇ ಕುವೆಂಪು ಹೊರಹೊಮ್ಮಿಸುತ್ತಾರೆ. ಇಲ್ಲಿ ಯಾವುದೂ ಅಮೂರ್ತವಿಲ್ಲ. ಹಾಗಾಗಿಯೇ ಈ ಕಾದಂಬರಿ ಬದುಕಿಗೆ, ವಾಸ್ತವತೆಗೆ, ಈ ನೆಲಕ್ಕೆ ಹತ್ತಿರವಾದ ಕಾದಂಬರಿಯಾಗಿ ಬಿಡುತ್ತದೆ; ಮಾತ್ರವಲ್ಲದೆ, ಎಲ್ಲ ಸಾಹಿತ್ಯಿಕ ವಾದಗಳ ಚೌಕಟ್ಟನ್ನೂ ಮೀರಿ ನಿಲ್ಲುವಷ್ಟು ಗಟ್ಟಿಯಾಗಿದೆ.

ನವ್ಯ ಕಾವ್ಯ ಹುಟ್ಟಿಕೊಂಡದ್ದೇ ಈ ಭ್ರಮ ನಿರಸನದಲ್ಲಿ. ಅಡಿಗರ ಕಾವ್ಯದಲ್ಲಿ ಪ್ರಧಾನವಾಗಿ ನಾವು ಕಾಣುವುದು ರಾಜಕೀಯ ಭ್ರಮನಿರಸನವನ್ನು. ಆದರೆ ಅಡಿಗರ ರಾಜಕೀಯ ಭ್ರಮನಿರಸನವೂ ಕವಿ ಸಿದ್ಧಲಿಂಗಯ್ಯನವರ ಭ್ರಮನಿರಸನವೂ ಏಕರೀತಿಯದ್ದಲ್ಲ. ಅಡಿಗರ ಭ್ರಮನಿರಸನ ಬಲಪಂಥೀಯನೊಬ್ಬನ ಭ್ರಮನಿರಸನ. ಆದರೂ ಅಡಿಗರು ತನ್ನ ಅತ್ಯುತ್ತಮ ಕಾವ್ಯಗಳಲ್ಲಿ, ಕಾರಂತರು 'ಚೋಮನ ದುಡಿ'ಯಲ್ಲಿ ತನ್ನ ವರ್ಗಪ್ರಜ್ಞೆ ಮೀರಿ ಬಿಡುವಂತೆಯೇ, ತನ್ನ ರಾಜಕೀಯ ಒಲವುಗಳನ್ನೆಲ್ಲ ಮೀರಿ ನಿಷ್ಠುರ ಸತ್ಯದ ದರ್ಶನ ಮಾಡಿಸುತ್ತಾರೆ. ಅಡಿಗರ ಅತ್ಯುತ್ತಮ ಕವಿತೆಗಳಲ್ಲಿ, ನಾವು ಈಗ ಬದುಕಿರುವ ಕಾಲದ ತೀರ ವಿಮರ್ಶೆಯ ಜತೆಜತೆಯೇ ನಮಗೆ ದಕ್ಕಿರುವ ಪ್ರಾಚೀನ ಸಂಸ್ಕೃತಿಯ ಬಹ್ವಂಶ ಅವಶೇಷವೂ ಕೊಳೆತದ್ದು ಎನ್ನುವ ನಮ್ಮ ಪರಂಪರೆಯ ಕಟುವಿಮರ್ಶೆಯೂ ಇದೆ. ಉಡುಪಿಯ ಬಗ್ಗೆ ಅವರು ಬರೆದ ಕೆಲವು ಉತ್ತಮ ಕವನಗಳಲ್ಲಿ, ಪಾಚಿಗಟ್ಟಿದ ಸಂಸ್ಕೃತಿಯ ಅವಶೇಷದ ವಿವರಣೆಯ ಜತೆ, ನಮ್ಮ ಸಂಸ್ಕೃತಿಯ 'ಹುಗಿದ ಹಳ ಬಾವಿಯ ಹಳಸ'ನ್ನು ಆಯ್ದ ಶಬ್ದಗಳಿಂದ ಅವರು ಲೇವಡಿ ಮಾಡುತ್ತಾರೆ. ಒಬ್ಬ ಪೂರ್ತ ಬಲಪಂಥೀಯ ಒಲವಿರುವ ಲೇಖಕನಿಂದ ಇದು ಸಾಧ್ಯವೇ ಇಲ್ಲ. ಅಡಿಗರ ಈ ಮೀರುವ ಗುಣವೇ ಅವರನ್ನು ಸ್ವಾತಂತ್ರ್ಯೋತ್ತರ ಕನ್ನಡದ ಒಬ್ಬ ಮಹತ್ವದ ಕವಿಯ ಸ್ಥಾನದಲ್ಲಿ ನಿಲ್ಲಿಸಿತು.

ಕಂಬಾರರು ತನ್ನ ಕಾವ್ಯದಲ್ಲಿ ಆಧುನಿಕ ಭಾರತದ ಅಭಿವೃದ್ಧಿಯ ಪರಿಕಲ್ಪನೆಯನ್ನು, ಪ್ರಗತಿಯ

ತರ್ಕವನ್ನು, ಪ್ರಭುತ್ವದ ಭಾಷೆಯನ್ನು ನಿರಾಕರಿಸುತ್ತಾರೆ. ಈ ಸಾರಾಸಗಟಾದ ನಿರಾಕರಣೆ-ವಿರೋಧಗಳಿಂದಾಗಿ, ಅವರು ಹಳೆಯ ಊಳಿಗಮಾನ್ಯ ಪದ್ಧತಿಯ ಸ್ಮೃತಿಯಲ್ಲೇ ವಿಹರಿಸುವವರು ಎಂಬ ಅಪಖ್ಯಾತಿಯೂ ಅವರ ಮೇಲಿದೆ. ಅವರ ಕಾವ್ಯವನ್ನು 'ಫ್ಯೂಡಲ್ ಜಂಕ್' (Feudal Junk) ಎನ್ನುವವರೂ ಇದ್ದಾರೆ. ಆದರೆ, ಈ ಟೀಕೆ ಎಷ್ಟು ಮಟ್ಟಿಗೆ ಸರಿ ಎಂಬುದನ್ನು ವಿಮರ್ಶಿಸಬೇಕು. ಶಿವಾಪುರದ ಹಳ್ಳಿಯ ನೆನಪುಗಳು, ವಿವೇಚನಾ ರಹಿತ ಆಧುನಿಕ ಪರಿಕಲ್ಪನೆಯನ್ನು ವಿರೋಧಿಸಲಿಕ್ಕೆ ಕಂಬಾರರಿಗೆ ಒಂದು ನೆವವಾಗಿದೆ. ಆಧುನಿಕ ಭಾರತದ ಪ್ರಭುತ್ವದ ಕ್ರೌರ್ಯದ ವಿರುದ್ಧ ಬಚ್ಚಿಟ್ಟುಕೊಳ್ಳುವ ಅಡಗುತಾಣವಾಗಿವೆ. ಅಷ್ಟೆ.

* * *

ಆಧುನಿಕತೆಯ ತೀವ್ರ ಕಾಲಘಟ್ಟವಾದ ಕಳೆದ 50 ವರುಷಗಳುದ್ದಕ್ಕೂ ಚಾಚಿ ನಿಂತಿರುವ ಅನಂತಮೂರ್ತಿ-ಲಂಕೇಶ್ ಅವರು ಎಚ್ಚರದ ಆಧುನಿಕರಾಗಿ ನಿತ್ಯ ಸಂದೇಹಿಗಳಾಗಿ ಸ್ವಾತಂತ್ರ್ಯೋತ್ತರ ಸಾಹಿತ್ಯಿಕ ವಾದಗಳಲ್ಲಿ ಮುಖ್ಯರೆನಿಸಿಕೊಳ್ಳುತ್ತಾರೆ. ಆಧುನಿಕತೆಯ ಪರ ವಕಾಲತ್ತು ವಹಿಸುವ ಅನೇಕ ನವ್ಯರ ಮಧ್ಯದಲ್ಲಿ ಅನಂತಮೂರ್ತಿ ತಮ್ಮ ನವ್ಯ ಪ್ರಜ್ಞೆಯನ್ನೇ ವಿಮರ್ಶಿಸಿಕೊಳ್ಳುವ ಎಚ್ಚರವುಳ್ಳ ಭಿನ್ನರು. ಈ ಶತಮಾನದ ಪ್ರಸ್ತುತ ಸಂದರ್ಭದಲ್ಲಿ ಒಬ್ಬ ಸೂಕ್ಷ್ಮ ಚಿಂತಕ ಈ ಕಾಲದ ಸಂಕೀರ್ಣತೆಯೆಲ್ಲವನ್ನೊಳಗೊಂಡವನಾಗಿ ಅತ್ಯಂತ ಸಂದಿಗ್ಧ ಸ್ಥಿತಿಯಲ್ಲಿರುತ್ತಾನೆ. ಅನಂತಮೂರ್ತಿ ಎಲ್ಲ ಕಾಲದಲ್ಲೂ ಸಂದಿಗ್ಧ ಸ್ಥಿತಿಯಲ್ಲೇ ಇರುತ್ತಾರೆ. ಆದರೆ ಸ್ಟಾಲಿನಿಗಾಗಲೀ, ಹಿಟ್ಲರಿಗಾಗಲೀ ಆಯತುಲ್ಲ ಖೊಮೆನಿಗಾಗಲೀ ತಮ್ಮ ತಮ್ಮ ಧೋರಣೆಗಳ ಬಗ್ಗೆ ಸಂದೇಹವೇ ಇಲ್ಲ. ಒಬ್ಬ ಸಾಮಾನ್ಯ ಲೇಖಕನಿಗೂ ಹಾಗೆ. ಸಂದೇಹವಿಲ್ಲ. ಸಂದೇಹವೇ ಇಲ್ಲದವರು ಅನೇಕ ಬಾರಿ ತಮ್ಮ ಧ್ಯೇಯಕ್ಕೆ ಉಗ್ರನಿಷ್ಠೆಯುಳ್ಳವರಾಗಿ ಅನಾಹುತಗಳಿಗೆ, ಕ್ರೂರತೆಗೆ, ಬಲಪ್ರದರ್ಶನಕ್ಕೆ ಕಾರಣವಾಗುವ ಸಾಧ್ಯತೆಯೂ ಇದೆ.

ಅನಂತಮೂರ್ತಿ, 'ಮಾಡರ್ನ್ ಇಂಡಿಯನ್ ಸ್ಟೇಟ್'ನ ಶಕ್ತಿಯ ಪರಿಕಲ್ಪನೆಯನ್ನು ಸಂದೇಹದಿಂದ ನೋಡುತ್ತಾರೆ, ಪ್ರಭುತ್ವದ ಭಾಷೆಯನ್ನು ಅನುಮಾನಿಸುತ್ತಾರೆ. ಅವರ ಸುತ್ತಲಿನ ಸಮಾಜ, ಬಲ, ಅಧಿಕಾರ, ಹಣವನ್ನು ಆರಾಧಿಸುವುದನ್ನು ಸೂಕ್ಷ್ಮವಾಗಿ ಗಮನಿಸುವ ಅನಂತಮೂರ್ತಿ, ಕೇಂದ್ರೀಕೃತ ವ್ಯವಸ್ಥೆಯತ್ತ ತುಡಿಯುವ ರಾಷ್ಟ್ರೀಯವಾದ, ತಂತ್ರಜ್ಞಾನದ ಪ್ರಗತಿ ಮುಂತಾದ 20ನೆಯ ಶತಮಾನದಲ್ಲಿ ಅತಿಯಾಗಿ ವಿಜೃಂಭಿಸುವ ಬಲದ ಸಂಕೇತಗಳನ್ನು ಅನುಮಾನದಿಂದ ಗ್ರಹಿಸುತ್ತಾರೆ. ಹಾಗಾಗಿ, ಬಲದ ನಿರಾಕರಣೆಯೇ ಅನಂತಮೂರ್ತಿಯ ಬರಹಗಳ ಪ್ರಧಾನ ಲಕ್ಷಣವಾಗಿದೆ.



'ಘಟಶ್ರಾದ್ಧ', 'ಸೂರ್ಯನ ಕುದುರೆ', 'ಕ್ಲಿಪ್ ಜಾಯಿಂಟ್' ಮುಂತಾದ ಅವರ ಪ್ರಮುಖ ಕತೆಗಳಲ್ಲಿ ಅವರ ಬಲದ ನಿರಾಕರಣೆಯ ಸ್ಪಷ್ಟ

ತೋಳತುಗಳು ವ್ಯಕ್ತವಾಗುತ್ತವೆ. ಅನಂತಮೂರ್ತಿ. ಪ್ರಭುತ್ವವಾದದ ಪೊಳ್ಳುತನವನ್ನು ಸ್ಪಷ್ಟವಾಗಿ ಮನಗಂಡವರು. ಬಲಪಂಥೀಯ, ಎಡಪಂಥೀಯ ವಾದಗಳೆರಡರ ನೆಲೆಗಟ್ಟೂ ಒಂದೇ ಇದ್ದು ಇವೆರಡೂ ಬಲದ ನೆಲೆಗಟ್ಟಿನ ಮೇಲೇ ನಿಂತಿರುವುದರಿಂದ. ಈ ಎರಡು ವಾದಗಳಲ್ಲೂ ಏನೂ ವ್ಯತ್ಯಾಸಗಳಿಲ್ಲ. ಈ ಎರಡರಲ್ಲೂ ಸಮಾನತೆ, ಸಮಷ್ಟಿಹಿತ ಸಾಧ್ಯವಿಲ್ಲ ಎಂದು ಅನಂತಮೂರ್ತಿ ಅಲ್ಲಲ್ಲಿ ತಮ್ಮ ಮಾತುಗಳಲ್ಲಿ ವಿಷಾದದಿಂದ ನುಡಿಯುತ್ತಾರೆ.



ಇಡಿಯ ಜಗತ್ತನ್ನೇ ಒಂದು ರಾಷ್ಟ್ರ, ಒಂದು ಸಂಸ್ಕೃತಿ, ಒಂದು ಜನಾಂಗವನ್ನಾಗಿ ಪರಿವರ್ತಿಸುವ ದುರಹಂಕಾರದ ಜಾಗತಿಕೀಕರಣವು ನಮ್ಮ ಕಾಲ ಬುಡಕ್ಕೇ ಬಂದಿರುವಾಗ. ಇದರಿಂದ "ನಮ್ಮ ಅತ್ಯುತ್ತಮ ಮನಸ್ಸುಗಳೂ ಪ್ರಭಾವಿತರಾಗಿರುವಾಗ. ಮಡಿವಂತ ಸಂಸ್ಕೃತವಾದಿಗಳೂ ಇಂಗ್ಲೀಷು ವಾದಿಗಳಾಗುವಾಗ, ಪಾಶ್ಚಾತ್ಯ ದೇಶದ ಅಭಿವೃದ್ಧಿಯ ಕಲ್ಪನೆ ಮತ್ತು ಪಾಶ್ಚಾತ್ಯೀಕರಣದ ಆಕರ್ಷಣೆಯ ರಾವ"ನ್ನು ಬಿಡಿಸುವುದು ಹೇಗೆ ಎಂಬ ಆತಂಕದಲ್ಲಿ ಅನಂತಮೂರ್ತಿ ಮತ್ತೆ ಮತ್ತೆ ನಿರ್ಬಲರಾದ ಪರಮಹಂಸ, ರಮಣ, ಗಾಂಧಿ ಮೊದಲಾದ ಬಲದ ಬಗ್ಗೆ ಸಂಶಯ ಪಡುವ ಮತ್ತು ಅದನ್ನು ನಿರಾಕರಿಸುವ ಸಂತರತ್ತ ಹೊರಳುತ್ತಾರೆ. ಆಕರ್ಷಿತರಾಗುತ್ತಾರೆ. ಆ ಮಹಾನುಭಾವರೆಲ್ಲರೂ ಅನುತಮೂರ್ತಿಗೆ ಯುರೋಪು ಸಂಸ್ಕೃತಿಯನ್ನು ತಿರಸ್ಕರಿಸುವ ಉಪಾಯಗಳಾಗಿ ಬಿಡುತ್ತಾರೆ. ಇಡಿಯ ಜಗತ್ತನ್ನೇ ಒಂದು ಸ್ವಾಮ್ಯಕ್ಕೆ ಒಳಪಡಿಸುವ ಸಾಧ್ಯತೆಯಿರುವ ಇಂದಿನ ಆಧುನಿಕತೆಗೆ ಮುಖಾಮುಖಿಯಾಗಿ ಅನಂತಮೂರ್ತಿ ಗಾಂಧಿಯ ಸ್ಥಳೀಯತೆಗೆ ಒತ್ತು, ಗ್ರಾಮ ಸ್ವರಾಜ್ಯ ಕಲ್ಪನೆ, ಆಸ್ವಾದದ ಕಲ್ಪನೆ, ಉತ್ಪಾದನೆಯ ವಿಕೇಂದ್ರೀಕರಣ ಮುಂತಾದುವನ್ನು ನಿಲ್ಲಿಸುತ್ತಾರೆ.

ಸ್ವಾತಂತ್ರ್ಯೋತ್ತರ ಭಾರತದ ವಾದಗಳಿಂದೆಲ್ಲ ಒಬ್ಬಂಟಿಯಾಗಿ ಹೊರಗೆ ನಿಲ್ಲುವ ಇನ್ನೊಬ್ಬ ಲೇಖಕರು ಲಂಕೇಶ್. ಪ್ರಭುತ್ವ ಎಡ-ಬಲ ಮುಂತಾದ ಎಲ್ಲಾ ರೀತಿಯ ಐಡಿಯಾಲಜಿಗಳನ್ನೂ ಲಂಕೇಶ್ ಅನುಮಾನಿಸುತ್ತಾರೆ. ಅವರು ಯಾವ ಸೈದ್ಧಾಂತಿಕ ಚೌಕಟ್ಟಿನೊಳಗೂ ಸಾಂತ್ವನ-ಭದ್ರತೆಗಳ ನೆಲೆಗಳನ್ನು ಪಡೆಯಲು ಇಚ್ಛಿಸುವುದಿಲ್ಲ. ಒಬ್ಬ ಉತ್ತಮ ಲೇಖಕ, ಯಾವ ಗುಂಪಿನ ಹಣೆಪಟ್ಟಿಗೂ ಒಳಪಡದೆ, ನಿಷ್ಠುರನಾಗಿ. ಏಕಾಂಗಿಯಾಗಿ ನಿಲ್ಲಲು ಹೆದರುವುದಿಲ್ಲ. ಅತ್ಯುತ್ತಮ ಸಾಹಿತ್ಯ ಎಲ್ಲಾ ವಾದಗಳ ದಬ್ಬಾಳಿಕೆಯನ್ನು ಮೀರಿ ನಿಲ್ಲುವ ಗುಣವುಳ್ಳದ್ದು. ಪ್ರಭುತ್ವದ ಪರ-ವಿರೋಧ ವಾದಗಳು ಒಂದೇ ತರ್ಕದ ಎರಡು ಮುಖಗಳು ಎಂಬುದನ್ನು ಒಬ್ಬ ಒಳ್ಳೆಯ ಲೇಖಕ ಸ್ಪಷ್ಟವಾಗಿ ಗುರುತಿಸುತ್ತಾನೆ. ಹಾಗಾಗಿ ಲಂಕೇಶ್ 'ಸ್ಟೇಟ್'ನ ಯಾವ ಭಾಷೆಯನ್ನೂ ಬಳಸುವುದಿಲ್ಲ. ಪ್ರಭುತ್ವದ ಭಾಷೆ ಬಲಪಂಥೀಯರ ಭಾಷೆಯಾದರೆ, ಪ್ರಗತಿಯ ಭಾಷೆ ಎಡಪಂಥೀಯರ ಭಾಷೆ. ಪ್ರಗತಿಯನ್ನು ಅತಿರೇಕವಾಗಿ ವೈಭವೀಕರಿಸುತ್ತಾ ನಮ್ಮ ದಲಿತರೂ ವಾರಿ

ತಪ್ಪಿದ್ದಿದೆ ಎಂಬ ಎಚ್ಚರ ಲಂಕೇಶ್‌ರ ಬರವಣಿಗೆಯಲ್ಲಿ ಗಮನಿಸಬಹುದು.

'ಟಿ. ಪ್ರಸನ್ನನ ಗೃಹಸ್ಥಾಶ್ರಮ', 'ಪೋಲಿಸರಿದ್ದಾರೆ ಎಚ್ಚರಿಕೆ' ಮುಂತಾದ ಲಂಕೇಶ್‌ರ ಆರಂಭದ ನಾಟಕಗಳು ಅಧಿಕಾರಕ್ಕೇ ಹಾಕಿದ ಸವಾಲುಗಳು. 'ಸಂಕ್ರಾಂತಿ' ನಾಟಕವು ನಮ್ಮ ಎಲ್ಲಾ ವಾದಗಳ, ಎಡ-ಬಲಗಳ ಬಲಪ್ರದರ್ಶನದ ಅಪಾಯವನ್ನು ಗುರುತಿಸುತ್ತದೆ.

ಸಂಪ್ರದಾಯದಲ್ಲಿ ಹುದುಗಿರುವ ಕ್ರೌರ್ಯ, ಏಕಮುಖದ ಪ್ರಗತಿಯ ಅರ್ಥಹೀನತೆ, ಇವೆರಡೂ ಅವರ ನಾಟಕಗಳಲ್ಲಿ ತೀವ್ರ ಟೀಕೆಗೆ ಗುರಿಯಾಗುತ್ತವೆ. ಬಲ ಮತ್ತು ಎಡಗಳ ಮುಖಗಳಾದ ಸಂಪ್ರದಾಯ ಮತ್ತು ಪ್ರಗತಿ, ಇವೆರಡೂ ನಿಜವಾಗಿ ಸಾಮಾನ್ಯ ವ್ಯಕ್ತಿಗಳ ಸ್ವಂತ ಆಯ್ಕೆ ಅಲ್ಲ, ಪ್ರಭುತ್ವದಿಂದ ಅವರ ಮೇಲೆ ಹೇರಲ್ಪಟ್ಟವುಗಳು. ಹಾಗಾಗಿ ಲಂಕೇಶರ 'ಗುಣಮುಖ', 'ಸಂಕ್ರಾಂತಿ' ನಾಟಕಗಳು ನಿರಾಕರಿಸುವ ತರ್ಕ ಮತ್ತು ಭಾಷೆ ಆಧುನಿಕ ಭಾರತದ ಪ್ರಭುತ್ವದ ತರ್ಕ ಮತ್ತು ಭಾಷೆಗಳಾಗಿವೆ.

Lankesh questions authority in all its manifestations. ಇದಕ್ಕೆ ಕಾರಣ ಸ್ಪಷ್ಟ. ಎಲ್ಲಾ ರಾಜಕೀಯ ಪಕ್ಷಗಳೂ ಬಲದ ಉಪಾಸಕರೇ. ಪಾಕಿಸ್ತಾನದ ವಿರುದ್ಧ ಶಸ್ತ್ರಾಸ್ತ್ರ ಸಂಗ್ರಹದ ವಿಷಯದಲ್ಲಿ ಅಥವಾ ಮಿಲಿಟರಿಗೆ ಈ ಪಾಕಿಸ್ತಾನದ ವಿರುದ್ಧ ಶಸ್ತ್ರಾಸ್ತ್ರ ಸಂಗ್ರಹದ ವಿಷಯದಲ್ಲಿ ಅಥವಾ ಮಿಲಿಟರಿಗೆ ಈ ದೇಶದ ಶೇಕಡಾ 30ಕ್ಕಿಂತಲೂ ಹೆಚ್ಚು ವ್ಯಯ ಮಾಡುವ ವಿಷಯದಲ್ಲಿ ಎಲ್ಲಾ ಪಕ್ಷಗಳೊಳಗೂ ಒಮ್ಮತವಿದೆ. ಭಾರತದ ಈ ದರಿದ್ರ ಸ್ಥಿತಿಯಲ್ಲಿ, ಈ ರೀತಿಯ ವಾದವೇ ಜನವಿರೋಧಿ ಆಗುತ್ತದೆ. ಒಬ್ಬ ಉತ್ತಮ ಸಾಹಿತಿ ಆದವನು ಇಂಥ ಬಲಧ ಉಪಾಸನೆಯನ್ನು, ಎಲ್ಲಾ ರೀತಿಯ ಯುದ್ಧಗಳನ್ನು ವಿರೋಧಿಸುವುದು ಅನಿವಾರ್ಯ. ರಸ್ಸೆಲ್ ಎಲ್ಲಾ ರೀತಿಯ ಯುದ್ಧಗಳನ್ನೂ ವಿರೋಧಿಸಿದ್ದರು. ಪ್ರಗತಿಯ ಭಾಷೆ, ಕೇಂದ್ರೀಕರಣದ ಭಾಷೆ, ಆಧುನಿಕ ಪ್ರಭುತ್ವದ ಭಾಷೆ ಇವೆಲ್ಲವೂ ಕೈಗಾರಿಕಾ ಸಮಾಜದ ಶಕ್ತಿಯ ಭಾಷೆ ಅಥವಾ ಮಿಲಿಟರಿ ಶಕ್ತಿಯ ಭಾಷೆಯಾಗಿದೆ. ಕೈಗಾರಿಕಾ ಸಮಾಜದ, ಪ್ರಭುತ್ವದ ಸಮರ್ಥನೆಯ ತರ್ಕವನ್ನು ಸಂಪೂರ್ಣ ಒಪ್ಪಿದರೆ, ಬಲದ ವಿಜೃಂಭಣೆಯ ಅತಿರೇಕವನ್ನು ಒಪ್ಪಿದಂತೆಯೇ ಆಗುತ್ತದೆ.

ಲಂಕೇಶರ ಯಾವ ಕಥೆಗಳಲ್ಲೂ ಈ ದೇಶದ ಸರಕಾರೀಯ ಪ್ರಭುತ್ವದ ಯಾವ ಸಂಕೇತಗಳೂ ಪ್ರಮುಖವಾಗುವುದಿಲ್ಲ, ರಾಷ್ಟ್ರವಾಗಿ ಈ ದೇಶದ ಉಲ್ಲೇಖವೇ ಇಲ್ಲವೆಂದರೂ ಸರಿಯೇ. ಅವರ ಕಥೆಗಳಲ್ಲಿ ಮುಖ್ಯವಾಗಿ ತನ್ನ ಮುಂದಿರುವ ಸಮಾಜದಲ್ಲಿರುವ ಅನಾಥರು, ದುರ್ಬಲ ಜನರು, ಏನೂ ಇಲ್ಲದೆ ತೊಳಲಾಡುತ್ತಿರುವವರು - ಮುಂತಾದ ನಿರ್ಬಲರು ವ್ಯಕ್ತಿತ್ವಗಳಾಗಿ ಕಾಣಿಸಿಕೊಳ್ಳುತ್ತಾರೆ. ನಾವೆಲ್ಲ ಸುಲಭದಲ್ಲಿ ಜೋತುಬೀಳುವ ಕುಟುಂಬ, ಉದ್ಯೋಗ, ಭದ್ರತೆಯ ಕಲ್ಪನೆ ಮತ್ತು ನಾವು ನಮ್ಮಲ್ಲೆಲ್ಲಾ ಇದೆ ಎಂದು ಭ್ರಮಿಸುವ ಪ್ರೀತಿ, ಪ್ರಣಯ, ಸಂಬಂಧಗಳು ಮುಂತಾದ ಭಾವನೆಗಳು - ಇವೆಲ್ಲವನ್ನೂ ಅವುಗಳ ಅಭದ್ರ ಸ್ಥಿತಿಯಲ್ಲೇ ಲಂಕೇಶರ ಕಥೆ-ಕಾದಂಬರಿಗಳು ತೋರಿಸುತ್ತವೆ. ಕುಟುಂಬದ ಒಳಗೆಯೇ ಇರುವ ಪಿತೃಪ್ರಭುತ್ವ ಮತ್ತು ಕುಟುಂಬ ವ್ಯವಸ್ಥೆಯಲ್ಲೇ ಅಡಕವಾಗಿದೆಯೆಂದು ನಾವು ನಂಬುವ ಭಾವನೆಗಳ ತೋರಿಕೆಯ ಮುಖವನ್ನೂ ಅವರ ಬರಹಗಳು ಹೊರಹೊಮ್ಮಿಸುತ್ತವೆ. ಅನೇಕ ಬಾರಿ ಕುಟುಂಬ ನೆಲೆಗಟ್ಟೂ ಉಸುಕಿನದಿರಬಹುದೆಂಬ ಅನುಮಾನ ಅವರಿಗಿದೆ. ಹಾಗಾಗಿಯೇ ಲಂಕೇಶರು ಮತ್ತೆ ಮತ್ತೆ ಸಮಾಜದ ಅಧಿಕಾರ ಸಂವರ್ಧನೆಯ ಸಂಸ್ಥೆಗಳಾದ ಕುಟುಂಬ, ಶಾಲೆ,

ಆಫೀಸು, ಸರಕಾರ, ಆಡಳಿತ ವ್ಯವಸ್ಥೆ ಮಿಲಿಟರಿ ಇವೆಲ್ಲವನ್ನೂ ಅನೇಕ ಬಾರಿ ಅತಿ ಎನ್ನಿಸುವಷ್ಟು ಕಟು ವಿಮರ್ಶೆಗೊಳಪಡಿಸುತ್ತಾರೆ. ಲಂಕೇಶರ ಇಂಥ ಸಂಕೀರ್ಣ ಗ್ರಹಿಕೆ, ಫುಕೊ, ಸೈದ್ ಮುಂತಾದ ಪ್ರಸಿದ್ಧ ಸಮಾಜಶಾಸ್ತ್ರಜ್ಞರ ಗ್ರಹಿಕೆಗಳಿಗೆ ಬಹಳಷ್ಟು ಹತ್ತಿರವಾಗಿದೆ.

ಒಟ್ಟಾರೆ, ಸ್ವಾತಂತ್ರ್ಯೋತ್ತರ ಭಾರತದ ಆಧುನಿಕ ಲೇಖಕರಲ್ಲಿ ಪ್ರಮುಖರಾದ ಅಡಿಗ, ಅನಂತಮೂರ್ತಿ, ಲಂಕೇಶ, ಕಂಬಾರ-ಇವರೆಲ್ಲರೂ ಪ್ರಭುತ್ವದ ಹುನ್ನಾರಗಳ ಬಗ್ಗೆ ಜಾಗೃತರಾಗಿದ್ದವರು. ಪ್ರಭುತ್ವದ ಅಪಾಯಗಳನ್ನೆಲ್ಲಾ ತಿರಸ್ಕರಿಸಿದವರು, ಮತ್ತು ಲೇಖಕರಾಗಿ ಯಾವ ವಾದಕ್ಕೂ ತಮ್ಮನ್ನು ಪೂರ್ತ ಕೊಟ್ಟುಕೊಳ್ಳದೆ ತಮ್ಮ ಅನುಭವಕ್ಕೆ ನಿಷ್ಠರಾಗಿದ್ದವರು "ಪಾಪ, ಜನರು ತಮ್ಮ ಸ್ಥಿತಿಯಲ್ಲಿ ತಾವು ಬಂಧಿಗಳು. ಜನರೇ ಎದ್ದೇಳಿ, ಬಂಧನದಿಂದ ಕಳಚಿಕೊಳ್ಳುವ ಪ್ರಬಲ ಸಂಕಲ್ಪ ಮಾಡಿ, ಪ್ರಗತಿಶೀಲರಾಗಿ ಮುನ್ನುಗ್ಗಿ" ಎಂದು ಅಬ್ಬರದಿಂದ ಹೇಳುವ ಮನಸ್ಸು ಕೂಡಾ ಅನೇಕ ಬಾರಿ ನಿರಂಕುಶ ಪ್ರಭುತ್ವದ ಮನಸ್ಸಾಗಬಹುದೆಂಬ ಎಚ್ಚರವಿದ್ದವರು. ಈ ವಿಜೃಂಭಿತ ಬಲದ ನಿರಾಕರಣೆಯೇ ಕಳೆದ 50 ವರುಷಗಳಲ್ಲಿ ಕನ್ನಡ ಸಾಹಿತ್ಯದ ಎಲ್ಲಾ ವಾದಗಳ ಪ್ರಮುಖ ಕಾಳಜಿಯೆನ್ನಬಹುದು

* *



ಈ ದೃಷ್ಟಿಯಲ್ಲಿ ನಾವು ಸ್ವಾತಂತ್ರ್ಯೋತ್ತರ ಭಾರತದ 50 ವರುಷಗಳ ಕನ್ನಡ ಸಾಹಿತ್ಯವನ್ನು ಅವಲೋಕಿಸಿದಾಗ, ನವ್ಯ-ನವ್ಯೋತ್ತರ-ಈ ಎರಡೇ ವಾದಗಳನ್ನು ಪ್ರಮುಖವಾಗಿ ಗುರುತಿಸಲು ಸಾಧ್ಯ ಅಂತ ನನ್ನ ಅನ್ನಿಸಿಕೆ. ಅದೂ ಬೆರಳೆಣಿಕೆಯ ಲೇಖಕರು ಮಾತ್ರ ನಿಜಕ್ಕೂ ಉಲ್ಲೇಖಾರ್ಹರು. ಕಳೆದ 5 ದಶಕಗಳಲ್ಲಿ ಬಂದ ಅನೇಕ ಲೇಖಕರ ಬರಹಗಳನ್ನು ಒಮ್ಮೆ ಓದಿದರೆ ಮತ್ತೊಮ್ಮೆ ಓದಬೇಕೆಂದು ಪ್ರಜ್ಞಾವಂತ ಓದುಗನಿಗೆ ಅನ್ನಿಸುವುದಿಲ್ಲ. ಒಬ್ಬ ಲೇಖಕನ ಬರಹವನ್ನು ಒಮ್ಮೆ ಓದಿದ ಮೇಲೆ ಮತ್ತೊಮ್ಮೆ ಓದಬೇಕೂಂತ ಅನ್ನಿಸದಿದ್ದರೆ, ಆ ಸಾಹಿತ್ಯಕೃತಿ ಗಮನ ಸೆಳೆಯುವ ಕೃತಿ ಆಗಲಾರದು. ಅನೇಕ ಲೇಖಕರು ಉತ್ತಮವಾದುದನ್ನು ಕೊಟ್ಟಿದ್ದಾರೆ, ಕೊಡುವ ಶಕ್ತಿಯುಳ್ಳವರಾಗಿದ್ದಾರೆ. ಆದರೆ ಅವೆಲ್ಲವನ್ನೂ ಸಾಹಿತ್ಯಕೃತಿ ಎಂದು ಪರಿಗಣಿಸಬಹುದೇ? ಎಂಬುದನ್ನು ಯೋಚಿಸಬೇಕು. ವಕಾಲತ್ತು ವಹಿಸಿ ಮಾತಾಡುವಂತೆ ತಮ್ಮ ವಾದವನ್ನು ಪೋಷಿಸುವ ಕೆಲಸಗಳನ್ನು ಕರಪತ್ರಗಳೂ ಮಾಡುತ್ತವೆ. 'ಪಾಂಪ್ಲೆಟು'ಗಳನ್ನು ಸಾಹಿತ್ಯ ಕೃತಿ ಎಂದು ಓದಬಹುದೇ? ಒಬ್ಬ ರಶ್ಯನ್ ಲೇಖಕ (ಟರ್ಗೆನೆವ್) ಈ ಬಗ್ಗೆ ಅಭಿಪ್ರಾಯ ಪಡುವಂತೆ ಒಬ್ಬ ರೈತ ಕುಡಿದುಕೊಂಡು ಬಂದು ತನ್ನ ಹೆಂಡತಿಯನ್ನು ಹೊಡೆಯುವುದನ್ನು ಸೃಜನಾತ್ಮಕವಾಗಿ ಹೆಣೆದು ಪ್ರತಿಬಿಂಬಿಸಲು ಪ್ರತಿಭೆ ಬೇಕು. ಆದರೆ 'ಸ್ತ್ರೀ ಸ್ವಾತಂತ್ರ್ಯದ ಪ್ರಶ್ನೆ' ಎಂಬ ದೀರ್ಘ ಪ್ರಬಂಧ ತಯಾರಿಸಲಿಕ್ಕೆ ಪ್ರತಿಭೆ ಬೇಕಿಲ್ಲ, ಮಾಹಿತಿ ಸಾಕು.



ನಮ್ಮಲ್ಲಿ ಅನೇಕ ಲೇಖಕರು ಮಾಹಿತಿ ಕೊಡುವಂಥ ಲೇಖಕರು. ಅನೇಕ ಬಾರಿ ಸರಿಯಾದ ನಿಲುವು ಇದ್ದ ಸಾಹಿತಿಗಳೂ ಅತಿಸಾಮಾನ್ಯವಾದ ಸಾಹಿತ್ಯ ಬರೆಯುತ್ತಾರೆ. ಹಾಗಾಗಿ ನಾವು ಸಾಹಿತ್ಯಕ್ಕೂ, ಹೇಳಿಕೆಗಳಿಗೂ, ವಾದಕ್ಕೂ ಇರುವ ಬೇಧವನ್ನು ಎಚ್ಚರದಿಂದ ಗಮನಿಸಬೇಕು. ಅಲ್ಲೊಬ್ಬ ಇಲ್ಲೊಬ್ಬ ಪ್ರತಿಭಾವಂತ ಲೇಖಕನನ್ನು ಹೊರತು ಪಡಿಸಿ, ಇತ್ತೀಚೆಗೆ ಬಂದ ಅನೇಕ ವಾದಗಳು, ಅನುಭವದ ಕೊರತೆಯಿಂದಾಗಿ, ಮತ್ತು ಸರಳ ರೇಖಾತ್ಮಕ (linear) ತೀರ್ಮಾನಗಳಿಂದಾಗಿ ಸರಳೀಕೃತ ಹೇಳಿಕೆಗಳಂತೆ ಅನ್ನಿಸುತ್ತದೆ.

ಅದೂ, ಆಧುನಿಕೋತ್ತರ ಜಗತ್ತಿನ ಬದುಕು ಬಹಳ ಸಂಕೀರ್ಣಗೊಂಡಿದ್ದು ಅನೇಕ ಸುಳಿ, ಒಳಸುಳಿಗಳಿಂದ ಕೂಡಿದೆ. ವಿಶ್ವ ಪ್ರಭುತ್ವ ಸಮೀಕರಣದಲ್ಲಿ ಇದುವರೆಗೆ ಸಮತೋಲನಕ್ಕೆ ಪೂರಕವಾಗಿದ್ದ ಸೋವಿಯತ್ ರಶ್ಯಾ ತನ್ನ ರಾಜಕೀಯ ಪ್ರಭುತ್ವದ ಭಾರದಿಂದಲೇ ಇಂದು ಛಿದ್ರ ಛಿದ್ರವಾಗಿದೆ. ಇದರಿಂದಾಗಿ, ತೃತೀಯ ಜಗತ್ತಿನ ಜನಪರ ಚಳುವಳಿಗಳೆಲ್ಲ ಹಿಂಜರಿಯುವಂತಾಗಿದೆ. ಅಮೇರಿಕಾ ಇಂದು ವಿಶ್ವದ ಏಕಮೇವ ದೊಡ್ಡಣ್ಣನಾಗಿ ಮತ್ತೆ ರೂಪು ಪಡೆಯುತ್ತ, ತನ್ನೆಲ್ಲ ಬಂಡವಾಳಶಾಹಿ ಅರ್ಥನೀತಿಯ ಕ್ರೂರ ಮುಖಗಳನ್ನು ತೋರಿಸಲು ಆರಂಭಿಸಿದೆ. ಬಂಡವಾಳಶಾಹಿ ವ್ಯವಸ್ಥೆಯ ಮುಖ್ಯ ಲಕ್ಷಣವಾದ ತೀವ್ರ ಪೈಪೋಟಿ, ದಕ್ಷತೆ, ಕಾಡಿನ ನ್ಯಾಯಗಳೇ ಮೊದಲಾದ ಬಲಿಷ್ಠ ಮೌಲ್ಯಗಳು, ಐ.ಎಂ.ಎಫ್ ಜಾಗತಿಕ ಬ್ಯಾಂಕು ಮತ್ತು ಇತರ ಬಹುರಾಷ್ಟ್ರೀಯ ಕಂಪನಿಗಳ ಮುಖಾಂತರ ಮಾರುಕಟ್ಟೆ ನಿಯಮದ ಹೊಸ ಪಠ್ಯದ ಮೂಲಕ ಮರುಭಾಷ್ಯ ಪಡೆದು ಶಕ್ತಿಯುತವಾಗಿ ಜಗತ್ತನ್ನು ಮತ್ತೊಮ್ಮೆ ಆಳಲು ಆರಂಭಿಸಿವೆ. ಸಾಮಾಜಿಕ ನ್ಯಾಯ, ಸಮಷ್ಟಿ ಹಿತ ಇವೆಲ್ಲ ಇಂದು, ಜಾಗತೀಕರಣ, ಉದಾರೀಕರಣದ ಮುಖವಾಡದಲ್ಲಿ, ಅಪಾಯಕಾರಿ ರೀತಿಯಲ್ಲಿ ಹೊಸ ಅವತಾರ ತಾಳಿರುವ ಮಾರುಕಟ್ಟೆ ಅರ್ಥವ್ಯವಸ್ಥೆ, ದಕ್ಷತೆಯ ಮಂತ್ರ, ರಫ್ತು ಅರ್ಥನೀತಿಗಳ ಕಾಲಿನಡಿ ಸಿಕ್ಕಿ ನುಚ್ಚು ನೂರಾಗುವ ಸ್ಥಿತಿಯಲ್ಲಿವೆ. ಜಾಗತಿಕ ಮಾರುಕಟ್ಟೆ ಅರ್ಥವ್ಯವಸ್ಥೆಯ ಗುರಿಕಾರರಾದ ಬಹುರಾಷ್ಟ್ರೀಯ ಕಂಪೆನಿಗಳು ಜಗತ್ತಿನ ಮೂಲೆ ಮೂಲೆಯ ಹಳ್ಳಿಗಳಿಗೂ ವ್ಯಾಪಾರೀ ರಹದಾರಿಗಳನ್ನು ಕೊರೆದು ಅಲ್ಲಿಂದ ನಮ್ಮ ಬೇಸಾಯಗಾರರ, ಕರಕುಶಲಗಾರರ, ಗ್ರಾಮೀಣ ಪ್ರದೇಶದ ಅಸಂಖ್ಯ ಕಸುಬು-ಉಪಕಸುಬುದಾರರ ಅನುಭವ ಮೂಲ ದೇಶೀಯ ಜ್ಞಾನ ಸಂಪನ್ಮೂಲ, ಕೌಶಲ್ಯವನ್ನು ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಅತಿರೇಕ ಲಾಭ ಹೊಡೆಯುವ ಉದ್ದೇಶದಿಂದ ಕದಿಯಲು ಆರಂಭಿಸಿವೆ. ಇದರ ಪರಿಣಾಮ ಬಹುಮುಖೀ ಆಯ್ಕೆಗಳ ಅವಸಾನ ಮತ್ತು ಸಾಂಸ್ಕೃತಿಕ ಶೂನ್ಯತೆ.

ಇದರ ಜತೆಜತೆಯೇ, ಮುಂದಿನ 50 ವರುಷಗಳಲ್ಲಿ ಜನಪರ ಹೋರಾಟಗಳು ಪ್ರಬಲವಾಗುವ ಹಲವೊಂದು ಶುಭ ಸೂಚನೆಗಳೂ ಇನ್ನೊಂದೆಡೆ ಕಾಣಿಸುತ್ತಿವೆ. ಚೇನಾದ ಪ್ರಭುತ್ವ

ಪ್ರಬಲವಾಗಿ ಅಮೇರಿಕಾ, ಜಾಪಾನುಗಳು ಜಾಗತಿಕ ರಾಜಕೀಯ ಪ್ರಭುತ್ವದ ಚದುರಂಗದಾಟದಲ್ಲಿ ಕೊಂಚ ಹಿಂಜರಿಯಬಹುದೆಂದು ರಾಜಕೀಯ ಶಾಸ್ತ್ರಜ್ಞರು ಅಭಿಪ್ರಾಯ ಪಡುತ್ತಾರೆ. ಯೂರೋಪಂತೂ ಸ್ಪಷ್ಟವಾಗಿ ಹಿನ್ನಡೆಯುವ ಸೂಚನೆಗಳಿವೆ. ಈ ರೀತಿಯ ಜಾಗತಿಕ ವ್ಯವಸ್ಥೆಯ ಪುನರ‍್ರಚನೆಯ ಸಂದರ್ಭದಲ್ಲಿ ಇನ್ನೂ ಜನರ ಪಾರಂಪರಿಕ ಜ್ಞಾನ ಸಂಪನ್ಮೂಲಗಳು ಸುಸ್ಥಿತಿಯಲ್ಲಿದ್ದು ಬಹ್ವಂಶ ಜನರ ಬೆನ್ನೆಲುಬಾಗಿರುವ ಭಾರತದಂತಹ ದೇಶಕ್ಕೆ ಹೊಸ ರಾಜಕೀಯ-ಆರ್ಥಿಕ ಅವಕಾಶ (space) ನಿರ್ಮಾಣವಾಗುವ ಸಾಧ್ಯತೆಗಳಿವೆ. ಆದರೆ ಈ ಅವಕಾಶವನ್ನು ಅರ್ಥೈಸಿ ನಾವು ಬಳಸಿಕೊಳ್ಳಲು ಸಾಕಷ್ಟು ಮಾನಸಿಕ ಸಿದ್ಧತೆ ಬೇಕು.

ಆದರೆ, ಸಾಹಿತ್ಯ-ಸಾಂಸ್ಕೃತಿಕ ವಲಯಗಳಲ್ಲಿ ಅಂಥ ಮಾನಸಿಕ ಸಿದ್ಧತೆ ಕಾಣುವುದಿಲ್ಲ. ನಮ್ಮ ಕನ್ನಡದ ಸ್ಥಿತಿಯೂ ಅಷ್ಟೇನೂ ಆಶಾದಾಯಕವಾಗಿಲ್ಲ. ಪ್ರಸ್ತುತ ಬದುಕಿನ ಸಂಕೀರ್ಣತೆಯನ್ನು ಅರ್ಥ ಮಾಡಿಕೊಳ್ಳಲು ನಮ್ಮ ಹಳೆಯ ತಲೆಮಾರಿನ ಸಾಹಿತಿಗಳಿಗಿದ್ದ ಸಾಮರ್ಥ್ಯದಷ್ಟೂ ನಮ್ಮ ಅನೇಕ ತರುಣ ಲೇಖಕರಿಗಿದ್ದಂತಿಲ್ಲ. ಅನೇಕರಲ್ಲಿ, ಇವೆಲ್ಲ ಸಾಹಿತ್ಯಕ್ಕೆ ಸಂಬಂಧ ಪಡದ ವಿಷಯ ಎಂಬ ಸರಳೀಕೃತ ಮುಗ್ಧ ನಿರ್ಲಕ್ಷ್ಯವಿದೆ. ಕೆನಡಾದ ಪ್ರಸಿದ್ಧ ತತ್ವಜ್ಞಾನಿ-ಕಾದಂಬರಿಕಾರ ಜಾನ್ ರಾಲ್ಸ್ಟನ್ ಸಾಲ್, ಈ ಬಗ್ಗೆ ತನ್ನ ಅಭಿಪ್ರಾಯ ವ್ಯಕ್ತಪಡಿಸುತ್ತಾ "ಇಂದಿನ ಅನೇಕ ಸಾಹಿತಿಗಳಿಗೆ, ಕಾದಂಬರಿಕಾರರಿಗೆ ಪ್ರಸ್ತುತ ಸಮಾಜ ಪ್ರಕ್ರಿಯೆಯ ಖಚಿತ ಪರಿಜ್ಞಾನವಿಲ್ಲ. ಫ್ರೆಂಚ್ ಸಾಹಿತಿ ಎಮಿಲಿ ಝೋಲಾಗೆ, ಸರಕಾರಗಳು ಯಾವ ರೀತಿಯಲ್ಲಿ ನಡೆಸಲ್ಪಡುತ್ತಾರೆ ಎಂಬ ಸೂಕ್ಷ್ಮ ತಿಳಿದಿತ್ತು. ಟಾಲ್‌ಸ್ಟಾಯ್‌ಗೆ ಮಿಲಿಟರಿ ಸೈನ್ಯದ ಕಾರ್ಯಾಚರಣೆಯ ಎಲ್ಲಾ ಆಯಾಮಗಳು ಸ್ಪಷ್ಟ ತಿಳುವಳಿಕೆಯಿತ್ತು. ಆದರೆ, ಇಂದಿನ ಕಾದಂಬರಿಕಾರರಿಗೆ ಸಮಾಜದ ಜತೆ ಗಂಭೀರ ಸಂಪರ್ಕ, ಮುಖಾಮುಖಿ, ಸಂವಾದ-ವಾಗ್ವಾದಗಳಿರುವಂತೆ ಕಾಣುವುದಿಲ್ಲ. ಲೇಖಕರು ಸಮಾಜದಿಂದ ದೂರ ಒಳಗೇ ಇದ್ದುಕೊಂಡು ತಮ್ಮ ದಂತಗೋಪುರದಿಂದಲೇ ಭಾಷೆಯ ಗ್ರೆನೇಡುಗಳನ್ನು ಜನರ ಮೇಲೆ ಸಿಡಿಸುತ್ತಿರುತ್ತಾರೆ. ಬರವಣಿಗೆ ಇಂಥ ಸುಖಭೋಗದ ಕ್ರಿಯೆಯಲ್ಲ. ಅದೊಂದು ಸತತವಾದ ಸಾಮಾಜಿಕ ಪ್ರಕ್ರಿಯೆ" ಎಂದು ನುಡಿಯುತ್ತಾನೆ.

ಜ್ಞಾನಪ್ರಕಾರಗಳು ಇಂದು ಎಷ್ಟು ಸಂಕೀರ್ಣಗೊಂಡಿವೆಯೆಂದರೆ, ಎಲ್ಲಾ ವಿಚಾರಧಾರೆಗಳು ಒಂದರೊಳಗೊಂದು ಅಂತರ್ಗತವಾಗಿ, ಜ್ಞಾನದ ಗಡಿಗಳು ಸಂಪೂರ್ಣ ಮಾಯವಾಗುವ ಹಂತದಲ್ಲಿ ನಾವಿದ್ದೇವೆ. ಜಾಗತೀಕರಣ ಮತ್ತು ಪ್ರಗತಿಯ ಕಥನಗಳು ತಮ್ಮದೇ ಆದ ಲೋಕದೃಷ್ಟಿಯನ್ನು, ಆಯ್ಕೆಗಳನ್ನು. ಅಭಿಪ್ರಾಯಗಳನ್ನು. ವಾದಗಳನ್ನು ಲೇಖಕನ ಮನಸ್ಸಿನಲ್ಲಿ ಬಿತ್ತಿ ಆತನ ಮನಸ್ಸನ್ನೇ ವಸಾಹತೀಕರಣಗೊಳಿಸುವಷ್ಟು ಪ್ರಭಾವಶಾಲಿಯಾಗಿದೆ. ಇವೆಲ್ಲವನ್ನೂ ಅರ್ಥೈಸಿಕೊಂಡು ಇವಕ್ಕೆಲ್ಲಾ ಮುಖಾಮುಖಿಯಾಗುವ ಶಕ್ತಿಗಳನ್ನು ನಾವು ಸಾಹಿತ್ಯದಾಚೆನ ಜ್ಞಾನ ಪ್ರಕಾರಗಳಿಂದ ಸಂಚಯಿಸಿಕೊಳ್ಳದಿದ್ದರೆ, ನಮ್ಮ ಶುದ್ಧಾಂಗ ಸಾಹಿತ್ಯ ಸೃಷ್ಟಿ ನಮ್ಮ ಸುತ್ತಲಿನ ಸಮಾಜದ ಬದುಕನ್ನು ಅರ್ಥೈಸುವಲ್ಲಿ ಅಸಮರ್ಥವಾಗಿ ಕೇವಲ ರಮ್ಯ ಸಾಹಿತ್ಯದ ಮಟ್ಟಕ್ಕಿಳಿಯುವ ಸಾಧ್ಯತೆಯಿದೆ. ಇಂದಿನ ಸಾಹಿತ್ಯ ಕೃತಿಗಳನ್ನು ಅವಲೋಕಿಸಿದರೆ, ಅವುಗಳಲ್ಲಿ ಬಹಳಷ್ಟು ಕೃತಿಗಳು 'ಮೀಡಿಯಾಕರ್' ಮಟ್ಟದಲ್ಲೇ ಸ್ಥಗಿತಗೊಳ್ಳುವುದನ್ನು ನಾವು ಗಮನಿಸಬಹುದು. ಅನೇಕ ಲೇಖಕರು ಪ್ರಸ್ತುತ ಆಧುನಿಕ ಬದುಕಿನ ವಿದ್ಯಮಾನಗಳಿಗೆ ತೆಳುವಾಗಿ ಪ್ರತಿಕ್ರಿಯಿಸುತ್ತಾರೆ.

ಒಂದು ಸಂಕೀರ್ಣ ವಿದ್ಯಮಾನದ ಎಲ್ಲ ಮುಖಗಳನ್ನು ಗ್ರಹಿಸಲು ಸಾಕಷ್ಟು ಪರಿಶ್ರಮ ಬೇಕಾಗುತ್ತದೆ. ಕನ್ನಡ ಸಾಹಿತ್ಯದ ಇಂದಿನ ಪ್ರಮುಖ ವಿಮರ್ಶಕರಾದ ಡಾ. ಡಿ. ಆರ್. ನಾಗರಾಜ್ ಅವರು ತಾನು ಬರೆದ 'ಸಾಹಿತ್ಯ ಕಥನ' ವಿಮರ್ಶಾ ಗ್ರಂಥಕ್ಕೆ ಕನ್ನಡ ಸಾರಸ್ವತ ಲೋಕದ ಸಪ್ಪೆ ಪ್ರತಿಕ್ರಿಯೆಯನ್ನು ಉಲ್ಲೇಖಿಸುತ್ತಾ ಕನ್ನಡ ಸಾಹಿತ್ಯದ ಸ್ಥಿತಿಗತಿಯ ಬಗ್ಗೆ ಚರ್ಚಿಸಿದ್ದರು. ನಾನು ಆ ಪುಸ್ತಕ ಓದುತ್ತ ಹೋದಂತೆ ಅವರ ಮಾತು ನಿಜವಿರುವ ಸಾಧ್ಯತೆ ಮನದಟ್ಟಾಯಿತು. ಡಿ.ಆರ್. ಅವರೇ ಆ ಪುಸ್ತಕದ ಮುನ್ನುಡಿಯಲ್ಲಿ ಬರೆಯುತ್ತಾ "ಈ ಪುಸ್ತಕಕ್ಕೆ 'ಸಾಹಿತ್ಯ ಕಥನ' ಎಂಬ ಹೆಸರು ಕೊಟ್ಟಿರುವುದಕ್ಕೆ ಒಂದು ವಿಶೇಷ ಕಾರಣವು ಇದೆ. ಸಾಹಿತ್ಯಾನುಭವದಲ್ಲಿ ಹುಟ್ಟಿರುವ ಪರಿಕಲ್ಪನೆಗಳಿಗೆ ಉಳಿದ ಜ್ಞಾನ ಕ್ಷೇತ್ರಗಳಲ್ಲೂ ಅಪಾರ ದೀಪ್ತಿ ಸಾಮರ್ಥ್ಯ ಇದೆ ಎಂಬ ನಂಬಿಕೆ ಇದರ ಹಿಂದೆ ಕೆಲಸ ಮಾಡಿದೆ. ಹಾಗೂ, ಇಲ್ಲಿರುವ ಸಾಕಷ್ಟು ಲೇಖನಗಳು 'ಶುದ್ಧ ಸಾಹಿತ್ಯ'ದ ವಲಯದಾಚೆಗಿರುವ ವಸ್ತುಗಳನ್ನು ಕುರಿತವು. ಅಂದರೆ, ಆ ಅನುಭವಗಳನ್ನು ಅರ್ಥೈಸುವುದಕ್ಕೆ ನಾವು ಬಳಸಿರುವ ತಂತ್ರಗಳು ಶುದ್ಧಾಂಗವಾಗಿ ಸಾಹಿತ್ಯ ಮೀಮಾಂಸೆಯವು. ಸಮಸ್ತ ಜ್ಞಾನವೂ ಒಂದು ಬಗೆಯ ಕಥನವೇ ಎನ್ನುವುದು ನನ್ನ ಶ್ರದ್ಧೆಯ ಒಂದು ಮುಖವಾದರೆ, ಅದರ ಇನ್ನೊಂದು ಮುಖ ಎಲ್ಲಾ ಜ್ಞಾನಗಳನ್ನೂ ಸಾಹಿತ್ಯ ಮೀಮಾಂಸೆಯ ಪರಿಕರಗಳಿಂದ ಪ್ರವೇಶಿಸಲು ಸಾಧ್ಯ ಎಂಬ ನಿಲುವು" ಎಂದು ಉಲ್ಲೇಖಿಸುತ್ತಾರೆ. ಪ್ರಸ್ತುತ ಬೌದ್ಧಿಕ ಜಗತ್ತಿನ ಸಂಕೀರ್ಣ ವಾಗ್ವಾದಗಳನ್ನು ಗ್ರಹಿಸಲು ಪ್ರಯತ್ನಿಸುವ ಆ ವಿಮರ್ಶಾ ಗ್ರಂಥವನ್ನು ಓದಿ ಜೀರ್ಣಿಸಿಕೊಳ್ಳಲು ಸಾಕಷ್ಟು ಮಾನಸಿಕ ಸಿದ್ಧತೆ ಬೇಕು ಎಂಬುದನ್ನು ಅಲ್ಲಗಳೆಯುವಂತಿಲ್ಲ. ಆದರೆ ಇಂದಿನ ಕನ್ನಡ ಸಾಹಿತ್ಯ ಲೋಕ ಅಂಥ ಶಕ್ತಿಯನ್ನು ಸಂಚಯಿಸಿಕೊಂಡಿದೆಯೇ? ಅಥವಾ ಶಕ್ತಿ ಸಂಚಯಿಸಿಕೊಳ್ಳುವ ಪ್ರಕ್ರಿಯೆಯಲ್ಲಾದರೂ ಇದೆಯೇ? ಅದಕ್ಕೆ ಬೇಕಾದ ಧ್ಯಾನದ ಶಿಸ್ತು, ಪರಿಶ್ರಮದ ಕಾಯಕ ನಮ್ಮಲ್ಲಿದೆಯೇ? ಸಾಹಿತ್ಯವೆಂಬುದು ಸೃಜನಶೀಲ ಸುಂದರ ಪ್ರತಿಕ್ರಿಯೆಯಾಗದೆ ಕೇವಲ ಜಾಣ್ಮೆಯ 'ಕ್ರಾಫ್ಟ್‌ಮ್ಯಾನ್‌ಶಿಪ' ಆದಾಗ ಬರವಣಿಗೆಯೆಂಬುದು ಮಾರುಕಟ್ಟೆ ಭಾಷೆಯಲ್ಲಿ 'ಮಾರ್ಕೆಟ್' ಬೇಡಿಕೆಗನುಗುಣವಾಗಿ ಒಂದು ಉತ್ಪಾದನಾ 'ಟೆಕ್ನಾಲಜಿ'ಯಾಗಿ ಬಿಡುತ್ತದೆ. ಈ ವಿದ್ಯಮಾನವನ್ನು ಇಂದು ಇಂಗ್ಲೀಷಿನಲ್ಲಿ ಬರೆಯುವ ಮಾರುಕಟ್ಟೆ ನಿರ್ದೇಶಿತ 'ಹೈಟೆಕ್' ಭಾರತೀಯ ಬರಹಗಾರರಲ್ಲಿ ಗಮನಿಸಬಹುದು. ಬರೆಯುವಿಕೆ ಒಂದು ಸ್ವಪ್ನಕ್ರಿಯೆ ಆಗದೆ ಕೇವಲ ಉತ್ಪಾದನಾ ಸರಕಾಗುವುದು, ಇಂದಿನ ಮಾರುಕಟ್ಟೆ ಆಧಾರಿತ ಪ್ರಗತಿಯ ಲಕ್ಷಣ. ಹಾಗಾಗಿಯೇ, ಆರ್ಥಿಕವಾಗಿ ಅಭಿವೃದ್ಧಿ ಹೊಂದಿದ ಅಮೇರಿಕಾ, ಇಂಗ್ಲೆಂಡು, ಅನೇಕ ಯುರೋಪು ರಾಷ್ಟ್ರಗಳಿಂದ ಇಂದು ಉತ್ತಮ ಸಾಹಿತ್ಯ ಕೃತಿಗಳು ಅಷ್ಟಾಗಿ ಬರುತ್ತಿಲ್ಲ. ಉತ್ತಮ ಕೃತಿಗಳೆಲ್ಲವೂ ಆಫ್ರಿಕಾ, ಲ್ಯಾಟಿನ್ ಅಮೇರಿಕಾ, ಏಶಿಯಾ ರಾಷ್ಟ್ರಗಳಿಂದ, ಹೆಚ್ಚಾಗಿ ತೃತೀಯ ಜಗತ್ತಿನ ರಾಷ್ಟ್ರಗಳಿಂದ ಬರುತ್ತಿವೆ. ಜಾಗತಿಕೀಕರಣದ ಪ್ರಭಾವದಿಂದ ತೃತೀಯ ಜಗತ್ತಿನ ರಾಷ್ಟ್ರಗಳೂ ಮುಂದುವರಿದ ರಾಷ್ಟ್ರಗಳ ಪಡಿಯಚ್ಚಾಗಿ, ಸಾಹಿತ್ಯಿಕ ಸೃಜನಶೀಲತೆಯು ಸ್ಥಳೀಯ ವೈಶಿಷ್ಟ್ಯತೆ - ಸಾಂಸ್ಕೃತಿಕ ವೈವಿಧ್ಯತೆಗಳನ್ನು ಕಳಕೊಂಡು ಅಂದಗೇಡಿಯಾಗುವ ಸಾಧ್ಯತೆಯಿದೆ. ಈ ಬಗ್ಗೆ ಸಾರಸ್ವತ ಲೋಕ ಬಹಳಷ್ಟು ಆತ್ಮವಿಮರ್ಶೆಮಾಡಿಕೊಳ್ಳುವ ಅಗತ್ಯವಿದೆ.

'ಸೊರಬ'ರವರ ಎರಡು ಕವನಗಳು

ಮೂಸು

ಕುಳಿತಲ್ಲೇ ಆತ ವ್ಯಾಪಾರ
ಮಾಡಿದ ಕಾಡಲ್ಲಿ ಮೇಯುತ್ತಿತ್ತು
ಕುದುರೆ ಹಸುರಿನ ಕನಸು
ಕೊಚ್ಚಿ ಹಾಕಿದ ತಿನಿಸು

ಕುದುರೆಗೆ ಕಟ್ಟಿದ ಬೆಲೆ
ಮೈಜುಂ ಎನ್ನುವ ಸೆಲೆ
ಕಾಲಿಗೆ ಗೊರಸು
ಚುಚ್ಚಿ ಕೊಳ್ಳುವುದಲ್ಲ ಮರಸು

ಬೆಲೆಗೆ ತಕ್ಕ ಗಿಲೀಟು
ಕುದುರೆಗೇ ಗೊತ್ತಿಲ್ಲ
ಯಾವ ದಾರಿಯು
ಯಾವ ಸುಂಕ

ಕುದುರೆ ಕೆನೆದು
ನಾಗಾಲೋಟಕ್ಕೆ
ತೊಡಗಿತು
ವದರಿಕೊಳ್ಳಲಾರದೆ
ಅವನ
ಮೂಸಿತು.

ಉಡುಗೊರೆ

ಬೀದಿ ತುಂಬ ಜನ
ಅರಳಿಕೊಳ್ಳುವ
ಮೊದಲೆ ಮನ

ಗುದ್ದು ಗುದ್ದು
ಗೋಳಿನೊಂದು ಬಿದ್ದು

ಒಂದು ಕಂಠ
ಸಹಸ್ರ ಸಹಸ್ರ
ಪ್ರತಿಧ್ವನಿ
ರೊಚ್ಚಿನಲ್ಲಿ ಕಿಚ್ಚು
ಹೊಗೆಯಾಡಿದೆ

ನಾಟಕಕ್ಕೆಲ್ಲ ಚೌಕಟ್ಟು
ಬೀದಿಗಿಲ್ಲಿ ಇಕ್ಕಟ್ಟು
ಹೊಕ್ಕ ಹಾಗೆ ಬೆಂಕಿ ಸಲಾಕೆ
ದುಷ್ಟತನದ ವೇದಿಕೆ

ಏನೂ ಮಾಡಲಿಲ್ಲ
ಎದೆಯ ಕಡೆದ
ಮನದ ಪೀಡೆ
ಮಚ್ಚಿನಲಿ ಕುದಿರಕ್ತ
ಬತ್ತಿದಷ್ಟೆ ಬೆಳೆಯೆ

ಕಳೆದ ಜೀವ
ಬಿಂಬಗೊಂಡು
ನೂರು ಹೃದಯ ತಾವರೆ
ನೆತ್ತರಿಸಿದೆ ಉಡುಗೊರೆ

ವೇಣುಗೋಪಾಲ ಸೊರಬರವರು ನಿಧನರಾಗುವುದಕ್ಕೆ ಒಂದು ವಾರದ ಮೊದಲು ಮನೆಗೆ ಬಂದಿದ್ದರು. ಆಗ ಸು.ರಂ ಎಕ್ಕುಂಡಿಯವರನ್ನು ಕರೆಸಿದೆ. ಸೊರಬರವರು ಅಂದು ಓದಿದ ಕೆಲವು ಪದ್ಯಗಳಲ್ಲಿ ಎರಡನ್ನು ಪ್ರಕಟಿಸುತ್ತಿರುವೆ. ಆಕಸ್ಮಿಕವಾಗಿ ಈ ಪದ್ಯಗಳು ಸಿಕ್ಕಿದವು. ಇಂದು ಆ ಇಬ್ಬರು ಸೂಕ್ಷ್ಮ ಸಂವೇದನೆಯ ಕವಿಗಳು ನಮ್ಮ ನಡುವೆ ಇಲ್ಲ.

–ಸಂ.

ಒಳದನಿಗೆ ಓಗೊಟ್ಟವರು:

ಬ್ರಿಟಿಷ್ ಸಾಮ್ರಾಜ್ಯದ ಇನ್ನೊಂದು ಮುಖ

ರಾಮಚಂದ್ರ ಗುಹಾ

ಇದು ಮಹತ್ವಪೂರ್ಣ ಲೇಖನವಾಗಿರುವುದರಿಂದ 'ಶೂದ್ರ'ದ ಓದುಗರಿಗೆ ಕೊಡುತ್ತಿದ್ದೇವೆ. ಇದನ್ನು ಹೆಗ್ಗೋಡಿನಿಂದ ಪ್ರಕಟವಾಗುವ 'ಮಾತುಕತೆ'ಯಿಂದ ಆಯ್ದುಕೊಂಡಿದೆ. ಈ ಲೇಖನದ ಅನುವಾದಕರು ಜಸವಂತ ಜಾಧವ್

ಸಾವಿರದ ಒಂಬತ್ತು ನೂರಾ ಇಪ್ಪತ್ತರ ದಶಕದ ಮಧ್ಯಭಾಗದ ವರ್ಷಗಳನ್ನು ಭಾರತೀಯ ಇತಿಹಾಸದಲ್ಲಿ ಸಾಮಾನ್ಯವಾಗಿ ಅಷ್ಟೇನೂ ಮುಖ್ಯವಲ್ಲದ ಅವಧಿಯೆಂದು ಪರಿಭಾವಿಸಿರುವುದುಂಟು.1922ರ ಫೆಬ್ರುವರಿಯಲ್ಲಿ ಚಾರಿಚೌರಾದ ಅಗ್ನಿಕಾಂಡದಲ್ಲಿ ಕೊನೆಗೊಂಡ ಅಸಹಕಾರ ಚಳುವಳಿ ಹಾಗೂ 1930ರ ಏಪ್ರಿಲ್ 6 ರಂದು ದಂಡಿಯಲ್ಲಿ ಪ್ರಾರಂಭಗೊಂಡ ನಾಗರಿಕ ಅವಿಧೇಯತಾ ಚಳುವಳಿಗಳ ನಡುವಿನ ಈ ಕಾಲಾವಧಿಯ ಬಗ್ಗೆ ನಮ್ಮ ಗಮನ ಹರಿದಿರುವುದೂ ಕಡಿಮೆ, ಅದರ ಬಗ್ಗೆ ಬಂದಿರುವ ಬರಹಗಳೂ ಕಡಿಮೆ. ಹೋರಾಟದ ನಡುವಿನ ಬಿಡುವಿನ ವೇಳೆಯೆಂಬಂತೆ ಕಂಡುಬರುವ ಈ ಅವಧಿಗೆ ಇಲ್ಲಿಯವರೆಗೆ ಗಾಂಧೀಜಿಯವರ ಆ ವರ್ಷಗಳ ಎರಡು ಕ್ರಿಯೆಗಳಿಂದ ಚರಕಾದಲ್ಲಿ ನೂಲು ನೇಯುವುದರಿಂದ ಹಾಗೂ ಆತ್ಮಚರಿತ್ರೆಯ ಬರವಣಿಗೆಯಿಂದ ಮಾತ್ರವೇ ಒಂದು ರೀತಿಯ ಘನತೆ ಪ್ರಾಪ್ತವಾಗಿದ್ದಿತು.

ಇದೇ ಅವಧಿಯಲ್ಲಿ ಇತರ ರಾಷ್ಟ್ರೀಯವಾದಿಗಳು 'ಬ್ರಿಟಿಷ್ ಸರ್ಕಾರ ಸ್ಥಾಪಿಸಿದ್ದ ಶಾಸನ ಸಭೆಗಳನ್ನು ಪ್ರವೇಶಿಸುವುದೇ ಬೇಡವೇ?' ಎಂಬ ಚರ್ಚೆಯಲ್ಲಿ ತೊಡಗಿಕೊಂಡಿದ್ದರು. ಚರಕಾ ಕೆಲಸ ಹಾಗೂ ಶಾಸನಸಭಾ ಪ್ರವೇಶ ಎರಡೂ ಸಹ ಪ್ರತಿಭಟನೆ ಮತ್ತು ಸತ್ಯಾಗ್ರಹಕ್ಕೆ ಹೋಲಿಸಿದಾಗ ಸಪ್ಪೆಯೇ ಸರಿ. ಹಾಗಾಗಿ, ಭಾರತೀಯ ಸ್ವಾತಂತ್ರ್ಯಸಂಗ್ರಾಮದ ಎರಡು ಬಹುಮುಖ್ಯ ಸಾಮೂಹಿಕ ಆಂದೋಲನಗಳ ನಡುವಿನ ಈ ವರ್ಷಗಳನ್ನು ಚರಿತ್ರಕಾರರು ಕಡೆಗಣಿಸಿರುವುದು ಆಶ್ಚರ್ಯದ ವಿಷಯವೇ

ನಲ್ಲ. 1925 ಮತ್ತು 1927ರ ವಿದ್ಯಮಾನಗಳ ಬಗ್ಗೆ ಈವರೆಗೆ ನಡೆದಿರುವ ಅಧ್ಯಯನವೂ ಅತ್ಯಲ್ಪ ಮೊತ್ತದ್ದಾಗಿದೆ.

ಸ್ವಾರಸ್ಯವೆಂದರೆ, ಮೇಲ್ಕಾಣಿಸಿದ ಎರಡು ಇಸವಿಗಳಲ್ಲಿಯೇ ಮೂವರು ಅಸಾಮಾನ್ಯ ಆಂಗ್ಲರು - ಇಬ್ಬರು ಮಹನೀಯರು ಹಾಗೂ ಓರ್ವ ಮಹಿಳೆ ಭಾರತಕ್ಕೆ ಬಂದರು. ಭಾರತವನ್ನೇ ತಮ್ಮ ನಾಡಾಗಿಸಿಕೊಂಡರು.

ಅವರಲ್ಲಿ ಪ್ರತಿಯೊಬ್ಬರೂ ತಮ್ಮದೇ ದೇಶದ ಪ್ರಭುತ್ವದ ವಿರುದ್ಧ ಸೆಣಸಾಡುತ್ತಿದ್ದ ಅನ್ಯ ಪ್ರಜಾಸಮುದಾಯವೊಂದರ ಹೋರಾಟದಿಂದ ಸ್ಫೂರ್ತಿಗೊಂಡರು. ಹಾಗೂ ಆ ಹೋರಾಟದಲ್ಲಿ ಸಾಮಾನ್ಯಕ್ಕಿಂತ ಹೆಚ್ಚಿನ ಪಾತ್ರಗಳನ್ನು ನಿರ್ವಹಿಸಿದರು. ಪಾಸ್‌ಪೋರ್ಟ್ ಎನ್ನುವ ದಾಖಲೆ ಸ್ವಾನುಕೂಲದ ಒಂದು ಸಂಕೇತಪತ್ರಕ್ಕಿಂತ ಹೆಚ್ಚಾಗಿ ರಾಷ್ಟ್ರನಿಷ್ಠೆಯ ಒಂದು ಹೆಗ್ಗುರುತೇ ಆಗಿದ್ದಂತಹ ಆ ಕಾಲದಲ್ಲಿ ಅವರು ಅಂದಿನ ಜಗತ್ತಿನ ಅತ್ಯಂತ ಪ್ರಬಲ ರಾಷ್ಟ್ರವಾಗಿದ್ದ ತಮ್ಮ ದೇಶದ ಅಧಿಕೃತ ಪೌರತ್ವವನ್ನು ಬಿಟ್ಟುಕೊಟ್ಟು ಆಗಷ್ಟೇ ತನ್ನತನವನ್ನು ಕಂಡುಕೊಳ್ಳಲು ಹೆಣಗಾಡುತ್ತಿದ್ದ ದೇಶವೊಂದರ ಅನಿಶ್ಚಿತ ಸ್ವರೂಪದ ಸದಸ್ಯತ್ವವನ್ನು ಪಡೆದುಕೊಂಡರು.

ಆ ಮೂವರಲ್ಲಿ ಇಲ್ಲಿಗೆ ಬಂದ ಮೊದಲ ವ್ಯಕ್ತಿ ಮ್ಯಾಡಲಿನ್ ಸ್ಲೇಡ್. ಆಕೆ ಜನಿಸಿದ್ದು 1892ರಲ್ಲಿ, ನೌಕಾಪಡೆಯ ಅಧಿಕಾರಿಯೋರ್ವನ ಕುಟುಂಬದಲ್ಲಿ, ಅಪ್ಪ ವಿದೇಶಗಳಲ್ಲಿ ಸೇವೆ ಸಲ್ಲಿಸುತ್ತಿದ್ದ. ಆಕೆಯ ಬಾಲ್ಯದಿನಗಳಲ್ಲಿ ಆಕೆ ಹಳ್ಳಿಗಾಡಿನಲ್ಲಿ ಕುದುರೆ ಸವಾರಿ ಕಲಿಯುತ್ತ ಬೇಟೆಯಾಡುತ್ತ, ಪಿಯಾನೋ ನುಡಿಸುತ್ತ ಬೆಳೆದಳು. ಹದಿಹರೆಯದ ಹುಡುಗಿಯಾಗಿದ್ದಾಗ ಒಮ್ಮೆ ಆಕೆ ತಂದೆಯೊಂದಿಗೆ ಮುಂಬಯಿಗೆ ಭೇಟಿ ನೀಡಿದಳು; ಅಲ್ಲಿ ಸಂತೋಷ ಕೂಟಗಳ ಸಂಭ್ರಮದಲ್ಲಿ ಹಾಗೂ ಬೆಟ್ಟಗುಡ್ಡಗಳಲ್ಲಿ ರಜಾ ದಿನಗಳ ಮೋಜಿನಲ್ಲಿ ಕಾಲಕಳೆದು ಮರಳಿದಳು.

ಆಕೆಯ ಮೊತ್ತಮೊದಲ ಆಸಕ್ತಿಯ ವಿಷಯ ಸಂಗೀತವಾಗಿತ್ತು, ಅದರಲ್ಲಿಯೂ ವಿಶೇಷವಾಗಿ ಜರ್ಮನ್ ಸಂಗೀತ ಹಾಗೂ ಇನ್ನೂ ವಿಶೇಷವಾಗಿ ಬಿಥೋವನ್ನನ ಸಂಗೀತವಾಗಿತ್ತು. ಖ್ಯಾತ ಫ್ರೆಂಚ್ ಲೇಖಕ ರೋಮೇ ರೋಲಾ ಬಿಥೋವೆನ್ನನ ಬಗ್ಗೆ ಬರೆದಿದ್ದ ಪುಟ್ಟ ಪುಸ್ತಕವೊಂದನ್ನು ಹಾಗೂ ಆತನ 'ಜೀನ್ ಕ್ರಿಸ್ಟೋಫ್' ಕಾದಂಬರಿಯನ್ನು ಓದಿದ ಬಳಿಕ ಆಕೆ 1924ರ ಆಟಂ ಋತುವಿನಲ್ಲಿ ಆತನನ್ನು ಭೇಟಿಯಾಗಲೆಂದು ವಿಲ್ಲೆನ್ಯೂಗೆ ತೆರಳಿದಳು. ಆಗ ರೋಲಾ ತನ್ನ ಹೊಸ ಕೃತಿ 'ಮಹಾತ್ಮಗಾಂಧಿ'ಯ ಕರಡಚ್ಚು ಪ್ರತಿಯನ್ನು ಪರಿಶೀಲಿಸುತ್ತಿದ್ದ. ಆ ದಿನಗಳಲ್ಲಿ, ಕುಮಾರಿ ಸ್ಲೇಡ್ ಇನ್ನೂ ಕೂಡಾ 'ಇನ್ನೊಬ್ಬ ಏಸುಕ್ರಿಸ್ತ' ಎಂದು ರೋಲಾ ವರ್ಣಿಸುತ್ತಿದ್ದ ವ್ಯಕ್ತಿಯ ಬಗ್ಗೆ ಏನನ್ನೂ ಕೇಳಿ ತಿಳಿದಿರಲಿಲ್ಲ. ಆದರೆ ಆ ಪುಸ್ತಕ ಪ್ರಕಟವಾದಾಗ ಆಕೆ ಅದನ್ನು ಕೊಂಡು ಓದಿದಳು, ಓದು ಮುಗಿಸಿದ ಮರುಕ್ಷಣವೇ ಮನದಲ್ಲಿ 'ಆತ್ಯಂತಿಕ ಕರೆ'ಯೊಂದನ್ನು ಕೇಳಿದಳು.

ವಾಸ್ತವ ಪ್ರಜ್ಞೆಯಿದ್ದ ಆಕೆ ಆ ಕರೆಗೆ ಓಗೊಡುವ ಮೊದಲು ಚರಕಾದಿಂದ ನೂಲು

ತೆಗೆಯುವ ಹಾಗೂ ನೇಯುವ ಅಭ್ಯಾಸದಲ್ಲಿ ತೊಡಗಿಕೊಂಡು ತನ್ನನ್ನು ತಾನು ಸಿದ್ಧಪಡಿಸಿಕೊಂಡಳು. 1925ರ ಮೇ ತಿಂಗಳಿನಲ್ಲಿ ಆಕೆ ತಾನು ತಯಾರಿಸಿದ್ದ ಉಣ್ಣೆಯೊಂದಿಷ್ಟನ್ನು ಗಾಂಧೀಜಿಗೆ ಕಳಿಸಿಕೊಟ್ಟಳು. ಪ್ರತಿಯಾಗಿ ಮಹಾತ್ಮಾಗಾಂಧಿ ಆ ಉಣ್ಣೆ 'ಉತ್ಕೃಷ್ಟ'ವಾಗಿತ್ತೆಂದೂ ಆಕೆ 'ತನಗಿಷ್ಟ ಬಂದಾಗ' ಭಾರತಕ್ಕೆ ಬರಬಹುದೆಂದೂ ಉತ್ತರಿಸಿದರು. ಅದೇ ವರ್ಷ ಅಕ್ಟೋಬರ್ 6 ರಂದು ಮಾರ್ಸೇ ನಗರದಿಂದ ಹಡಗಿನಲ್ಲಿ ಹೊರಟ ಕುಮಾರಿ ಸ್ಲೇಡ್ ನವೆಂಬರ್ 6 ರಂದು ಮುಂಬಯಿಗೆ ಬಂದಳು, ಅದೇ ರಾತ್ರಿ ರೈಲಿನಲ್ಲಿ ಪ್ರಯಾಣಿಸಿ ಅಹಮದಾಬಾದನ್ನು ತಲುಪಿದಳು.

ಇನ್ನೋರ್ವ ವ್ಯಕ್ತಿ-ಫಿಲಿಪ್ ಸ್ಪ್ರಾಟ್-ಭಾರತಕ್ಕೆ ಬಂದುದು ಸ್ಲೇಡ್‌ಳ ಆಗಮನದ ಹದಿನೈದು ತಿಂಗಳ ಬಳಿಕ; ಆತ ಬೇರೆಯೆ ಒಂದು ಮಾರ್ಗದ ಮುಖಾಂತರ ಇಲ್ಲಿಗೆ ತಲುಪಿಕೊಂಡ. ಸ್ಲೇಡ್‌ಳಿಗಿಂತ ಹತ್ತು ವರ್ಷ ಕಿರಿಯನಾದ ಸ್ಪ್ರಾಟ್ ಅಸಾಂಪ್ರದಾಯಿಕ ನಿಲುವುಗಳನ್ನು ಹೊಂದಿದ್ದ ಲಂಡನ್ ಶಾಲಾ ಉಪಾಧ್ಯಾಯನೊಬ್ಬನ ಮಗನಾಗಿದ್ದ. ಕೆಳಮಧ್ಯಮ ವರ್ಗದ ಈ ಹುಡುಗ 1921ರಲ್ಲಿ ವಿದ್ಯಾರ್ಥಿವೇತನವೊಂದನ್ನು ಪಡೆದು ಕೇಂಬ್ರಿಜ್‌ನ ಡನಿಂಗ್ ಕಾಲೇಜಿನಲ್ಲಿ ವ್ಯಾಸಂಗಕ್ಕೆಂದು ಸೇರಿಕೊಂಡ. ವಿಶ್ವವಿದ್ಯಾನಿಲಯದಲ್ಲಿ ಆಗಿನ ಕೆಲವರು ರಷಿಯಾದ ಕ್ರಾಂತಿಯಿಂದ ಸ್ಫೂರ್ತಿಯನ್ನು ಪಡೆದುಕೊಂಡಂಥವರಾಗಿದ್ದರು. ಸ್ಪ್ರಾಟ್ ಆ ಲೇಬರ್ ಕ್ಲಬ್‌ನ ಸದಸ್ಯನಾದ; ಮುಂದೆ ಕಮ್ಯುನಿಸ್ಟ್ ಪಾರ್ಟಿ ಆಫ್ ಗ್ರೇಟ್ ಬ್ರಿಟನ್ ಅನ್ನು ಸೇರಿಕೊಂಡು ಕಾರ್ಖಾನೆ ಹಾಗೂ ರೈಲ್ವೆ ನಿಲ್ದಾಣಗಳ ಆಸುಪಾಸಿನಲ್ಲಿ ನಿಂತು ತನ್ನ ಪಕ್ಷದ ಪುಸ್ತಕಗಳನ್ನು ಮಾರತೊಡಗಿದ.

ಆತ ಸ್ನಾತಕ ಪದವಿಯನ್ನು ಪಡೆಯುತ್ತಿದ್ದಂತೆಯೆ ಪಕ್ಷ ಆತನಿಗೆ 'ದೂತ ಹಾಗೂ ವರದಿಗಾರ'ನಾಗಿ ಭಾರತಕ್ಕೆ ತೆರಳಲು ಆಜ್ಞಾಪಿಸಿತು. ಇಲ್ಲಿ ಆಗಷ್ಟೇ ಶ್ರೀಪಾದ ಡಾಂಗೆ, ಮುಝಫರ್ ಅಹ್ಮದ್ ಮತ್ತು ಇತರರು ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾವನ್ನು ಪ್ರಾರಂಭಿಸಿದ್ದರು. ವಸಾಹತುಶಾಹಿ ಬುದ್ಧಿಗೆ ಮತ್ತೊಂದು ನಿದರ್ಶನವೆಂಬಂತೆ, ಗ್ರೇಟ್ ಬ್ರಿಟನ್‌ನ ಕಮ್ಯುನಿಸ್ಟ್ ಪಕ್ಷ ಭಾರತೀಯ ಕಮ್ಯುನಿಸ್ಟ್ ಪಕ್ಷವನ್ನು ತನ್ನ ಹತೋಟಿಯಲ್ಲಿಟ್ಟುಕೊಳ್ಳುವ ಇಚ್ಛೆಯನ್ನು ಹೊಂದಿತ್ತು. ಆ ತಂತ್ರದ ಪ್ರಕಾರ ಸ್ಪ್ರಾಟ್ ಕಾನೂನು ಸಮ್ಮತ ರಕ್ಷೆಯಾಗಿ ಬೇರೆಯ ಒಂದು ಕಾರ್ಮಿಕರ ಹಾಗೂ ರೈತರ ಪಕ್ಷವೊಂದನ್ನು ಕಟ್ಟಿಕೊಳ್ಳಬೇಕೆಂದು ಸಿ.ಪಿ.ಐ.ಗೆ ನಿರ್ದೇಶನ ನೀಡಬೇಕಾಗಿತ್ತು ಹಾಗೂ ಜಾಗರೂಕನಾಗಿ ಟ್ರೇಡ್ ಯೂನಿಯನ್‌ಗಳನ್ನು (ಅವು ಆಗ ಎನ್.ಎಮ್. ಜೋಷಿಯವರಂತಹ ಸಾಮವಾದಿ-ಸುಧಾರಣಾವಾದಿಗಳ ನೇತೃತ್ವದಲ್ಲಿದ್ದವು) ಕೈವಶ ಮಾಡಿಕೊಳ್ಳಬೇಕಾಗಿತ್ತು.

1927ರ ಆದಿಭಾಗದಲ್ಲಿ ಮುಂಬಯಿಗೆ ಬಂದಿಳಿದ ಫಿಲಿಪ್ ಸ್ಪ್ರಾಟ್ ಮುಂದೆ ಶ್ರಮಿಕವರ್ಗದವರನ್ನೂ, ಅವರ ನಾಯಕತ್ವ ವಹಿಸಬಲ್ಲಂತಹ ಕಮ್ಯುನಿಸ್ಟರನ್ನೂ ಹುಡುಕಿಕೊಂಡು ದೆಹಲಿ, ಕಾನಪುರ್ ಹಾಗೂ ಲಾಹೋರ್‌ಗೆ ತೆರಳಿದ.

ವೆರಿಯರ್ ಎಲ್ವಿನ್ ಭಾರತಕ್ಕೆ ಬಂದುದು ಸರಿಸುಮಾರು ಅದೇ ದಿನಗಳಲ್ಲಿ. 1927ರ ಸೆಪ್ಟೆಂಬರ್‌ನಲ್ಲಿ ಮಲಬಾರಿಗೆ ಬಂದ ಎಲ್ವಿನ್ ಮುಂದೆ ಪುಣೆಗೆ ಬಂದು ಅಲ್ಲಿಯೆ ನೆಲೆ ನಿಂತ. ತನ್ನ ಸಮಕಾಲೀನ ಸ್ಪ್ರಾಟ್‌ನಂತೆಯೇ 1902ರಲ್ಲಿ ಜನಿಸಿದ ಆತ ಸ್ಪ್ರಾಟ್ ಕೇಂಬ್ರಿಜ್‌ಅನ್ನು ಸೇರಿಕೊಂಡ ವರ್ಷದಲ್ಲಿಯೆ ಆಕ್ಸ್‌ಫರ್ಡ್‌ನ ಮರ್ಟನ್ ಕಾಲೇಜನ್ನು ಪ್ರವೇಶಿಸಿದ. ಒಬ್ಬ ಬಿಷಪ್‌ನ ಮಗನಾಗಿದ್ದ ಆತ ತನ್ನ ಆರನೆಯ ವಸಯಸ್ಸಿನಲ್ಲಿಯೆ ತಂದೆಯನ್ನು ಕಳೆದುಕೊಂಡ.

ಆಕ್ಸ್‌ಫರ್ಡ್‌ನಲ್ಲಿ ಮಹಾಪ್ರತಿಭಾಶಾಲಿ ವಿದ್ಯಾರ್ಥಿಯಾಗಿದ್ದ ಎಲ್ವಿನ್ ಇಂಗ್ಲಿಷ್ ಹಾಗೂ ಥಿಯಾಲಜಿಯಲ್ಲಿ ಪ್ರಥಮ ದರ್ಜೆಯ ಪದವಿಯನ್ನು ಗಳಿಸಿದ.

ವ್ಯಾಸಂಗ ಮುಗಿಸಿದ ಬಳಿಕ ಪಾದ್ರಿಯಾದ ಆತ ಚರ್ಚ್ ಆಫ್ ಇಂಗ್ಲೆಂಡ್‌ನ ವ್ಯವಸ್ಥೆಯಲ್ಲಿ ತನ್ನ ತಂದೆಯಂತೆಯೆ ಹಂತಹಂತವಾಗಿ ಮೇಲಕ್ಕೇರುತ್ತಾನೆ ಎಂಬುದು ಎಲ್ಲರ ನಿರೀಕ್ಷೆಯಾಗಿತ್ತು. ಆದರೆ ಸ್ನೇಹಿತರೆಲ್ಲರಿಗೆ ಆಶ್ಚರ್ಯವೂ ತಾಯಿಗೆ ಆಘಾತವೂ ಆಗುವ ರೀತಿಯಲ್ಲಿ ಆತ ಆ ದಾರಿಯನ್ನು ಬಿಟ್ಟು ಕ್ರೈಸ್ತಧರ್ಮವನ್ನು 'ಭಾರತೀಕರಣಗೊಳಿಸುವ' ಕಡುಕಷ್ಟದ ಪ್ರಯತ್ನದಲ್ಲಿ ತೊಡಗಿಕೊಂಡಿದ್ದ ಪುಟ್ಟ ಪಂಥವೊಂದಾಗಿದ್ದ 'ಕ್ರಿಸ್ತ ಸೇವಾ ಸಂಘ'ವನ್ನು ಸೇರಿಕೊಂಡ.

ಹಳೆಯ ಜೀವನದ ಹಾದಿಯತ್ತ ತಿರುಗಿ ಒಮ್ಮೆಯೂ ನೋಡದಂತೆ ಭಾರತಕ್ಕೆ ಬಂದು ಸೇರಿಕೊಂಡ ಈ ಮೂವರೂ ವಿದೇಶೀಯರು ತಾವು ಸ್ವೀಕರಿಸಿದ ನಾಡಿಗೆ ತಮ್ಮನ್ನು ಸಂಪೂರ್ಣ ಸಮರ್ಪಿಸಿಕೊಂಡರು.

ಮ್ಯಾಡಲಿನ್ ಸ್ಲೇಡ್ ಮೀರಾ ಬೆನ್ ಆದಳು; ಗಾಂಧೀಜಿಯವರ ಆತ್ಮೀಯ ಮತ್ತು ನಿಷ್ಠಾವಂತ, ಹಾಗೂ ಕೆಲವೊಮ್ಮೆ ಉಗ್ರಶ್ರದ್ಧಾವಂತಳೂ ಆದ, ಶಿಷ್ಯೆಯಾದಳು. ಆಕೆ ಗಾಂಧೀಜಿಯವರ ಆಶ್ರಮದಲ್ಲಿ ಅಡುಗೆ ಬೇಯಿಸಿದಳು, ಬಟ್ಟೆ-ಪಾತ್ರೆಗಳನ್ನು ತೊಳೆದಳು, ನೆಲವನ್ನು ಗುಡಿಸಿ ಸಾರಿಸಿದಳು. ಗಾಂಧೀಜಿ ಸೆರೆಮನೆಗೆ ಹೋಗಿದ್ದಾಗ 'ಯಂಗ್ ಇಂಡಿಯಾ' ಪತ್ರಿಕೆಯ ಸಂಪಾದಕಿಯಾಗಿ ಕಾರ್ಯನಿರ್ವಹಿಸಿದ ಆಕೆ ಕೊನೆಗೆ ಸ್ವತಃ ಸೆರೆಗೆ ಹೋಗಿಬಂದಳು. ಗಾಂಧೀಜಿಯವರ ಬಗ್ಗೆ ಆಕೆ ತೋರುತ್ತಿದ್ದ ಅತಿಶಯ ಪ್ರೀತಿ, ಕೆಲವೊಮ್ಮೆ ಆಕೆ ಗಾಂಧೀಜಿ ತನಗೆ ಮಾತ್ರ ಮೀಸಲಾದ ವ್ಯಕ್ತಿ ಎನ್ನುವಂತೆ ನಡೆದುಕೊಳ್ಳುತ್ತಿದ್ದ ರೀತಿ ಕಸ್ತೂರಬಾ ಸಹ ಸೇರಿದಂತೆ ಬೇರೆ ಗಾಂಧಿ ಆಪ್ತರಿಗೆ ಸಹನೆ ಪರೀಕ್ಷಿಸುವಂತಿತ್ತಂತೆ. ಆದರೆ ಗುರು ಗಾಂಧೀಜಿಯವರಿಗೆ ಮಾತ್ರ ಆಕೆ ಸ್ವಂತ ಮಗಳಷ್ಟೆ ಆತ್ಮೀಯಳೂ ವಿಶ್ವಾಸಾರ್ಹಳೂ ಆಗಿದ್ದಳು.

1931ರಲ್ಲಿ ಅವರು ಆಕೆಯನ್ನು ದುಂಡುಮೇಜಿನ ಪರಿಷತ್ತಿಗೆ ಜೊತೆಗೆ ಕರೆದೊಯ್ದರು. 'ಇಂಗ್ಲೆಂಡ್ ತಾನು ಹುಟ್ಟಿದ ನಾಡಾದಾರೂ ಈಗ ತನಗದು ಪರದೇಶ' ಎಂದ ಆಕೆ ಖದ್ದರ್ ಸೀರೆ ಹಾಗೂ ಚಪ್ಪಲಿಯನ್ನು ಧರಿಸಿಯೆ ಅಲ್ಲಿಗೆ ತೆರಳಿದಳು. ಲಂಡನ್‌ನ ಪತ್ರಕರ್ತನೊಬ್ಬ 'ನೀವು ಹಿಂದೂ ಆಗುವವರಿದ್ದೀರೊ?' ಎಂದು ಪ್ರಶ್ನಿಸಿದಾಗ ಆಕೆ 'ಹಾಗೇನಿಲ್ಲ. ಆದರೆ ನೆನಪಿಡಿ, ಹಿಂದೊಮ್ಮೆ ಕ್ರಿಸ್ತ ಹಾಗೂ ಬುದ್ಧರಿದ್ದಂತೆ ಇಂದು ಗಾಂಧೀಜಿ ಇದ್ದಾರೆ' ಎಂದು ಮರುನುಡಿದಳು.

1934 ಆಕೆ ಗಾಂಧಿ ಸಂದೇಶವನ್ನು ಸಾರಲೆಂದು ಕೈಗೊಂಡ ಅಮೆರಿಕಾ ಪ್ರವಾಸ ಸಾಕಷ್ಟು ಯಶಸ್ವಿಯಾಗಿತ್ತು. ಮಾರನೆಯ ವರ್ಷ ಗಾಂಧೀಜಿ ತನ್ನ ಹೊಸ ಆಶ್ರಮಕ್ಕೆ ಸೂಕ್ತವಾದೊಂದು ಸ್ಥಳವನ್ನು-ಅಂದಿನ ಭಾರತದ ಕಡುಬಡವ ಜಿಲ್ಲೆಯಾದ ವಾರ್ಧಾದಲ್ಲಿ ಅತಿಬಡವ ಹಳ್ಳಿಯೊಂದನ್ನು-ಹುಡುಕಿ ಕೊಡಲು ಆಕೆಯನ್ನು ಕೇಳಿ

ಕೊಂಡರು. ಮೀರಾ ಬೆನ್ ಸೆಗಾಂವ್ ಎನ್ನುವ ಹಳ್ಳಿಯನ್ನು ಆರಿಸಿಕೊಟ್ಟಳು. ಸ್ವಲ್ಪ ಕಾಲದಲ್ಲಿಯೆ ಅಲ್ಲಿ ಗಾಂಧೀಜಿ ಮತ್ತು ಅವರ ಕಚೇರಿ ಸ್ಥಾಪಿತವಾದದು; ಸೆಗಾಂವ್ ಆ ಬಳಿಕ ಸೇವಾಗ್ರಾಮ ಎನ್ನುವ ಹೊಸ ಹೆಸರನ್ನು ಪಡೆದುಕೊಂಡಿತು.

ಇದೇ ಅವಧಿಯಲ್ಲಿ, ವೆರಿಯರ್ ಎಲ್ವಿನ್ ಮೀರಾಳ ಹೋಲಿಕೆಯಲ್ಲಿ ಕೊಂಚ ಕಡಿಮೆ ಅಚಲತೆಯ ಆದರೆ ನಿಶ್ಚಿತವಾಗಿಯೂ ಹೆಚ್ಚು ವರ್ಣಮಯವಾದ ಮಾರ್ಗವೊಂದರಲ್ಲಿ ಸಾಗುತ್ತ ಬರುತ್ತಿದ್ದ. 1928ರ ಜನವರಿಯಲ್ಲಿ ಅಂತರ್‌ಧರ್ಮ ಸಮ್ಮೇಳನವೊಂದರಲ್ಲಿ ಭಾಗವಹಿಸಲೆಂದು ಸಬರಮತಿಗೆ ಬಂದ ಆತ ಮಹಾತ್ಮರ ಮೋಡಿಗೆ ಒಳಗಾದ; ಮೀರಾ ಮಹಾತ್ಮರ ದತ್ತುಮಗಳಾದಂತೆಯೆ ತನ್ನನ್ನು ಅವರ ದತ್ತು ಆಂಗ್ಲ ಮಗನಾಗಿ ಮಾಡಿಕೊಂಡ.

ಆತನ ದೃಷ್ಟಿಯಲ್ಲಿ ಗಾಂಧೀಜಿ ಏಸುಕ್ರಿಸ್ತನ ಎರಡನೆಯ ರೂಪವಾಗಿದ್ದರು. ಸತ್ಯಾಗ್ರಹವು ಬೈಬಲ್ ಪ್ರತಿಪಾದಿಸುವಂತಹ ಮಾರ್ಗವಾಗಿತ್ತು. ಮುಂದೆ ಆತ 'ಟ್ರುಥ್ ಅಬೌಟ್ ಇಂಡಿಯಾ', 'ದಿ ಡಾನ್ ಆಫ್ ಇಂಡಿಯನ್ ಫ್ರೀಡಮ್'ನಂತಹ ಪುಸ್ತಕಗಳು ಹಾಗೂ ಹಲವಾರು ಪತ್ರಿಕಾಲೇಖನಗಳ ಮುಖಾಂತರ ಎರಡು ವಿಭಿನ್ನ ಸಮುದಾಯಗಳ ಮನಸ್ಸುಗಳನ್ನು ಪರಿವರ್ತಿಸಲು ಪ್ರಯತ್ನಿಸಿದ: ಒಂದೆಡೆ, ಭಾರತದ ಸ್ವಾತಂತ್ರ್ಯ ಹೋರಾಟವು ನ್ಯಾಯಸಮ್ಮತವಾದುದೆಂದು ಬ್ರಿಟಿಷ್ ಸಮಾಜಕ್ಕೆ ಮನವರಿಕೆ ಮಾಡಿಕೊಡಲೆತ್ನಿಸುತ್ತ ಇನ್ನೊಂದೆಡೆ, ಕೆಲವು ವ್ಯಕ್ತಿಗಳನ್ನು ಹೊರತುಪಡಿಸಿದಂತೆ, ಭಾರತದಲ್ಲಿ ಕಾಂಗ್ರೆಸ್‌ಗಿಂತ ಬ್ರಿಟಿಷ್ ರಾಜ್ಯಭಾರವಿರುವುದೇ ಮೇಲು ಎನ್ನುವ ಬಲವಾದ ನಿಲುವನ್ನು ಹೊಂದಿದ್ದ ಭಾರತೀಯ ಕ್ರೈಸ್ತ ಸಮುದಾಯದ ನಂಬಿಕೆಯನ್ನು ಬದಲಾಯಿಸಲು ಆತ ಶ್ರಮಿಸಿದ.

ಕಾಲಾನುಕ್ರಮದಲ್ಲಿ, ಹೊರಜಗದ ಸಂಪರ್ಕವನ್ನೆ ಕಳೆದುಕೊಂಡು ವಿರಕ್ತರ ಮಠದಂತಾಗಿ ಹೋಗಿದ್ದ ಕ್ರೈಸ್ತ ಸೇವಾ ಸಂಘವನ್ನೂ ತೊರೆದ ಎಲ್ವಿನ್ ಭಾರತೀಯ ದೀನದಲಿತರ ಪ್ರತ್ಯಕ್ಷ ಸೇವೆಗೈಯುವಂತಹ ದಾರಿಯನ್ನು ಹುಡುಕತೊಡಗಿದ. ಆ ಕಾಲಘಟ್ಟದಲ್ಲಿ ಸುಧಾರಣಾವಾದಿಗಳಾಗಲಿ ರಾಷ್ಟ್ರೀಯವಾದಿಗಳಾಗಿ ಅಷ್ಟಾಗಿ ಲಕ್ಷಿಸದಿದ್ದಂತಹ ಬುಡಕಟ್ಟು ಜನಾಂಗಗಳ ಜೊತೆಯಲ್ಲಿ ಜೀವನ ಸಾಗಿಸಲು ನಿರ್ಧರಿಸಿ ಆತ 1932ರಲ್ಲಿ ತನ್ನ ಸ್ನೇಹಿತ ಶಾಮರಾವ್ ಹಿವಳೆಯೊಂದಿಗೆ ಮಾಂಡ್ಲಾ ಜಿಲ್ಲೆಯ ಮೂಲೆಯ ಹಳ್ಳಿಯೊಂದಕ್ಕೆ ತೆರಳಿದ. ಅಲ್ಲಿಯ ಮದ್ಯ-ಮೈಥುನ-ಮೋಜುಗಳ ಅದಮ್ಯ ಆಕರ್ಷಣೆಯ ತೆಕ್ಕೆಯಲ್ಲಿ ಬದುಕುತ್ತಿದ್ದ ಹಾಗೂ ಖಾದಿ ಬಟ್ಟೆಯೆಂದರೆ ಅಸಹ್ಯ ಪಡುತ್ತಿದ್ದ ಗೊಂಡರ ನಡುವೆ ಆತ ಕಳೆದ ದಿನಗಳು ಮಹಾತ್ಮರನ್ನು ಬೇರೆಯೆ ಒಂದು ಹೊಸ ದೃಷ್ಟಿಕೋನದಿಂದ ನೋಡತೊಡಗುವಂತೆ ಮಾಡಿದವು. ಮಹಾತ್ಮರ ಬಗ್ಗೆ ಆತನಿಗಿದ್ದ ವೈಯಕ್ತಿಕ ಪ್ರೀತಿ-ಗೌರವಗಳು ಕೊಂಚವೂ ಕಡಿಮೆಯಾಗಲಿಲ್ಲ, ಆದರೆ ಅವರ ಜೀವನತತ್ವಗಳು ಮಾತ್ರ ಆದಿವಾಸಿ-ಬುಡಕಟ್ಟು ಜೀವನಕ್ರಮಕ್ಕೆ ಸ್ವಲ್ಪವೂ ಸರಿಹೊಂದಲಾರವು ಎಂದೆ ಆತನಿಗನಿಸಿತು. ಮುಂದೆ ಆತ ಅಲ್ಲಿಯ ಗೊಂಡ ಹುಡುಗಿಯೊಬ್ಬಳನ್ನು ಮದುವೆಯಾದ, ಬ್ರಹ್ಮಚರ್ಯ ಪರಿಪಾಲನೆಯ ಮಾರ್ಗವನ್ನು ತಿರಸ್ಕರಿಸಿ ಆಕೆಯೊಂದಿಗೆ ಸಾಂಪ್ರದಾಯಿಕ ಸಾಂಸಾರಿಕ ಬಾಳನ್ನು ನಡೆಸಿದ.

ಮೂವತ್ತು ಹಾಗೂ ನಲವತ್ತರ ದಶಕಗಳಲ್ಲಿ ಒಂದೆಡೆ ಶಾಮರಾವ್ ಹಿವಳೆ ಶಾಲೆಗಳನ್ನು ಹಾಗೂ ಆಸ್ಪತ್ರೆಯೊಂದನ್ನು ನಡೆಸುತ್ತಿದ್ದರೆ ಇನ್ನೊಂದೆಡೆ ಎಲ್ವಿನ್ ಆದಿವಾಸಿಗಳ ಸಂಸ್ಕೃತಿ ಹಾಗೂ ಅವರ ಸಮಸ್ಯೆಗಳ ಬಗ್ಗೆ ಹಲವಾರು ಮೇರುಗ್ರಂಥಗಳನ್ನು ಬರೆದ. ಅವುಗಳಲ್ಲಿ ಕನಿಷ್ಠ ಎರಡು

ಕೃತಿಗಳು - 'ಬೈಗಾ' (1939) ಮತ್ತು 'ಮುರಿಯಾ ಹಾಗೂ ಅವರ ಘೋಟುಲ' (1947)¥ ವಿಜ್ಞಾನ ಹಾಗೂ ಸಾಹಿತ್ಯಗಳೆರಡರ ಮಟ್ಟಿಗೂ ಉಜ್ವಲ ರತ್ನಗಳು. ಈ ರೀತಿಯಲ್ಲಿ ಮಾನವವಿಜ್ಞಾನದ ಇತಿಹಾಸದಲ್ಲಿ ಹೆಜ್ಜೆಹೆಜ್ಜೆಗೂ ಕಂಡುಬರುವ ಮುದ ನೀಡುವ ವಿರೋಧಾಭಾಸದ ಮತ್ತೊಂದು ನಿದರ್ಶನವೆಂಬಂತೆ ಈ ಆಕ್ಸ್‌ಫರ್ಡ್ ಮೇಧಾವಿ ಆದಿವಾಸಿಗಳ ಹಕ್ಕು-ಸ್ವಾತಂತ್ರ್ಯಗಳ ಅತಿಮುಖ್ಯ ಪ್ರತಿಪಾದಕನಾದ.

ಎಲ್ವಿನ್ ಮತ್ತು ಮೀರಾ ಬೆನ್‌ರಿಗೆ ಪರಸ್ಪರ ಪರಿಚಯವಿತ್ತು. ಹಾಗೆಯೆ, ಅವರ ನಡುವೆ ಅನೇಕ ಭಿನ್ನಾಭಿಪ್ರಾಯಗಳಿದ್ದುವು. ಎಲ್ವಿನ್ ಒಂದೆಡೆ ಬರೆಯುವಂತೆ ಒಮ್ಮೆ ಗಾಂಧೀಜಿಯವರ ಸಹಾಯದಾತನೊಬ್ಬನಿಗೆ ಸೇರಿದ್ದ ಮುಂಬಯಿಯ ಜುಹೂ ಪ್ರದೇಶದಲ್ಲಿ ಕುಟೀರವೊಂದರಲ್ಲಿ ಆತ ಮತ್ತು ಮೀರಾ ಬೆನ್ ಒಟ್ಟಿಗೆ ವಾರಾಂತ್ಯದ ದಿನಗಳನ್ನು ಕಳೆಯುವ ಪ್ರಸಂಗವೊಂದು ಬಂದಿತಂತೆ. ಬಿರುಬಿಸಿಲ ಮಧ್ಯಾಹ್ನದ ವೇಳೆ ಇಬ್ಬರೂ ಊಟ ಮಾಡುತ್ತಿದ್ದಾಗ ಮೀರಾ ಎದ್ದು ಕಿಟಕಿಗಳನ್ನು ಮುಚ್ಚಹೋದಳಂತೆ. ಎಲ್ವಿನ್‌ಗೆ ಇದು ವಿಚಿತ್ರವೆಂದು ತೋರಿ ಆತ, ಕಾರಣ ಕೇಳಿದಾಗ ಮೀರಾ 'ಸಮುದ್ರದ ಮೇಲಿಂದ ಹಾದು ಬರುವ ಈ ಗಾಳಿ ಉಪ್ಪಿನ ಕಣಗಳನ್ನು ತುಂಬಿಕೊಂಡಿದೆ. ಆ ಉಪ್ಪು ಈ ಆಹಾರವನ್ನು ಸೇರಿ, ಆ ಮೂಲಕ ನಿನ್ನ ದೇಹವನ್ನು ಸೇರಿ ನಿನ್ನ ಬಯಕೆಗಳನ್ನು ಕೆರಳಿಸಬಹುದು, ಆದಕ್ಕಾಗಿ ಎಂದು ಉತ್ತರಿಸಿದಳಂತೆ. ಇಷ್ಟು ಹೇಳುವ ಎಲ್ವಿನ್ ಈ ಪ್ರಸಂಗದ ಮುಂದಿನ ಭಾಗದ ಬಗ್ಗೆ ಏನನ್ನೂ ಹೇಳುವುದಿಲ್ಲ. ಅದು, ಪ್ರಾಯಶಃ, ಗಾಂಧಿಪುರಾಣದ ಮಟ್ಟಿಗೆ ಬಹು ಯಶಸ್ವಿಯಾಗಿ ಹತ್ತಿಕ್ಕಲ್ಪಟ್ಟ ರಹಸ್ಯಗಳಲ್ಲೊಂದಾಗಿರಬಹುದು.

1940ರ ದಶಕದ ಪೂರ್ವ ಭಾಗದಲ್ಲಿ, ತನ್ನ ಐವತ್ತರ ಹರೆಯದಲ್ಲಿ ಮೀರಾ ಬೆನ್ ಸಿಖ್ ಕ್ರಾಂತಿಕಾರಿ ಪೃಥ್ವಿ ಸಿಂಗ್ ಆಝಾದ್‌ನನ್ನು ಉತ್ಕಟವಾಗಿ ಪ್ರೀತಿಸತೊಡಗಿದಳು; ಆತ ಮಾತ್ರ ಅದಕ್ಕೆ ಪ್ರತಿಸ್ಪಂದಿಸಲಿಲ್ಲ. ತಪ್ತಹೃದಯ ಮೀರಾ ಗಾಂಧೀಜಿಯನ್ನು ಬಿಟ್ಟು ಮನಶ್ಶಾಂತಿ ಕಂಡುಕೊಳ್ಳಲೆಂದು ಹಿಮಾಲಯಕ್ಕೆ ತೆರಳಿದಳು.

ಮೀರಾ ಮತ್ತು ಎಲ್ವಿನ್‌ರ ರೀತಿಯಲ್ಲಿ ಫಿಲಿಪ್ ಸ್ಪ್ರಾಟ್ ಎಂದೂ ಗಾಂಧಿ ಭಕ್ತನಾಗಿರಲಿಲ್ಲ; ಹಾಗೆಯೆ, ಗಾಂಧಿ ಪ್ರಭಾವದಿಂದ ಆತ ಸಂಪೂರ್ಣ ಮುಕ್ತನೂ ಆಗಿರಲಿಲ್ಲ. 1929ರ ಮಾರ್ಚ್‌ನಲ್ಲಿ 'ಮೀರತ್ ಫಿತೂರಿ ಪ್ರಕರಣ'ದಲ್ಲಿ ಆತನ ಅನೇಕ ಸಹವರ್ತಿಗಳೊಂದಿಗೆ ಕಾರಾಗೃಹ ಶಿಕ್ಷೆ ಅನುಭವಿಸಬೇಕಾಗಿ ಬಂದಿತು. ನ್ಯಾಯಾಂಗ ವಿಚಾರಣೆಯ ವೇಳೆಯಲ್ಲಿ ಆತನಿಗೆ ಆಶ್ಚರ್ಯವೊಂದು ಕಾದಿತ್ತು. ಕಮ್ಯುನಿಸ್ಟರು ಯಾವತ್ತೂ ಸಹ ಕಾಂಗ್ರೆಸಿಗರನ್ನು 'ಬೂರ್ಜ್ವಾ ರಾಷ್ಟ್ರೀಯವಾದಿಗಳು' ಎಂದು ಟೀಕಿಸುತ್ತಿದ್ದುದಿತ್ತು. ಆದರೆ ಈಗ ಅದೇ ಕಾಂಗ್ರೆಸ್ ಪಕ್ಷದ ದಿವಾನ್ ಚಮನ್‌ಲಾಲ್ ಮತ್ತು ಡಾ॥ ಸಯಿಪುದ್ದೀನ್ ಕಿಚ್‌ಲೂ ಅವರುಗಳು ನ್ಯಾಯಾಲಯದಲ್ಲಿ ಸ್ಪ್ರಾಟ್ ಹಾಗೂ ಆತನ ಕಾಮ್ರೇಡರ ಪರವಾಗಿ ಹೋರಾಡಲು ವಕೀಲರ ವ್ಯವಸ್ಥೆಯನ್ನು ಮಾಡಿಕೊಟ್ಟರು. ಅವರ ಪ್ರಯತ್ನ ವಿಫಲವಾಯಿತು. 'ಬ್ರಿಟಿಷ್ ಇಂಡಿಯಾದ ಮೇಲೆ ಇಂಗ್ಲೀಷ್ ದೊರೆಗಿರುವ ಪರಮಾವಧಿಕಾರಕ್ಕೆ ಘಾತ ಮಾಡುವಂತಹ ಒಳಸಂಚು ಹೂಡಿದ ಅಪರಾಧಕ್ಕೆ ಶಿಕ್ಷೆಯಾಗಿ' ಸ್ಪ್ರಾಟ್ ಸೆರೆಮನೆಗೆ ಹೋದ; ಅಲ್ಲಿ ಗಾಂಧೀಜಿಯವರ ಬರಹಗಳನ್ನು ಓದುತ್ತ ಶಿಕ್ಷೆಯ ಅವಧಿ ಕಳೆದ.

'ಬ್ಲೋಯಿಂಗ್ ಅಪ್ ಇಂಡಿಯಾ' (1955) ಎನ್ನುವ ಶೀರ್ಷಿಕೆಯ ತನ್ನ ನೆನಪುಗಳ ಅಪೂರ್ಣ ಪುಸ್ತಕದಲ್ಲಿ ಆತ ಒಂದೆಡೆ ಬರೆಯುತ್ತಾನೆ: 'ಗಾಂಧೀಜಿಯವರ ವ್ಯಕ್ತಿತ್ವ ಹಾಗೂ

ತತ್ವಗಳು ನನ್ನೊಳಗಿದ್ದ ಪ್ಯುರಿಟಾನ್ ಅನ್ನು ಪ್ರಬಲವಾಗಿ ಸೆಳೆದವು. ಭಾರತದ ಆಂತರಿಕ ವಿಷಯಗಳ ಮಟ್ಟಿಗೆ ಅವರ ಮಾರ್ಗವೆ ಸರಿಯಾದುದೇನೋ ಎಂದು ನನಗನ್ನಿಸಿತು.'

1936ರ ಜೂನ್‌ನಲ್ಲಿ ಸೆರೆಯಿಂದ ಬಿಡುಗಡೆಯಾದ ಸ್ಪ್ರಾಟ್ ಕಾಲುನಡಿಗೆಯಲ್ಲಿ ಸೇವಾಗ್ರಾಮ ತಲುಪಿದ. ಅಲ್ಲಿ ಆತ ಕೆಲವು ನಿರ್ದಿಷ್ಟ ಪ್ರಶ್ನೆಗಳನ್ನು ಎದುರಿಸಿದ, ಉತ್ತರಿಸಿದ. ಆ ಬಳಿಕ ಆತ ಮದರಾಸ್‌ನಲ್ಲಿ ಮನೆ ಮಾಡಿದ. (ಈ ವೇಳೆಗಾಗಲೇ ಆತ ತಮಿಳು ಹುಡುಗಿಯೊಬ್ಬಳನ್ನು ಪ್ರೀತಿಸತೊಡಗಿದ್ದ; ಮುಂದೆ ಆಕೆಯನ್ನು ಮದುವೆಯಾದ).

1938ರಲ್ಲಿ ಆತ ಪ್ರಕಟಿಸಿದ 'ಗಾಂಧಿವಾದ; ಒಂದು ವಿಶ್ಲೇಷಣೆ' ಅಸಾಧಾರಣವಾದೊಂದು ಕೃತಿಯಾಗಿದೆ. ಐದುನೂರಾ ಹದಿನೈದು ಪುಟಗಳ ಈ ಗ್ರಂಥ ಗಾಂಧಿಯ ಬಗ್ಗೆ ಅಲ್ಲಿಯವರೆಗೆ ಬಂದಿದ್ದ ಎಲ್ಲ ಕೃತಿಗಳಿಗಿಂತಲೂ ಹೆಚ್ಚು ಸಮಗ್ರವಾಗಿತ್ತು. ಆ ಮುಂಚಿನ ಗಾಂಧಿ ಜೀವನಚರಿತ್ರೆಗಳು, ಉದಾಹರಣೆಗೆ ಜೋಸೆಫ್ ಡೋಕ್ ಮತ್ತು ಸಿ.ಎಫ್. ಆ್ಯಂಡ್ರೂಸ್‌ರ ಕೃತಿಗಳು ಗಾಂಧೀಜಿಯನ್ನು ತೀರಾ ಉದಾತ್ತೀಕರಿಸಿ ಚಿತ್ರಿಸಿದ್ದವು. ಸ್ಪ್ರಾಟ್‌ನ ಗ್ರಂಥ ಇಂದಿಗೂ ಸಹ ಯಾವುದೇ ಮಾರ್ಕ್ಸ್‌ವಾದಿ ಅಥವಾ ಅರೆ-ಮಾರ್ಕ್ಸ್‌ವಾದಿಯ ಗಾಂಧೀಜಿಯವರ ಬಗ್ಗೆ ನಡೆಸಿದ ಅತ್ಯಂತ ಮಹತ್ವದ ಅಧ್ಯಯನವಾಗಿದೆ. ಅದು ಬಿಡಿ ಘಟನೆಗಳನ್ನೂ ಹಾಗೂ ಚಳುವಳಿಗಳನ್ನೂ ಸಮಕಾಲೀನ ಚರಿತ್ರೆಯ ಹಿನ್ನೆಲೆಯಲ್ಲಿ ಹಾಗೂ ಕ್ಷಣಕ್ಷಣಕ್ಕೂ ಖಚಿತವಾಗಿ ರೂಪುಗೊಳ್ಳುತ್ತಿದ್ದ ಮಹಾತ್ಮರ ವ್ಯಕ್ತಿತ್ವದಹಿನ್ನೆಲೆಯಲ್ಲಿ ಇಟ್ಟು ನೋಡುವಂತಹ ಮೊಟ್ಟಮೊದಲ ಕಥಾನಕದ ಪ್ರಯತ್ನವಾಗಿದೆ.

ಗಾಂಧೀಜಿಯ ಮುಕ್ತ ಮನೋಭಾವ ಹಾಗೂ ಎಂಥದೆ ಎದುರಾಳಿಯನ್ನೂ ಸಂವಾದಕ್ಕೆ ಎಳೆಯುವಂತಹ ಅವರ ನಿಲುವು ಈ ಮಾಜಿ ಲೆನಿನ್‌ವಾದ್ಧಿಯ ಮೇಲೆ ಗಾಢ ಪ್ರಭಾವ ಬೀರಿದ್ದವು. ಎಲ್ಲ ಸಮಸ್ಯೆಗಳನ್ನೂ ವರ್ಗಸಂಘರ್ಷದ ಸಿದ್ಧಸೂತ್ರಗಳಿಗೆ ಸಂಕುಚಿಸುವಂತಹ ತನ್ನ ಕಮ್ಯುನಿಸ್ಟ್ ಸಹವರ್ತಿಗಳ ಮಾರ್ಗವನ್ನು ತಿರಸ್ಕರಿಸಿದ ಸ್ಪ್ರಾಟ್ ಸ್ವಾತಂತ್ರ್ಯಚಳುವಳಿಯು 'ಭಾರತಕ್ಕೆ ಪ್ರಜಾಪ್ರಭುತ್ವದ ಪರಿಚಯ ಮಾಡಿಕೊಡುವಂತಹ ಪ್ರಕ್ರಿಯೆಯೆಂದೂ ಹಾಗೂ ಜನಸಮುದಾಯವನ್ನು ರಾಜಕೀಯ ಶಕ್ತಿಯಾಗಿ ಬೆಳೆಸುವಂತಹ ಪ್ರಥಮ ಪ್ರಯತ್ನವೆಂದೂ' ನಂಬಿದ್ದ. ಗಾಂಧೀಜಿಯವರ ಅಹಿಂಸಾತತ್ವವು ಧರ್ಮದಿಂದ ಸ್ಫೂರ್ತಿ ಪಡೆದಿರುವಂಥದೆಂದು ತಿಳಿದ ಆತ, ಅದು ಜನಸಮೂಹದ ಕ್ರಾಂತಿಕಾರಿ ಪ್ರವೃತ್ತಿಯನ್ನು ನಿರ್ಬಲಗೊಳಿಸುವಂತಹ 'ವರ್ಗ ಹಿತಾಸಕ್ತಿಯ ತಂತ್ರ' ಎನ್ನುವ ಇತರ ಕಮ್ಯುನಿಸ್ಟರ ವಾದವನ್ನು ನಿರಾಕರಿಸಿದ.

ಸಂಕೇತಗಳ ಆಯ್ಕೆ ಮತ್ತು ರೂಪದಲ್ಲಿ ಮಹಾತ್ಮರು ಕೆಲವೊಮ್ಮೆ ಪ್ರತಿಗಾಮಿ ಮಧ್ಯಯುಗೀಯನಂತೆ ಕಂಡುಬರುತ್ತಿದ್ದರು ನಿಜ, ಆದರೆ ಸ್ಪ್ರಾಟ್ ಒಂದೆಡೆ ಅತ್ಯಂತ ಮಾರ್ಮಿಕವಾಗಿ ತೋರಿದಂತೆ 'ಅಂತಿಮವಾಗಿ ಭಾರತದ ಆಧುನಿಕೀಕರಣದ ಪ್ರಕ್ರಿಯೆಯಲ್ಲಿ ಮಾನ್ಯ ಗಾಂಧಿಯ

ವರದೆ ಅತ್ಯಂತ ಸತ್ಯಮಾರ್ಗವೆಂದು ಇತಿಹಾಸ ನಮಗೆ ತೋರಿಸಿಕೊಡುವ ಸಂಭವವುಂಟು. ತನ್ನ ಸಂಪರ್ಕಕ್ಕೆ ಬಂದ ಎಲ್ಲರಲ್ಲಿಯೂ ತನ್ನಲ್ಲಿರುವಂಥದೆ ವಾಸ್ತವಿಕ ಹಾಗೂ ಕ್ರಿಯಾತ್ಮಕ ಜೀವನಾಸಕ್ತಿಯನ್ನು ಸ್ಫುರಿಸ ಬಲ್ಲಂತಹ ಶಕ್ತಿ ಅವರ ವ್ಯಕ್ತಿತ್ವಕ್ಕುಂಟು; ಮತ್ತು ಇವೆ ಗುಣಗಳ ವೈಜ್ಞಾನಿಕ ಹಾಗೂ ತಾಂತ್ರಿಕ ಪ್ರಗತಿಯ ಹಾದಿ ತೋರುವಂಥವು.' ಕೊನೆಗೆ ಈ ಆಂಗ್ಲ ಮಾರ್ಕ್ಸ್‌ವಾದಿ ಒಂದೆಡೆ ತಾತ್ಪರ್ಯರೂಪದಲ್ಲಿಯೂ ಎನ್ನುವಂತೆ ಹೇಳಿದ: 'ಶ್ರೀ ಗಾಂಧಿಯವರು ಬ್ರಿಟಿಷ್ ಸಾಮ್ರಾಜ್ಯದ ಅತ್ಯುಜ್ವಲ ಪ್ರಜೆಯಾಗಿದ್ದಾರೆ.'

1948ರ ಜನವರಿಯಲ್ಲಿ ಗಾಂಧೀಜಿ ನಿಧನರಾದಾಗ ಮೀರಾ ಬೆನ್ ಋಷಿಕೇಶದ ತನ್ನ ಆಶ್ರಮದಿಂದ ಸಂದೇಶವೊಂದನ್ನು ಕಳಿಸಿದಳು: 'ನನ್ನ ಮಟ್ಟಿಗೆ, ದೇವರು ಹಾಗೂ ಬಾಪೂ ಈಗ ಪರಸ್ಪರ ಒಂದಾಗಿದ್ದಾರೆ.' ಇದೇ ಕಾಲಕ್ಕೆ ಎಂ. ಎನ್. ರಾಯ್ ಅವರ ಸಹವರ್ತಿಯಾಗಿದ್ದ ಸ್ಟ್ರಾಟ್ ರಾಯ್ ಅವರ ಪತ್ನಿಗೆ ಹೀಗೆ ಬರೆದ: ಗಾಂಧಿಯ ಹತ್ಯೆ 'ನನಗೆ ತುಂಬಾ ಆಘಾತವನ್ನುಂಟು ಮಾಡಿತು... ಒಂದುಕಾಲದಲ್ಲಿ ನಾನು ಆತನ ಬರಹಗಳನ್ನು ಸಾಕಷ್ಟು ಓದುತ್ತಿದ್ದೆ, ವಾರ್ಧಾ ಆಶ್ರಮಕ್ಕೆ ಹೋಗಿ ಆತನೊಂದಿಗೆ ಸುದೀರ್ಘ ಮಾತುಕತೆಯನ್ನು ನಡೆಸಿದ್ದೆ. ನನಗೆ ಆತನ ಬಗ್ಗೆಯಿದ್ದ ಭಾವನೆಗಳಲ್ಲಿ ಪಿತೃಪ್ರೇಮ-ಗೌರವಗಳೆ ಪ್ರಧಾನವಾಗಿದ್ದವು. ಅಂಥ ಒಬ್ಬ ವ್ಯಕ್ತಿಯನ್ನು, ಯಾವುದೆ ಸುಸ್ಥಾಪಿತ ವ್ಯವಸ್ಥೆ-ಸಂಸ್ಥೆಯನ್ನು ಟೀಕಿಸುವಂತೆಯೆ, ಟೀಕಿಸಬೇಕೆಂಬ ಬಯಕೆ ನಮ್ಮಲ್ಲಿ ಬರುವುದು ಸಹಜ. ಆದರೆ ಇಂಥ ಟೀಕೆಯನ್ನು ಮಾಡುತ್ತಿರುವಾಗಲೆ ಆ ಸೂಚನೆಗಳನ್ನು ಯಾರೂ ಕಾರ್ಯರೂಪಕ್ಕಿಳಿಸಬಾರದು ಎನ್ನುವಂಥ ಒಂದು ಪರೋಕ್ಷ ಬಯಕೆಯೂ ನಮ್ಮಲ್ಲಿ ಇರುವುದುಂಟು. ಗಾಂಧಿ ಹಾಗೂ ನನ್ನ ನಡುವಣ ಸಂಬಂಧದ ವಿಷಯದಲ್ಲಂತೂ ಇದು ಸತ್ಯ. ಹಾಗೆಯೆ ಅದು ಯಾವುದೆ ಬ್ರಿಟಿಷ್ ಕ್ರಾಂತಿಕಾರಿಯ ಉಗ್ರ ವಿಮರ್ಶೆಯ ಹಿಂದಡಗಿರುವ ಅಪ್ರಕಟಿತ ನಿಬಂಧನೆಯೂ ಹೌದು.'

ಗಾಂಧಿ ಸಾವಿನ ಬಗ್ಗೆ ಎಲ್ವಿನ್‌ನ ತತ್‌ಕ್ಷಣದ ಪ್ರತಿಕ್ರಿಯೆಯ ಬಗ್ಗೆ ಲಿಖಿತ ದಾಖಲೆಗಳಿಲ್ಲ. ಆದರೆ, ಆತ ಕೆಲಕಾಲದ ನಂತರ ಒಂದೆಡೆ ಬರೆದ: 'ಗಾಂಧಿ ತನ್ನ ಕೊನೆಯ ವರ್ಷಗಳಲ್ಲಿ ತನ್ನ ಅತ್ಯುನ್ನತ ಮಟ್ಟವನ್ನು ಮುಟ್ಟುತ್ತಿದ್ದಾಗ ನಾನು ಅವರಿಂದ ದೂರವಿದ್ದುದು ನನ್ನ ದುರಾದೃಷ್ಟ.'

ಮಹಾತ್ಮಾ ಕೊನೆಯುಸಿರೆಳೆದ, ಆದರ ಅದೇ ವೇಳೆಗೆ ಆತನ ದೇಶ ಸ್ವಾತಂತ್ರ್ಯವನ್ನು ಪಡೆದುಕೊಂಡಿತ್ತು. ಹಾಗಾಗಿ ಆತನ ಈ ಮೂರೂ ವಿಮರ್ಶಾತ್ಮಕ ಅಭಿಮಾನಿಗಳಿಗೆ ಮಾಡಲು ಕೈತುಂಬ ಕೆಲಸಗಳಿದ್ದವು. ಹಿಮಾಲಯದಲ್ಲಿ ಬಾಳುತ್ತಿದ್ದ ಮೀರಾ ಬೆನ್ ಗಾಂಧಿ ನಂತರದ ಭಾರತ ಅನುಸರಿಸಲು ಯತ್ನಿಸುತ್ತಿದ್ದ ಆರ್ಥಿಕ ಅಭಿವೃದ್ಧಿಯ ಹಾದಿಯ ಬಗ್ಗೆ ಮುನ್ನೆಚ್ಚರಿಕೆಯನ್ನು ನೀಡುವ ಜವಾಬ್ದಾರಿಯನ್ನು ಹೊತ್ತುಕೊಂಡಳು.

ಹಿಂದೆ ತನ್ನಂತೆಯೆ ಸ್ವಾತಂತ್ರ್ಯಹೋರಾಟಗಾರರಾಗಿ, ತನ್ನೊಂದಿಗೆ ಒಂದೇ ಸೆರೆಮನೆಯಲ್ಲಿದ್ದು, ಈಗ ಹೊಸ ಭಾರತದ ರಾಷ್ಟ್ರಪತಿ ಹಾಗೂ ಪ್ರಧಾನಮಂತ್ರಿ ಆಗಿದ್ದ ರಾಜೇಂದ್ರಪ್ರಸಾದ ಮತ್ತು ಜವಾಹರಲಾಲ್ ನೆಹರೂರವರಿಗೆ ಆಕೆ ತೀರಾ ಮುಜುಗರದ ಪ್ರಶ್ನೆಗಳನ್ನು ಕೇಳುವಂಥ ಹೇರಳ ಪತ್ರಗಳನ್ನು ಬರೆಯತೊಡಗಿದಳು: ಪುಟ್ಟಪುಟ್ಟ ಒಡ್ಡು-ಕೆರೆಗಳ ಮುಖಾಂತರವೆ ಹೆಚ್ಚು ದಕ್ಷ ಹಾಗೂ ಅಲ್ಪವೆಚ್ಚದ ನೀರಾವರಿ ಕೃಷಿ ಸಾಧ್ಯವಿರುವಾಗ ಸರ್ಕಾರ ಬೃಹತ್ ಅಣೆಕಟ್ಟುಗಳನ್ನೆ ಏಕೆ ಬೆಂಬಲಿಸುತ್ತಿರುವುದು? ಕೃಷಿಯಲ್ಲಿ ರಾಸಾಯನಿಕಗಳ ಬಳಕೆಯಿಂದ ಸಹಜ ಭೂಶಕ್ತಿಗೆ ಹೊಡೆತ ಬೀಳುವುದಿಲ್ಲವೆ?- ಆ ಮೂಲಕ ದೇಶದ ವಿದೇಶಿ ಸಾಲ ಇನ್ನೂ ಹೆಚ್ಚುವುದಿಲ್ಲವೆ? ಹೆಚ್ಚು

ಉಪಯುಕ್ತವೂ ಪರಿಸರದ ದೃಷ್ಟಿಯಿಂದ ಅಪೇಕ್ಷಣೀಯವೂ ಆದ 'ಬಾಂಜ್' ಓಕ್ ಮರವನ್ನು ಕಡೆಗಣಿಸಿ ಉತ್ತರ ಪ್ರದೇಶ ಅರಣ್ಯ ಇಲಾಖೆಯು ಅಲ್ಲಿ ನಿಷ್ಪ್ರಯೋಜಕವಾದ 'ಚಿಕ್' ಪೈನ್ ಮರವನ್ನು ಸಾರಾಸಗಟಾಗಿ ನೆಟ್ಟಿದ್ದೇಕೆ? ಇತ್ಯಾದಿ.

ಎಲ್ವಿನ್‌ನಲ್ಲೂ ಇಂಥದೆ ಕೆಲವು ಕಟು ಪ್ರಶ್ನೆಗಳಿದ್ದವು. ಅವುಗಳಿಗೆ ಉತ್ತರ ಪಡೆಯುವಲ್ಲಿ ಮಾತ್ರ ಆತ ಮೀರಾಳಿಗಿಂತ ಕೊಂಚ ಹೆಚ್ಚು ಅದೃಷ್ಟವಂತನಾಗಿದ್ದ. ಯಾಕೆಂದರೆ ಒಂದು ರೀತಿಯಲ್ಲಿ ಆದಿವಾಸಿಗಳ ಬಗ್ಗೆ ರಮ್ಯ ಪ್ರೀತಿಯನ್ನು ಹೊಂದಿದ್ದ ಪ್ರಧಾನಿ ನೆಹರೂ ಎಲ್ವಿನ್‌ನನ್ನು ಮಾಂಡ್ಲಾದಿಂದ ಕರೆಸಿಕೊಂಡು ಆತನನ್ನು ಈಶಾನ್ಯ ಗಡಿ ಪ್ರಾಂತ್ಯ ಸರ್ಕಾರಕ್ಕೆ ಸಲಹೆಗಾರನಾಗಿ ನೇಮಿಸಿದರು. ಆತನಿಗೂ ಇದೊಂದು ಸ್ವಾಗತಾರ್ಹ ಬದಲಾವಣೆಯಾಗಿತ್ತು. ಮಧ್ಯಪ್ರದೇಶ ಮತ್ತು ಒರಿಸ್ಸಾ ರಾಜ್ಯಗಳ ಆದಿವಾಸಿಗಳ ನಡುವೆ ನಡೆಸಿದ ಇಪ್ಪತ್ತು ವರ್ಷಗಳ ನಿರಂತರ ಸೇವಾಕಾರ್ಯದ ಕೊನೆಯಲ್ಲಿ ಆತನಿಗೆ ಅವರ ಭವಿಷ್ಯದ ಬಗ್ಗೆ ಹತಾಶೆ ಕಾಡತೊಡಗಿತ್ತು. ತುಂಬು ವಿಷಾದದಲ್ಲಿ ಆತ ಆ ಬಗ್ಗೆ ಬರೆದ: 'ಸೊಳ್ಳೆಯೊಂದೆ ಮಧ್ಯ ಭಾರತದ ಆದಿವಾಸಿಗಳ ನಿಜ ರಕ್ಷಕನಾಗಿತ್ತು; ಈಗ ಇಲ್ಲಿಹಾವಳಿಯುಂಟು ಮಾಡುತ್ತಿರುವ ಪ್ರತಿ ಸುಧಾಕರನಿಗೂ ಪ್ರತಿ ಪವಿತ್ರವಾದಿಗೂ ಆ ಸೊಳ್ಳೆ ಕಚ್ಚಿ ಅವರಿಗೆ ಮಿದುಳಿನ ಮಲೇರಿಯಾ ಬರುವಂತಾಗಲೆಂದೆ ನನ್ನ ಬಯಕೆ.' ಅಲ್ಲಿ ಆಧುನಿಕತೆಯ ವಿಕಟ ದಾಳಿ ಅಷ್ಟು ಕಂಗೆಡಿಸುವಂತಿತ್ತು. ಆದರೆ ಎಲ್ವಿನ್‌ಗೆ ಅನಿಸಿದಂತೆ, ಧರ್ಮಪ್ರಚಾರಕರೂ ಲೇವಾದೇವಿಗಾರರೂ ಇನ್ನೂ ಅಡಿಯಿಡದಿದ್ದ ದೂರದ ಈಶಾನ್ಯಗಡಿಯ ಏಕಾಂತದ ಆದಿವಾಸಿ ಪ್ರಾಂತ್ಯದಲ್ಲಿ ಆಸೆಯನ್ನೂ ಜೀವಂತವಾಗಿತ್ತು. ಅಲ್ಲಿ ಎಲ್ವಿನ್ ಹೊಸ ಹೊಸ ಆದಿವಾಸಿ ಸಂಕುಲಗಳ ಮಧ್ಯೆ ತಿರುಗಾಡುತ್ತಾ ಬಾಳುತ್ತಾ, ದೆಹಲಿಯ ಅನಭಿಷಿಕ್ತ ಸಾಮ್ರಾಟನ ಮುದ್ರೆಯನ್ನು ಕೈಯಲ್ಲಿ ಹಿಡಿದು, ಯುವ ಅಧಿಕಾರಿಗಳನ್ನು ತರಬೇತುಗೊಳಿಸಿದ. ಈಶಾನ್ಯ ಪ್ರಾಂತ್ಯದ ತತ್ವಜ್ಞನೆಂದೆ ಪ್ರಸಿದ್ಧಿಯನ್ನೂ-ಸ್ವಲ್ಪಮಟ್ಟಿಗೆ ಕುಪ್ರಸಿದ್ಧಿಯನ್ನೂ - ಪಡೆದ ಆತ ಆದಿವಾಸಿಗಳ ಅಭಿವೃದ್ಧಿಯ ಬಗ್ಗೆ ಯಾವತ್ತೂ ಹೇಳುತ್ತಿದ್ದ ಸೂತ್ರ 'ಅವಸರಿಸಿ-ಆದರೆ ನಿಧಾನವಾಗಿ' (make haste slowly) ಎಂದಾಗಿತ್ತು.

ಇದೇ ಅವಧಿಯಲ್ಲಿ ಸ್ಟ್ರಾಟ್ ಬೆಂಗಳೂರಿನಲ್ಲಿ ಅನಾಕರ್ಷಕ ಜೀವನವೊಂದರಲ್ಲಿ ತೊಡಗಿಕೊಂಡಿದ್ದ. ಓದುಗರೊಬ್ಬರಿಂದ 'ಬಲಪಂಥೀಯರ 'ಬ್ಲಿಟ್ಸ್', ಪತ್ರಿಕೆ, ಆದಕ್ಕಿಂತ ಹೆಚ್ಚು ಬುದ್ಧಿಮತ್ತೆಯ ಪತ್ರಿಕೆ' ಎಂದು ವರ್ಣಿತವಾಗಿದ್ದ 'ಮೈಸಿಂಡಿಯಾ'ದ ಸಂಪಾದನೆಯಲ್ಲಿ ಆತ ಸಹಾಯ ನೀಡುತ್ತಿದ್ದ, ಅದಕ್ಕೆಂದು ಲೇಖನಗಳನ್ನು ಬರೆಯುತ್ತಿದ್ದ. ಮಾರ್ಕ್ಸ್‌ವಾದವನ್ನು ತ್ಯಜಿಸಿ, ತನಗೆಂದು ಹಾಗೂ ತನ್ನ ಕೆಲವು ಆಯ್ದ ಅನುಯಾಯಿಗಳಿಗೆಂದು 'ರ್‍ಯಾಡಿಕಲ್ ಹ್ಯುಮನಿಸಮ್'ನ ಆಸರೆಯನ್ನು ಕಟ್ಟಿಕೊಂಡಿದ್ದ ಇನ್ನೋರ್ವ ಮಾಜಿ ಕಮ್ಯುನಿಸ್ಟ್ ಎಂ. ಎನ್. ರಾಯ್ ಅವರ ಪಾಳೆಯದಲ್ಲಿ ಕೊಂಚ ಕಾಲ ತಂಗಿಬಂದಿದ್ದ ಸ್ಟ್ರಾಟ್ ಈ ವೇಳೆಗಾಗಲೆ ಸಮಾಜವಾದದಿಂದ ಬಂಡವಾಳಶಾಹಿಯತ್ತ ಹೊರಳಿಯಾಗಿತ್ತು.

ಭಾರತೀಯ ಹೆಣ್ಣೊಬ್ಬಳೊಂದಿಗೆ ನಡೆಸಿದ ಸಂಸಾರ ಜೀವನವು ದೇಶಪ್ರೇಮ ಹಾಗೂ ಕಮ್ಯುನಿಸಮ್‌ಗಳ ನಡುವಿನ ಮೂಲಭೂತ ವೈರುಧ್ಯಗಳನ್ನು ಸ್ಟ್ರಾಟ್‌ನ ಅರಿವಿಗೆ ತಂದುಕೊಟ್ಟಿತು. 1952ರಲ್ಲಿ ಆತ ಬರೆದ: 'ಕಮ್ಯುನಿಸ್ಟನು ತನ್ನ ತಾಯ್ನಾಡನಲ್ಲ, ಬದಲಾಗಿ ರಷಿಯಾವನ್ನು ರಕ್ಷಿಸುತ್ತಿರುತ್ತಾನೆ. ಆತನ ಎಲ್ಲ ಪ್ರೇಮವೂ ರಷಿಯಾ ಹಾಗೂ ರಷಿಯಾದ ನಾಯಕರಲ್ಲಿ ನೆಟ್ಟಿರುತ್ತದೆ; ಆತನ ಎಲ್ಲ ದ್ವೇಷವೂ ಮೇಲ್ಕಂಡ ಇಬ್ಬರ ವೈರಿಗಳ ಮೇಲೆ, ವಿಶೇಷವಾಗಿ ಸ್ವಂತ

ದೇಶದ ನಾಯಕರ ಮೇಲೆ, ಕೇಂದ್ರೀಕೃತವಾಗಿರುತ್ತದೆ.' ಈಗ ಆತ ತನ್ನ ಮೊದಲ ಆದರ್ಶವಾದ ಕಮ್ಯುನಿಸಮನ್ನು 'ವ್ಯವಸ್ಥೀಕೃತ ರಾಜಕೀಯ ಅಪ್ರಾಮಾಣಿಕತೆ' ಎಂದು ಜರಿದು ತಿರಸ್ಕರಿಸಿದ.

'ಮೈಸಿಂಡಿಯಾ'ದ ಪ್ರತಿ ಸಂಚಿಕೆಯ ಸುಮಾರು ಅರ್ಧ ಭಾಗವನ್ನು ಸ್ಪ್ರಾಟ್‌ನೆ ರಚಿಸುತ್ತಿದ್ದನೆಂದು ತೋರುತ್ತದೆ. ಅದರಲ್ಲಿ ಆತ ಕೆಲವೊಮ್ಮೆ ಗಾಂಧಿಯನ್ನು ಹೊಗಳಿ, ನೆಹರೂವನ್ನು ಮಾತ್ರ ಯಾವತ್ತೂ ಟೀಕಿಸಿ ಬರೆಯುತ್ತಿದ್ದ. ಹಾಗೆಯೆ ಆತ 'ಇಂಡಿಯನ್ ಕಾಂಗ್ರೆಸ್ ಫಾರ್ ಕಲ್ಚರಲ್ ಫ್ರೀಡಮ್' ಮತ್ತು 'ದಿ ಫೋರಮ್ ಫಾರ್ ಫ್ರೀ ಎಂಟರ್‌ಪ್ರೈಸ್'ನಂತಹ ಸಂಘಟನೆಗಳಲ್ಲೂ ಸೇರಿಕೊಂಡಿದ್ದ. ಇವುಗಳಲ್ಲಿ 'ಇಂಡಿಯನ್ ಕಾಂಗ್ರೆಸ್ ಫಾರ್ ಕಲ್ಚರಲ್ ಫ್ರೀಡಮ್' ಸಂಘಟನೆಯು ಶೀತಯುದ್ಧದಲ್ಲಿ ಭಾರತವು ಅಮೆರಿಕಾದ ಪಕ್ಷವಹಿಸಬೇಕೆಂದು ವಾದಿಸುತ್ತಿತ್ತು; 'ಫೋರಮ್ ಫಾರ್ ಫ್ರೀ ಎಂಟರ್‌ಪ್ರೈಸ್' ಸಂಘಟನೆಯು, ಅಂತರ್‌ರಾಷ್ಟ್ರೀಯ ಹಣಕಾಸು ಸಂಸ್ಥೆ (ಐ.ಎಂ.ಎಫ್) ಹಾಗೆ ಹೇಳುವ ಬಹುಕಾಲ ಮೊದಲೆ, ಭಾರತದ ಆಂತರಿಕ ಮಾರುಕಟ್ಟೆಗೆ ಬಂಡವಾಳಶಾಹಿಗಳಿಗೆ ಮುಕ್ತಪ್ರವೇಶ ನೀಡಬೇಕೆಂದೂ, ಆ ಮೂಲಕ ಭಾರತದ ಜನವರ್ಗದ ಪ್ರಗತಿಗೆ ನಾಂದಿಯಾಗುವುದೆಂದೂ ವಾದಿಸುತ್ತಿತ್ತು.



ಸ್ಪ್ರಾಟ್‌ನನ್ನು ಕಾಡುತ್ತಿದ್ದ ಅನೇಕ ವಿಷಯದಲ್ಲಿ ಕಾಶ್ಮೀರ ಸಮಸ್ಯೆಯೂ ಒಂದಾಗಿತ್ತು. 'ಜಮ್ಮು ಮತ್ತು ಲಡಾಕ್ ಅನ್ನು ಉಳಿಸಿಕೊಳ್ಳಿ, ಕಣಿವೆಯನ್ನು ಬಿಟ್ಟುಕೊಟ್ಟುಬಿಡಿ' ಎಂದಾತ 1951ರ ಸಂಪಾದಕೀಯವೊಂದರಲ್ಲೂ, ನಂತರದ ವರ್ಷಗಳಲ್ಲಿ ಹೆಚ್ಚು ಹೆಚ್ಚು ಸವಾಲಿನ ಧ್ವನಿ ಪಡೆಯುತ್ತ ಹೋದ ಲೇಖನಗಳ ಸರಮಾಲೆಯಲ್ಲಿಯೂ ಒತ್ತಾಯಿಸಿದ. ಈ ರೀತಿ ಮಾಡದಿದ್ದಲ್ಲಿ ಭಾರತವು ಕಾಶ್ಮೀರದಲ್ಲಿ ಸದಾಕಾಲ ಸೈನ್ಯವನ್ನಿಟ್ಟಿರಬೇಕಾಗುವುದೆಂದೂ, ಅದು ನಿರಂತರವಾಗಿ ದೇಶದ ಹಣಕಾಸಿನ ವ್ಯವಸ್ಥೆಗೂ ಮನಃಸ್ಥಿತಿಗೂ ದೊಡ್ಡ ಹೊಡೆತ ನೀಡುತ್ತಿರುವುದೆಂದೂ ಆತ ತಿಳಿದಿದ್ದ.

ನೆಹರೂಗೆ ಆಗ ಸ್ಪ್ರಾಟ್‌ನ ಮಾತುಗಳನ್ನು ಕೇಳುವ ವ್ಯವಧಾನವಿತ್ತೆ? ಮರೆಯಬಾರದಿದ್ದ, ಆದರೆ ದುರಾದೃಷ್ಟವಶಾತ್ ಇಂದು ನಾವೆಲ್ಲ ಮರೆತುಬಿಟ್ಟಿರುವ ಆ ದಕ್ಷಿಣ ಭಾರತೀಯ ಪತ್ರಿಕೆಯ ಪುಟಗಳಿಂದ ಆಯ್ದು ತೆಗೆದು ಲೇಖನಗಳ ಸಂಕಲವೊಂದನ್ನು ತಯಾರಿಸುವಂತಹ ಹುಮ್ಮಸ್ಸನ್ನು ಇಂದು ಯಾರಾದರೂ ತೋರಿಯಾರೆ?

ಈ ನಮ್ಮ ಮೂವರು ಮಾದರಿ ವ್ಯಕ್ತಿಗಳ ಸಾಲಿಗೆ 1957ರಲ್ಲಿ ನಾಲ್ಕನೆಯ ವ್ಯಕ್ತಿಯೊಬ್ಬ ಸೇರ್ಪಡೆಯಾದ. ಆತ ಬ್ರಿಟಿಷ್ ಸಂಜಾತ ಭಾರತೀಯ ಜೆ.ಬಿ.ಎಸ್. ಹಾಲ್‌ಡೇನ್, 1892ರಲ್ಲಿ, ಆಕ್ಸ್‌ಬ್ರಿಜ್ (ಆಕ್ಸ್‌ಫರ್ಡ್-ಕೇಂಬ್ರಿಜ್)ನ ಮೇಧಾವಿಗಳ ಕುಲೀನ ವರ್ಗದಲ್ಲಿ ಜನಿಸಿದ ಹಾಲ್ಡೇನ್‌ನ ತಂದೆ ಶ್ರೇಷ್ಠ ಶರೀರ ವಿಜ್ಞಾನಿಯಾಗಿದ್ದ. ಮಗ ತಂದೆಯ ಸಾಹಸಮಯವೂ ಅಪಾಯಕಾರಿಯೂ ಆದ ಪ್ರಯೋಗಗಳಲ್ಲಿ - ಸರ್ವಪ್ರಥಮವಾಗಿ ತಮ್ಮ ದೇಹಗಳ ಮೇಲೆಯೆ

ನಡೆಸಿಕೊಳ್ಳುವಂತಹ ಪ್ರಯೋಗಗಳಲ್ಲಿ-ಭಾಗಿಯಾಗಿ ವಿಜ್ಞಾನದ ತನ್ನ ಮೊದಲ ಪಾಠಗಳನ್ನು ಪಡೆದುಕೊಂಡ.

ಆಕ್ಸ್‌ಫರ್ಡ್‌ನ ಸ್ನಾತಕ ಪದವಿ ಗಳಿಸಿದ ನಂತರ ಹಾಲ್‌ಡೇನ್ ಮೊದಲನೆಯ ಮಹಾಯುದ್ಧದಲ್ಲಿ ಸೈನ್ಯ ಸೇರಿ ಹೋರಾಡಿದ. ಇರಾಕ್‌ನಲ್ಲಿ ಕಾಳಗವೊಂದರಲ್ಲಿ ಗಾಯಗೊಂಡ ಆತನನ್ನು ಚೇತರಿಸಿಕೊಳ್ಳಲೆಂದು ಭಾರತಕ್ಕೆ ಕಳಿಸಲಾಯಿತು. ಇಲ್ಲಿಂದ ಹಿಂದಿರುಗುವಾಗ 'ಭಾರತೀಯರೊಡನೆ ಸಮಾನತೆಯ ಸ್ತರದಲ್ಲಿ ಬೆರೆಯಲು ಸಾಧ್ಯವಾದ ತಕ್ಷಣ ಇಲ್ಲಿಗೆ ಮರಳಿ ಬರುವೆ' ಎಂದು ಆತ ನಿಶ್ಚಯಿಸಿದ. ಆದರೆ ಅಂದು ಆ ದಿನ ತೀರಾ ದೂರ ಭವಿತವ್ಯದಾಗಿತ್ತು. ಹಾಗಾಗಿ ಹಾಲ್‌ಡೇನ್ ತನ್ನ ತಾಯ್ನಾಡಿನಲ್ಲೇ ಉಳಿದ, ಬ್ರಿಟಿಷ್ ವಿಜ್ಞಾನದ ಇತಿಹಾಸದಲ್ಲಿ ಅಸಾಮಾನ್ಯವಾದೊಂದು ವೃತ್ತಿಜೀವನವನ್ನು ಕಟ್ಟಿಕೊಳ್ಳತೊಡಗಿದ. ಇಂದು ಆತ ಈ ಶತಮಾನದ ಐದು ಅತಿಶ್ರೇಷ್ಠ ಜೀವವಿಜ್ಞಾನಿಗಳಲ್ಲಿ ಒಬ್ಬನೆಂದೂ, ಅವರಲ್ಲಿ ಮತ್ತೆ ಅತ್ಯಂತ ಸರ್ವಾಂಗೀಣ ಪ್ರತಿಭಾವಂತನೆಂದೂ ಸರ್ವತ್ರ ಮಾನ್ಯನಾಗಿದ್ದಾನೆ. ವಿಕಾಸವಾದ, ಜೀವ ರಸಾಯನಶಾಸ್ತ್ರ, ಹಾಗೂ ವಂಶಶಾಹಿ ಶಾಸ್ತ್ರಗಳಿಗೆ ಆತ ನೀಡಿದ ಕೊಡುಗೆಗಳು ಅತ್ಯಂತ ಮೂಲಭೂತ ಮಹತ್ತಿಕೆಯವು ಎಂದು ಪರಿಗಣಿತವಾಗಿವೆ.

ಬುದ್ಧ ಮಾರ್ಕ್ಸ್‌ವಾದಿಯೂ ಆಗಿದ್ದ ಹಾಲ್‌ಡೇನ್ 'ಡೇಲಿ ವರ್ಕರ್' ಪತ್ರಿಕೆಗೆ ವಾರದ ಅಂಕಣವೊಂದನ್ನು ಬರೆಯುತ್ತಿದ್ದ. ಜನಪ್ರಿಯ ವಿಜ್ಞಾನ ಚಳುವಳಿಯಲ್ಲಿ ಜೆ.ಡಿ. ಬರ್ನಾಲ್ ಮತ್ತು ಲಾನ್ಸ್‌ಲಾಟ್ ಹಾಗ್‌ಬೆನ್‌ರ ಜೊತೆಗೂಡಿ ಆತ ಅನೇಕ ಬಹುಪ್ರೇರಕ ಚಟುವಟಿಕೆಗಳನ್ನು ನಡೆಸಿದ. ಸಾಹಿತ್ಯದ ಗೀಳೂ ಇದ್ದ ಆತನ ಕವಿತೆಯೊಂದು ಒಮ್ಮೆ 'ಆಕ್ಸ್‌ಫರ್ಡ್ ಬುಕ್ ಆಫ್ ಟ್ವೆಂಟಿಯತ್ ಸೆಂಚುರಿ ವರ್ಸ್' ಸಂಕಲನದಲ್ಲಿ ಸೇರ್ಪಡೆಯಾಗಿತ್ತು. ಇಷ್ಟೆಲ್ಲ ಬಹುಮುಖಿ ಮೇಧಾಶಕ್ತಿಯ ಆತ ಒಮ್ಮೆ ತುಂಬ ವಿನೀತನಾಗಿ ಹೇಳಿಕೊಂಡ: 'ನನ್ನ ಜೀವನದ ಅತಿಶ್ರೇಷ್ಠವೂ ಅತಿಮುಖ್ಯವೂ ಆದ ಕೆಲಸವೆಂದರೆ,' ಹಿಟ್ಲರ್‌ನ ಯಮಪಾಶದಿಂದ ಪಾರಾಗಿ ಬರುತ್ತಿದ್ದ ಯಹೂದಿ ವಿಜ್ಞಾನಿಗಳಿಗೆ ಇಂಗ್ಲೆಂಡಿನಲ್ಲಿ ಸೂಕ್ತ ಉದ್ಯೋಗಗಳನ್ನು ಹುಡುಕಿ ಕೊಡುವುದಾಗಿತ್ತು.

ಇಂಥವೆಲ್ಲ ವಿವರಗಳನ್ನು ರೊನಾಲ್ಡ್ ಕ್ಲಾರ್ಕ್ ಬರೆದ ಹಾಲ್‌ಡೇನ್‌ನ ಜೀವನಚರಿತ್ರೆ 'ಜೆ.ಬಿ.ಎಸ್.'ನಲ್ಲಿ ಪಡೆಯಬಹುದು. ಆದರೆ, ಹಾಲ್‌ಡೇನ್ ಬ್ರಿಟಿಷ್ ಪೌರತ್ವವನ್ನು ತ್ಯಜಿಸಿ ಬಂದು ಭಾರತದಲ್ಲಿ ತನ್ನ ಕೊನೆಯ ಎಂಟು ವರ್ಷಗಳನ್ನು ಕಳೆದ ಅವಧಿಯ ಬಗ್ಗೆ ಮಾತ್ರ ಕ್ಲಾರ್ಕ್ ಪಾಪಪ್ರಜ್ಞೆಯಿಂದಲೋ ಎಂಬಂತೆ ಮೌನ ತಳೆಯುತ್ತಾನೆ. ಹಾಲ್ಡೇನ್ ಭಾರತಕ್ಕೆ ಬರುವಾಗ ಆತನಿಗೆ 65 ವರ್ಷ ವಯಸ್ಸಾಗಿತ್ತು. ನಾವು ಇಲ್ಲಿ ಚರ್ಚಿಸುತ್ತಿರುವ ಇನ್ನು ಮೂವರಿಗೆ ಹೋಲಿಸಿದರೆ ಆತ ಇಲ್ಲಿಗೆ ಬರುವಾಗಲೆ ಇಳಿವಯಸ್ಸಿನವನೂ ಮೇರುಖ್ಯಾತಿಯವನೂ ಆಗಿದ್ದ. ಸಾಂಪ್ರದಾಯಿಕ ವ್ಯಾಖ್ಯಾನ ಹೇಳುವುದು ಸೂಯೆಝ್ ಬಿಕ್ಕಟ್ಟಿನ ನಂತರ ತನ್ನ ತಾಯ್ನಾಡಿನ 'ಸಾಮ್ರಾಜ್ಯ ಶಾಹಿ' ಗುಣವನ್ನು ತಾಳಿಕೊಳ್ಳುವುದು ಅಸಾಧ್ಯವಾಗಿ ಆತ ಇಂಗ್ಲೆಂಡನ್ನು ತೊರೆದ ಎಂದು. ಇದಕ್ಕೆ ವ್ಯತಿರಿಕ್ತವಾಗಿ, ಫ್ರೆಂಚ್ ವಿಜ್ಞಾನ-ಇತಿಹಾಸಕಾರ ಫ್ರಾನ್ಸಿಸ್ ಝಿಮರ್ಮನ್ ವಾದಿಸುವುದು ಜೀವವಿಜ್ಞಾನವನ್ನು ಪ್ರಯೋಗಶಾಲೆಯ ಶೀತಲ ಸೆರೆಯಿಂದ ಬಿಡಿಸಿ ಉಷ್ಣವಲಯದ ನೆಲದಲ್ಲಿ ಅದನ್ನು ನೆಟ್ಟು ಬೆಳೆಸುವ ಉದ್ದೇಶವೆ ಆತನನ್ನು ಇಂಗ್ಲೆಂಡಿನಿಂದ ಹೊರತಂದಿತು ಎಂದು. ಹಾಲ್‌ಡೇನ್‌ನ ಸಹೋದರಿ, ಕಾದಂಬರಿ ಕಾರ್ತಿ ಹಾಗೂ ಪ್ರವಾಸ ಕಥನಗಾರ್ತಿ ನಾವೊಮಿ ಮಿಚಿಸನ್ ಪ್ರಕಾರ ಆತ ಆ ಕಾಲದ ಭಾರತೀಯ ನಾಯಕರ ಘನತೆ

ಹಾಗೂ ಸಾಮ್ರಾಜ್ಯವಾದಿ ಧೋರಣೆಗಳಿಂದ ಆಕರ್ಷಿತನಾಗಿದ್ದ; ಇಂಥವರನ್ನು ಸೆರೆಮನೆಗೆ ತಳ್ಳಿದ ಹಾಗೂ ಹಿಂಸಿಸಿದ ಪಶ್ಚಿಮದ ರಾಜಕಾರಣಿಗಳಾದರೂ ಸ್ವತಃ ಎರಡು ಘೋರ ಮಹಾಯುದ್ಧಗಳನ್ನೂ ಇನ್ನೂ ಅನೇಕ ಸಣ್ಣಪುಟ್ಟ ಯುದ್ಧಗಳನ್ನೂ ಹುಟ್ಟುಹಾಕಿದಂಥವರಾಗಿದ್ದರು. 'ಲೈಸೆಂಕೊ ಪ್ರಕರಣ'ದ ನಂತರ ಹಾಲ್ಡೇನ್‌ಗೆ ಇಂದಿನ ಸೋವಿಯತ್ ಒಕ್ಕೂಟದ ಬಗ್ಗೆಯೂ ಭ್ರಮನಿರಸನವಾಯಿತು. ಈ ಎಲ್ಲ ವಿದ್ಯಮಾನಗಳ ಹಿನ್ನೆಲೆಯಲ್ಲಿ ಆತನಿಗೆ ಸ್ಟಾಲಿನ್ ಹಾಗೂ ಚರ್ಚಿಲ್‌ನಂಥವರಿಗಿಂತ ನೆಹರೂರವರೆ ನಿಶ್ಚಿತವಾಗಿ ಹೆಚ್ಚು ಗೌರವಯೋಗ್ಯರಾಗಿ ಕಂಡುಬಂದರು.

ಈ ಹಿನ್ನೆಲೆ ಏನೇ ಇರಲಿ, ತನ್ನ ಜೀವಶಾಸ್ತ್ರಜ್ಞೆ ಪತ್ನಿಯೊಟ್ಟಿಗೆ ಹೊರಟುಬಂದು ಕಲಕತ್ತಾದಲ್ಲಿ ನೆಲೆಸಿದ ಮೇಲಂತೂ ಹಾಲ್‌ಡೇನ್ ಸಂಪೂರ್ಣ ಭಾರತೀಯನೆ ಆದ; ಸಸ್ಯಾಹಾರಿಯಾಗಿ ಪರಿವರ್ತನೆಗೊಂಡ, ತನ್ನ ಬ್ರಾಹ್ಮಣ ವಿದ್ಯಾರ್ಥಿಗಳಿಗೆಯೆ ನಾಚಿಕೆ ಹುಟ್ಟಿಸುವಷ್ಟು ಸಂಸ್ಕೃತ ಕಲಿತ, ಭಾರತೀಯ ಉಡುಪನ್ನು ಧರಿಸತೊಡಗಿದ. ಯೂರೋಪಿಗೆ ಭೇಟಿ ನೀಡುವಾಗಲೂ ಅದೇ ಉಡುಪಿನಲ್ಲಿ ಹೋಗಿಬಂದ. 1961ರಲ್ಲಿ ಲಂಡನ್‌ನಲ್ಲಿ ರಾಯಲ್ ಸೊಸೈಟಿಯ ಸಮಾರಂಭವೊಂದಕ್ಕೂ ಸಹ ಆತ ಕೇಸರಿ ಧೋತಿಯನ್ನು ಧರಿಸಿಕೊಂಡು ಹೋದ; ಆ ಉಡುಪು ಭದ್ರವಾಗಿರಲೆಂದು ಪಿನ್‌ಗಳನ್ನು ಹಾಕಬೇಕಾಗಿ ಬಂದಾಗ ಸಹೋದರಿ ನಾವೊಮಿ ಮಿಚಿಸನ್ ಸಹಾಯ ನೀಡಿದ್ದಳು. ಇಷ್ಟೆಲ್ಲ ರೀತಿಯಲ್ಲಿ ಭಾರತೀಯನಾಗಿ ಬದಲಾದ, ಭಾರತಕ್ಕೆ ಒಗ್ಗಿಕೊಂಡ ಹಾಲ್‌ಡೇನ್ ಒಂದು ವಿಷಯದ ಬಗ್ಗೆ ಮಾತ್ರ ತೀವ್ರ ಅತೃಪ್ತಿಯನ್ನು ವ್ಯಕ್ತಪಡಿಸಿದನೆಂದು ದಾಖಲೆಗಳು ಹೇಳುತ್ತವೆ. ಆತ ಆಗ ಕೆಲಸ ಮಾಡುತ್ತಿದ್ದ ಇಂಡಿಯನ್ ಸ್ಟಾಟಿಸ್ಟಿಕಲ್ ಇನ್‌ಸ್ಟಿಟ್ಯೂಟ್‌ನಲ್ಲಿ ಒಂದೂ ಫ್ರೆಂಚ್ ಭಾಷೆಯ ಟೈಪ್‌ರೈಟರ್ ಇಲ್ಲದಿದ್ದುದು ಆತನ ಅಸಮಾಧಾನದ ವಿಷಯವಾಗಿತ್ತಂತೆ. ಅದಿಲ್ಲದೆ ಖ್ಯಾತ ಫ್ರೆಂಚ್ ಬುದ್ಧಿಜೀವಿ ಜಾನ್ ಪಾಲ್ ಸಾರ್ತ್ರನೊಂದಿಗಿನ ತನ್ನ ದೀರ್ಘಕಾಲೀನ ವಾದ-ವಿವಾದವನ್ನು ಮುಂದುವರೆಸಿಕೊಂಡು ಹೋಗುವುದಾದರೂ ಹೇಗೆ?- ಎನ್ನುವುದೆ ಆತನ ದೊಡ್ಡ ಸಮಸ್ಯೆಯಾಗಿತ್ತು.

ಆತ ಶ್ರದ್ಧಾವಂತ ವಿದ್ಯಾರ್ಥಿಗಳ ತಂಡವೊಂದನ್ನು ಕಟ್ಟಿಬೆಳೆಸಿದ. ಅವರೆಲ್ಲರೂ ಆತನ ಬಗ್ಗೆ ಇಟ್ಟುಕೊಂಡಿದ್ದ ಪ್ರೀತಿ-ಗೌರವಗಳ ಕೆಲವು ದಾಖಲೆಗಳನ್ನು ಇಂಡಿಯನ್ ಸ್ಟಾಟಿಸ್ಟಿಕಲ್ ಇನ್‌ಸ್ಟಿಟ್ಯೂಟ್ ಆತನ ಶತಾಬ್ದಿಯ ಸಂದರ್ಭದಲ್ಲಿ ಹೊರತಂದ ಮಹತ್ತರ ಸಂಸ್ಮರಣಾ ಗ್ರಂಥದಲ್ಲಿ ಕಾಣಬಹುದು. ಈ ಪುಟ್ಟ ಲೇಖನದ ಕಿರು ಅವಕಾಶದಲ್ಲಿ ಪ್ರಖ್ಯಾತ ಹಾಲ್‌ಡೇನ್ ಪ್ರಸಂಗಗಳಲ್ಲಿ ಒಂದನ್ನು ಮಾತ್ರ ಉದ್ಧರಿಸಬಹುದು. ಸದಾ ಕಾಲ ಸ್ವಮಗ್ನನಾಗಿರುತ್ತಿದ್ದ ಸಹಾಯಕನೊಬ್ಬನನ್ನು ಆತ ಒಮ್ಮೆ ಹೀಗೆ ಛೇಡಿಸಿದ: 'ನೀನು ಯಾವತ್ತೂ ನಿನ್ನ ತಲೆಯೊಳಗೆ ಏನಾಗುತ್ತಿದೆ ಎನ್ನುವುದನ್ನೆ ನನಗೆ ಹೇಳುತ್ತಿರುತ್ತೀಯ; ಆದರೆ, ನೆನಪಿಟ್ಟುಕೊ, ವಿಜ್ಞಾನ ಪ್ರಾರಂಭವಾಗುವುದೆ ನಮ್ಮ ಹೊರಗಿನ ವಸ್ತು ವಿದ್ಯಮಾನಗಳ ಬಗ್ಗೆ ಕುತೂಹಲ ಬೆಳೆಸಿಕೊಳ್ಳುವ ಕ್ಷಣದಿಂದ.'

ಆತ ಕಲಕತ್ತೆಗೆ ಬಂದ ಕೆಲವೆ ವರ್ಷಗಳಲ್ಲಿ ಆತನಿಗೂ ಆತನ ಕ್ರಿಯಾಕೇಂದ್ರವಾದ ಇಂಡಿಯನ್ ಸ್ಟಾಟಿಸ್ಟಿಕಲ್ ಇನ್‌ಸ್ಟಿಟ್ಯೂಟ್‌ನ ಮುಖ್ಯಸ್ಥ ಪ್ರಶಾಂತ ಚಂದ್ರ ಮಹಾಲನೊಬಿಸ್‌ನಿಗೂ ಗಂಭೀರವಾದ ಭಿನ್ನಾಭಿಪ್ರಾಯಗಳು ಮೂಡಿದವು. ಆತ ತನ್ನ ಪತ್ನಿ, ಪ್ರಯೋಗಶಾಲೆ, ಸಹಾಯಕವರ್ಗ ಎಲ್ಲರನ್ನೂ ಭುವನೇಶ್ವರಕ್ಕೆ ಸಾಗಿಸಿದ. ಅಲ್ಲಿ ಆಗಿನ ಮುಖ್ಯಮಂತ್ರಿ ಬಿಜು ಪಾಟ್ನಾಯಕ್ ಆತನಿಗೆ ನೆಲೆಯೊಂದನ್ನು ಒದಗಿಸಿಕೊಟ್ಟರು. ಸರ್ಕಾರ ಆತನಿಗೆ ನೀಡಿದ

ಕಾಲಾವಧಿಯಲ್ಲಿ, ಗುರಿಯಿಟ್ಟುಕೊಂಡಿದ್ದಂತೆ ಭಾರತೀಯ ಜೀವವಿಜ್ಞಾನದ ಮಾರ್ಗ-ಪ್ರಸ್ಥಾನವೊಂದನ್ನು ಕಟ್ಟಲೇನೂ ಆತನಿಗೆ ಸಾಧ್ಯವಾಗಲಿಲ್ಲ ನಿಜ. ಆದರೆ ಕೊನೆಯ ಪಕ್ಷ ಆತ ಅಂಥದೊಂದು ಮಾರ್ಗ-ಪ್ರಸ್ಥಾನದ ಅನನ್ಯತೆಯ ಲಕ್ಷಣಗಳನ್ನು ಕಂಡು ಕಾಣಿಸಿದ.

ಈ ವೇಳೆಗಾಗಲೇ ಆತ ಪಕ್ಷಿವಿಜ್ಞಾನಿ ಸಲೀಮ್ ಆಲಿಯ ಸ್ನೇಹಗಳಿಸಿಕೊಂಡಿದ್ದ. ಸಲೀಮ್ ಆಲಿ ಪಕ್ಷಿಗಳನ್ನು ಕೊಂದು ಬೊಂತೆ ಮಾಡುವ ಸಾಂಪ್ರದಾಯಿಕ ವಿಧಾನವನ್ನು ತಿರಸ್ಕರಿಸಿ, ಪಕ್ಷಿಗಳನ್ನು ಅವುಗಳ ನೈಸರ್ಗಿಕ ಜೀವನ-ಪರಿಸರಗಳಲ್ಲಿಯೆ ಅಧ್ಯಯನ ಮಾಡುವ ಕ್ರಮವೊಂದನ್ನು ಬೆಳೆಸಿಕೊಂಡಿದ್ದರು. ಈ ಮುಸ್ಲಿಮ್ ಸಲೀಮ್ ಆಲಿ ಕ್ರೈಸ್ತ ಹಾಲ್‌ಡೇನ್‌ನಿಗೆ ಹಿಂದೂ ಧರ್ಮ ವಿಶಿಷ್ಟ ಜೀವವಿಜ್ಞಾನವೊಂದರ ಸಾಧ್ಯತೆಗಳನ್ನು ತೋರಿ, ಅದರ ಬಗ್ಗೆ ಲೇಖನಗಳ ಸರಣಿಯೊಂದನ್ನು ಬರೆಯಲು ಪ್ರೇರೇಪಿಸಿದರು.

ಅಂತೆಯೆ ಆತ ಬರೆದ: 'ಪ್ರಾಣಿಗಳನ್ನು ಅಹಿಂಸೆಯಿಂದ ನಡೆಸಿಕೊಳ್ಳುವುದು ಮಾನವನ ಅತಿ ಮುಖ್ಯ ಕರ್ತವ್ಯಗಳಲ್ಲೊಂದು ಎಂಬುದು ಆಧುನಿಕ ಹಿಂದೂಗಳಲ್ಲೆಲ್ಲ ಅತಿಶ್ರೇಷ್ಠ ಹಿಂದೂ ವ್ಯಕ್ತಿಯಾದವನ ನಿಶ್ಚಿತ ಅಭಿಪ್ರಾಯವಾಗಿತ್ತು, ಹಾಗಾಗಿ ಭಾರತದಲ್ಲಿಯ ಜೀವವೈಜ್ಞಾನಿಕ ಸಂಶೋಧನೆಗಳನ್ನೆಲ್ಲ ಗಾಂಧಿ ತತ್ವಗಳನ್ನು ಆಧರಿಸಿಯೆ ನಡೆಸುವುದು ಅತ್ಯಂತ ವಿಹಿತ.' ಇಂಥದೊಂದು ಅಹಿಂಸಾವಾದಿ ಜೀವವಿಜ್ಞಾನ ಅಥವಾ ವಂಶವಾಹಿವಿಜ್ಞಾನವು ನೀರ ಕೊಳಗಳಲ್ಲಿ ಬಾತುಕೋಳಿಗಳನ್ನು ನಿಸರ್ಗ ಸಹಜವಾಗಿಯೆ ಬೆಳೆಸಿ, ತಕ್ಕಡಿ, ಅಳತೆಪಟ್ಟಿ ಹಾಗೂ ವರ್ಣಪಟದಂತಹ ಸರಳ ಉಪಕರಣಗಳ ಮುಖಾಂತರವೆ ತಾನು ತನ್ನ ಅಧ್ಯಯನವನ್ನು ನಡೆಸಬಹುದೆಂಬುದು ಆತನ ಅಭಿಪ್ರಾಯವಾಗಿತ್ತು.

ಇಂಥ ಅಹಿಂಸಾವಾದಿ ವಿಜ್ಞಾನಿಗಳಲ್ಲಿ ಹೆಚ್ಚು ಧೀರರಾದದಂಥವರು ಹಾವಿನ ವಿಷಕದಿತಕ್ಕೆಂದು ನೀಡುವಂತಹ ಔಷಧಿಗಳನ್ನು ಹಳ್ಳಿಗರಿಗೆ ಕೊಡುವ ಮೊದಲು ಅವುಗಳನ್ನು ತಮ್ಮ ಮೇಲೆಯೆ ಪ್ರಯೋಗಿಸಿಕೊಳ್ಳಲು ಮುಂದಾಗಬೇಕೆಂದು ಆತ ಹೇಳುತ್ತಿದ್ದ. 'ಈ ಸಂಶೋಧನಾ ಪ್ರಕ್ರಿಯೆ ಪೂರ್ಣ ಯಶಸ್ವಿಯಾಗುವ ಮೊದಲು ಇಬ್ಬರೊ ಮೂವರೊ ವಿಜ್ಞಾನಿಗಳು ತಮ್ಮ ಪ್ರಾಣ ಕಳೆದುಕೊಳ್ಳಬೇಕಾಗಬಹುದು. ಹೌದು, ಆದರೆ ಆ ಮೂಲಕ ಅವರ ಪ್ರಾಣತ್ಯಾಗಕ್ಕೊಂದು ಉಪಯುಕ್ತತೆಯೂ ಮಹತ್ತಿಕೆಯೂ ಪ್ರಾಪ್ತವಾಗುವುದು.' ಈ ರೀತಿಯಲ್ಲಿ ವಿಶ್ವ ನಾಗರಿಕತೆಗೆ ಭಾರತ ನೀಡಿದ ಅತ್ಯಂತ ದೊಡ್ಡ ಕಾಣಿಕೆಯಾದ ಅಹಿಂಸಾವಾದವೂ, ಯುರೋಪಿನ ಅತಿದೊಡ್ಡ ಕಾಣಿಕೆಯಾದ ವೈಜ್ಞಾನಿಕ ವಿಧಾನವೂ ಪರಸ್ಪರ ಸಂಲಗ್ನಗೊಳ್ಳುವವು; ಇಂಥ ದಿವ್ಯ ಸಂಯೋಗದಿಂದ ಸೃಷ್ಟಿಯಾಗುವ ಜೀವಿಗಳು ಮಾನವಕುಲವನ್ನು ಹೊಸ ಎತ್ತರವೊಂದಕ್ಕೆ ಒಯ್ಯಬಲ್ಲದು ಎಂದಾತ ಭರವಸೆಯಿಟ್ಟುಕೊಂಡಿದ್ದ.

ಕ್ಯಾನ್ಸರ್‌ಗೆ ಬಲಿಯಾಗಿ, 1964ರ ಡಿಸೆಂಬರ್‌ನಲ್ಲಿ ಭುವನೇಶ್ವರದಲ್ಲಿ ತೀರಿಕೊಳ್ಳುವಾಗ ಹಾಲ್‌ಡೇನ್ ಭಗವದ್ಗೀತೆಯ ಶ್ಲೋಕವೊಂದನ್ನು ಉಚ್ಚರಿಸುತ್ತ ಕೊನೆಯುಸಿರೆಳೆದ. ವೆರಿಯರ್ ಎಲ್ವಿನ್ ಕೂಡಾ ಅದೇ ವರ್ಷ, ಕೊಂಚ ಮೊದಲು, ಅಸು ನೀಗಿದ್ದ. ಸಾಯುವ ಮುನ್ನವಷ್ಟೆ ಆತ ಪೂರ್ಣಗೊಳಿಸಿದ ನೆನಪುಗಳ ದಾಖಲೆ 'ದಿ ಟ್ರೈಬಲ್ ವರ್ಲ್ಡ್ ಆಫ್ ವೆರಿಯರ್ ಎಲ್ವಿನ್' ಆತ ಇಡಿ ಜೀವನ-ಸಾಧನೆಗಳ ಸಾರಸಂಗ್ರಹವಾಗಿದೆ; ಗಾಂಧಿ, ನೆಹರೂ, ನೀರದ ಚೌಧುರಿ, ಸಲೀಮ್ ಆಲಿಯವರ ಕೃತಿಗಳ ಸಾಲಿನಲ್ಲಿ ನಿಲ್ಲಬಲ್ಲಂತಹ ಶ್ರೇಷ್ಠ ಭಾರತೀಯ ಆತ್ಮವೃತ್ತಾಂತಗಳಲ್ಲೊಂದಾಗಿದೆ.

ಸ್ಪ್ರಾಟ್ ಇನ್ನೂ ಒಂದು ದಶಕ ಹೆಚ್ಚು ಬಾಳುವವನಿದ್ದ. ಇದರಲ್ಲಿ ಬಹುಭಾಗವನ್ನು ಆತ ಮದ್ರಾಸ್‌ನಿಂದ ಪ್ರಕಟವಾಗುತ್ತಿದ್ದ ಸಿ. ರಾಜಗೋಪಾಲಾಚಾರಿಯವರ 'ಸ್ವರಾಜ್ಯ' ಪತ್ರಿಕೆಯ ಸೇವೆಯಲ್ಲಿ ಕಳೆದ. 1966ರಲ್ಲಿ ಆತ ಪ್ರಕಟಿಸಿದ 'ಹಿಂದೂ ಕಲ್ಚರ್ ಆ್ಯಂಡ್ ಪರ್ಸನಾಲಿಟಿ' ಘನಸಾಂದ್ರ ಗುಣವುಳ್ಳದ್ದೇನೊ ಹೌದು, ಶಕ್ತಿಯುತವೂ ಆದದ್ದಲ್ಲ. ಆದರೆ ಸ್ವತಃ ಸ್ಪ್ರಾಟ್ ಅದು ತನ್ನ ಮೇರುಕೃತಿಯೆಂದು ತಿಳಿದಿದ್ದ. ಹಾಗೆಯೆ, ನಾನು ಕೇಳಿ ತಿಳಿದಿರುವಂತೆ, ಅದು ನಂತರ ಬಂದ ಮನೋವಿಶ್ಲೇಷಕರು ಇಂದಿಗೂ ಮತ್ತೆ ಮತ್ತೆ ಅಗೆದು ಬಗೆಯುತ್ತಿರುವ ಕೃತಿಯಾಗಿ ಉಳಿದಿದೆ.

ಮೀರಾ ಬೆನ್ 1960ರಲ್ಲಿ ಭಾರತವನ್ನು ಬಿಟ್ಟು ಆಸ್ಟ್ರಿಯಾದಲ್ಲಿ ನೆಲೆಸಿದಳು, ಅಲ್ಲಿಯೆ 1982ರಲ್ಲಿ ನಿಧನಳಾದಳು. ಆಕೆ ಅಲ್ಲಿದ್ದಾಗ ವಿನೋದ್ ಮೆಹತಾ ಮತ್ತು ಸುಧೀರ್ ಕಾಕರ್ ಆಕೆಯನ್ನು (ಬೇರೆಬೇರೆಯಾಗಿ) ಭೇಟಿಯಾಗಿದ್ದರು. ಅವರಿಬ್ಬರೂ ಆ ನಂತರ ಬರೆದಂತೆ ಆ ವೇಳೆಗೆ ಮೀರಾ ಬೆನ್ ಗಾಂಧೀಜಿಯ ಬಗ್ಗೆ ಹಾಗೂ ಭಾರತದ ಬಗ್ಗೆ ಆಸಕ್ತಿ ಕಳೆದುಕೊಂಡಿದ್ದಳು. ಆದರೆ ಸತ್ಯ ಮತ್ತೊಂದೆ ಇದೆ. ಮೀರಾಳ ಪತ್ರವ್ಯವಹಾರ ಸ್ಪಷ್ಟವಾಗಿ ತೋರುವಂತೆ ಆಕೆ ತನ್ನ ಒಡೆಯನನ್ನಾಗಲಿ, ತನ್ನದೆಂದು ಸ್ವೀಕರಿಸಿದ ನಾಡನ್ನಾಗಲಿ ಎಂದೂ ಮರೆಯಲಿಲ್ಲ.

ಅರವತ್ತರ ದಶಕದ ಕೊನೆಯ ವರ್ಷಗಳಲ್ಲಿ, ಭಾಕ್ರಾ-ನಾಂಗಲ್ ಬೃಹತ್ ಅಣೆಕಟ್ಟು ಯೋಜನೆಯಿಂದಾಗಿ ನಿರ್ವಸಿತರಾಗಿ, ಇನ್ನೂ ಯಾವುದೆ ಪರಿಹಾರವನ್ನು ಪಡೆಯದಿದ್ದ ನಿಸ್ಸಹಾಯಕ ಜನಗಳ ಬಗ್ಗೆ 'ಹಿಂದೂಸ್ತಾನ್ ಟೈಮ್ಸ್' ಪತ್ರಿಕೆ ಪ್ರಕಟಿಸಿದ್ದ ವರದಿಯೊಂದು ಆಕೆಯ ಗಮನಕ್ಕೆ ಬಂದಿತು. ಆಕೆ ತಕ್ಷಣ ಭಾರತದಲ್ಲಿದ್ದ ಸರ್ವೋದಯ ಚಳುವಳಿಯ ಕಾರ್ಯಕರ್ತರಿಗೆ ಬರೆದಳು; ಸತ್ಯಾಗ್ರಹವನ್ನು ಕೂಗಿ ಕರೆಯುತ್ತಿರುವಂತಹ ನ್ಯಾಯ-ಅನ್ಯಾಯಗಳ ಸಮಸ್ಯೆಯಿದು. ಆಕೆ ಹೀಗೆ ಹೇಳಿದುದು ಅರವತ್ತರ ದಶಕದಲ್ಲಿ, ಅಂದರೆ ಮತ್ತೊಂದು ಅಣೆಕಟ್ಟು ಯೋಜನೆಯಿಂದ ಬಾಧಿತರಾದ ಬಲಿಪಶುಗಳ ಪರವಾಗಿ ಮೇಧಾ ಪಾಟ್ಕರ್ ಅಹಿಂಸಾತ್ಮಕ ಆಂದೋಳನವನ್ನು ಪ್ರಾರಂಭಿಸುವ ಇಪ್ಪತ್ತು ವರ್ಷಗಳ ಪೂರ್ವದಲ್ಲಿ.

ಇನ್ನೊಂದು ಪ್ರಸಂಗದಲ್ಲಿ, ಜಗತ್‌ಪ್ರಸಿದ್ಧ ಪತ್ರಿಕೆ 'ಇಂಟರ್‌ನ್ಯಾಷನಲ್ ಹೆರಾಲ್ಡ್ ಟ್ರಿಬ್ಯೂನ್' ಖ್ಯಾತ ಚಿಂತಕ ಲೂಯಿಸ್ ಮಮ್‌ಫರ್ಡ್‌ನ ಪರಿಸರವಾದಿ ಬರವಣಿಗೆಗಳನ್ನು ಬಹುಮೆಚ್ಚಿ ಲೇಖನವೊಂದನ್ನು ಪ್ರಕಟಿಸಿದಾಗ ಮೀರಾ ಬೆನ್ ಆಸ್ಟ್ರಿಯಾದಿಂದ ಆ ಪತ್ರಿಕೆಗೆ 'ಒಣ' ಧಾಟಿಯ ಪತ್ರವೊಂದನ್ನು ಬರೆದಳು: 'ಈ ಎಲ್ಲ ವಿಷಯಗಳನ್ನೂ ಗಾಂಧೀಜಿ ಅರ್ಧ ಶತಮಾನದ ಹಿಂದೆಯೆ ಹೇಳಿಯಾಗಿದೆ.' ಹಾಗೆಯೆ, ಸರ್ ರಿಚರ್ಡ್ ಅಟೆನ್‌ಬರೊ ಬರೆದಿರುವಂತೆ, ಆತ 'ಗಾಂಧಿ' ಚಿತ್ರವನ್ನು ತಯಾರಿಸುವಾಗ ಮೀರಾ ಬೆನ್ ಆತನಿಗೆ 'ನಿರಂತರ ಪ್ರೋತ್ಸಾಹ'ವನ್ನು

ನೀಡಿದಳು; 'ಒಂದಾದ ಮೇಲೊಂದು ಪ್ರಸಂಗ'ವನ್ನು ಹೇಳಿದಳು ಹಾಗೂ ಗಾಂಧೀಜಿಯವರ ಎಷ್ಟೋ ಪತ್ರಗಳನ್ನು ಆತನ ಅಧ್ಯಯನಕ್ಕೆಂದು ನೀಡಿದಳು. ಜೊತೆಗೆ, ಆ ಚಿತ್ರಕ್ಕೆ ಧನಸಹಾಯ ನೀಡುವುದಾಗಿ ನೆಹರೂ ಮೊದಲೆ ಮಾತು ಕೊಟ್ಟಿದ್ದರಿಂದ ಭಾರತ ಸರ್ಕಾರ ಆ ಮಾತನ್ನು ನಡೆಸಿಕೊಡಬೇಕೆಂದು ಒತ್ತಾಯಿಸಿ ಆಗಿನ ಪ್ರಧಾನಿ ಮೊರಾರ್ಜಿ ದೇಸಾಯಿಯವರಿಗೆ ಪತ್ರ ಬರೆದಳು. ಹಾಗೆಯೆ, ಅಟೆನ್‌ಬರೊ ಆಕೆಗಾಗಿ ಕಳಿಸಿದ ಚಿತ್ರದ ಕೆಲವು ದೃಶ್ಯಗಳ ಪ್ರಾಥಮಿಕ ತುಣುಕುಗಳನ್ನು ನೋಡಿ ಚಿತ್ರದಲ್ಲಿ ತನ್ನ ಪಾತ್ರಕ್ಕೆಂದು ತನಗಿಂತ ಚೆಂದದ ನಟಿಯೊಬ್ಬಳನ್ನು ಬಳಸಿದ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದಳು.

ತಮ್ಮ ಹೊರದೇಹದ ಬಿಳಿ ಬಣ್ಣವನ್ನು ಕಡೆಗಣಿಸಿ, ತಮ್ಮ ದೇಶದ ವಸಾಹತುಶಾಹಿ ವ್ಯವಸ್ಥೆಯನ್ನು ಧಿಕ್ಕರಿಸಿ, ಭಾರತವನ್ನೆ ತಮ್ಮ ನೆಲೆಯಾಗಿ ಸ್ವೀಕರಿಸಿ, ಭಾರತದ ಪರವಾಗಿ ದನಿಯೆತ್ತಿದ ಇಂಥ ಧೀಮಂತ ಮಹನೀಯರು ಹಾಗೂ ಮಹಿಳೆಯರ ಬಗ್ಗೆ ಭಾರತೀಯ ಮಾನವಶಾಸ್ತ್ರಜ್ಞ ಶಿವ ವಿಶ್ವನಾಥನ್ ತಮ್ಮ 'ದಿ ಅದರ್ ಸೈಡ್ ಆಫ್ ದಿ ರಾಜ್' (ಬ್ರಿಟಿಷ್ ಸಾಮ್ರಾಜ್ಯದ ಮತ್ತೊಂದು ಮುಖ) ಲೇಖನದಲ್ಲಿ ವಿವರವಾಗಿ ಚರ್ಚಿಸಿದ್ದಾರೆ. ಅಲ್ಲಿ ಅವನ ಲಕ್ಷ್ಯದಲ್ಲಿರುವ ವ್ಯಕ್ತಿಗಳು ಮುಖ್ಯವಾಗಿ, ಹಿಂದೂಗಳನ್ನೂ ಹಿಂದೂ ಧರ್ಮವನ್ನೂ ಅಪಾರವಾಗಿ ಪ್ರೀತಿಸುತ್ತಿದ್ದ ಸೋದರಿ ನಿವೇದಿತಾ ಮತ್ತು ಆ್ಯನಿಬೆಸೆಂಟ್ ಅಂಥವರು, ಶ್ರೇಷ್ಠ ಉದಾರವಾದಿ ಪತ್ರಕರ್ತನಾಗಿದ್ದ ಬಿ. ಜಿ. ಹಾರ್ನಿಮನ್‌ರಂಥವರು - ಹಾರ್ನಿಮನ್‌ನ ಹೆಸರು ಇಂದಿಗೂ, ಶಿವಸೇನೆಯ ಅನೇಕ ವರ್ಷಗಳ ಆಳ್ವಿಕೆಯ ನಂತರವೂ, ಮುಂಬಯಿಯ ಮುಖ್ಯರಸ್ತೆ ಕೊಡುವ ಭಾಗವೊಂದರ ಫಲಕನಾಮವಾಗಿ, ಚಿರಸ್ಥಾಯಿಯಾಗಿ ಉಳಿದುಕೊಂಡಿದೆ. ಇವರ ಜೊತೆಯಲ್ಲಿಯೆ ಇನ್ನೂ ಅಂಥ ಅನೇಕ ವ್ಯಕ್ತಿಗಳಿದ್ದಾರೆ, ಅವರಲ್ಲಿ ಕೆಲವರು ಉಳಿದವರಷ್ಟು ಇಂದೂ ಪ್ರಸಿದ್ಧವಾಗಿ ಉಳಿದಿಲ್ಲ ಅಷ್ಟೆ. ಇನ್ನೊಬ್ಬ ಮಹನೀಯ, ಆತನ ಸ್ವಂತ ವ್ಯಕ್ತಿತ್ವದ ಕಾರಣಕ್ಕಾಗಿಯೂ ಉಳಿದೆಲ್ಲರನ್ನೂ ಮೀರಿಸುವಂಥ ಎತ್ತರದಲ್ಲಿ ನಿಲ್ಲುತ್ತಾನೆ. ಆತ ಚಾರ್ಲ್ಸ್ ಫ್ರೀರ್ ಆ್ಯಂಡ್ರೂಸ್.

ಭಾರತೀಯ ರಾಷ್ಟ್ರೀಯ ಹೋರಾಟದ ಬಗೆಗಿರುವ ಈ ಮುಂಚಿನ ಐತಿಹಾಸಿಕ ಅಧ್ಯಯನಗಳಲ್ಲಿ ಸಾಮಾನ್ಯವಾಗಿ ಇಂಥ 'ನಮ್ಮ ದೇಶದ ವಿದೇಶಿ ಸ್ನೇಹಿತರು'ಗಳ ಬಗ್ಗೆ ಅಲ್ಪವಾದರೂ ಪ್ರಸ್ತಾಪವಿರುತ್ತಿತ್ತು. ಆದರೆ 1997ರ ಆಗಸ್ಟ್ 15ರಂದು ಹಾಗೂ ಅದರ ಸ್ವಲ್ಪ ಮೊದಲು ಪ್ರಕಟವಾದಂತಹ ನಮ್ಮ ದೇಶದ ಇತ್ತೀಚಿನ ಇತಿಹಾಸದ ಯಾವುದೇ ಪುಸ್ತಕವೂ ಕೂಡಾ 1947ರ ನಂತರವೂ ಇಲ್ಲಿಯೆ ಉಳಿದ ಆಂಗ್ಲರನ್ನು, ಹಾಗೂ ಹಾಲ್‌ಡೇನ್‌ನಂತೆ ಆ ನಂತರ ಇಲ್ಲಿ ಬಂದು ನೆಲೆಸಿದ ಆಂಗ್ಲರನ್ನು ಸ್ಮರಿಸಿಕೊಳ್ಳುತ್ತಿಲ್ಲ; ಮತ್ತೆ, ಇವರೆಲ್ಲರೂ ಇಲ್ಲಿಗೆ ಬಂದದ್ದು 'ಬಾಕ್ಸ್‌ವಾಲಾಗಳು ಹಾಗೂ ಬ್ರೌನ್ ಸಾಹೇಬರು'ಗಳಾಗಿ ಅಲ್ಲ, ಬದಲಾಗಿ ದೇಶಪ್ರೇಮಿ, ಸಮಾಜಸೇವಾಸಕ್ತ ಭಾರತೀಯರಾಗಿ.

ಮೇಲೆ ಪ್ರಸ್ತಾಪಿಸಿದ ನಾಲ್ಕೂ ಜನರೂ ಒಂದು ರೀತಿಯಲ್ಲಿ ಗಾಢ ನೆಹರೂವಾದಿಗಳಾಗಿದ್ದರು. ಮುಂದೆ ಮಾತ್ರ ಅವರಲ್ಲಿ ಇಬ್ಬರು ನೆಹರೂ ನೀತಿಯನ್ನು ಪ್ರಬಲವಾಗಿ ವಿರೋಧಿಸುವ ಸಾಧ್ಯತೆಗಳಿದ್ದವು. ಇನ್ನಿಬ್ಬರು ಮಾತ್ರ ನೆಹರೂ ಯೋಜನೆಗಳನ್ನು ಬೆಂಬಲಿಸಿದ್ದಷ್ಟೆ ಅಲ್ಲದೆ ನೆಹರೂ ಜೊತೆಗೆ ಆಪ್ತತೆಯನ್ನೂ ಗಳಿಸಿಕೊಂಡರು (ಒಂದು ರೀತಿಯಲ್ಲಿ, ಇದಕ್ಕೆ ತಕ್ಕಂತೆ, ಹಾಲ್‌ಡೇನ್ ಮತ್ತು ಎಲ್ವಿನ್ ಇಬ್ಬರೂ ಕೂಡ ನೆಹರೂ ತೀರಿಕೊಂಡ ವರ್ಷದಲ್ಲಿಯೆ ತೀರಿಕೊಂಡರು).

ಈ ಎಲ್ಲ ನಾಲ್ವರೂ ಗಾಂಧೀಜಿಯ ಬಗ್ಗೆ ನಮ್ಮ ಅರಿವನ್ನು ಹಿಗ್ಗಿಸಿದರು; ಮಹಾತ್ಮನ ಚಿಂತನೆಗಳನ್ನು ಆತನೇ ಊಹಿಸಿಕೊಳ್ಳದಿದ್ದಂಥ ದಿಕ್ಕುಗಳಿಗೆ ಹೊತ್ತೊಯ್ದರು. ತಮ್ಮ ಬಹುವಿಸ್ತಾರ-ವೈವಿಧ್ಯಗಳ ವೃತ್ತಿಜೀವನಗಳಲ್ಲಿ ಅವರು ಭಾರತದ ಬಹಳಷ್ಟು ಭಾಗಗಳಲ್ಲಿ ಸಂಚರಿಸಿದರು, ಇಲ್ಲ ಅವುಗಳನ್ನು ಸ್ಪರ್ಶಿಸಿದರು: ಮೀರಾ ಬೆನ್ ಪಶ್ಚಿಮ ಹಾಗೂ ದೂರ ಉತ್ತರದ ಭಾಗಗಳಲ್ಲಿ, ಎಲ್ವಿನ್ ಪಶ್ಚಿಮ, ಮಧ್ಯ ಹಾಗೂ ಈಶಾನ್ಯ ಪ್ರಾಂತ್ಯಗಳಲ್ಲಿ, ಹಾಲ್‌ಡೇನ್ ಪೂರ್ವದಲ್ಲಿ, ಮತ್ತು ಸ್ಪ್ರಾಟ್ ಏಕಾಂಗವೀರನಾಗಿ ದಕ್ಷಿಣದಲ್ಲಿ ಕಾರ್ಯನಿರತರಾಗಿದ್ದರು.

ಸ್ಪ್ರಾಟ್ ಮತ್ತು ಮೀರಾ ಕೊನೆಯವರೆಗೂ ಅಚಲ ನಿಷ್ಠೆಯುಳ್ಳವರಾಗಿ ಉಳಿದರು. ಅವರು ಒಂದು ಗಟ್ಟಿ ನಂಬಿಕೆಯನ್ನು ಬಿಟ್ಟು ಮತ್ತೊಂದು ಗಟ್ಟಿ ನಂಬಿಕೆಯನ್ನು ಅಪ್ಪಿಕೊಂಡರೆ ವಿನಃ ಹಾಗೆ ಒಪ್ಪಿಕೊಂಡ ಮಾರ್ಗದಿಂದ ಎಂದೂ ವಿಚಲಿತರಾಗಲಿಲ್ಲ. ಇವರಿಗೆ ಹೋಲಿಸಿದರೆ ಹಾಲ್‌ಡೇನ್ ಮತ್ತು ಎಲ್ವಿನ್ ಇಬ್ಬರೂ ಪ್ರಚಂಡ ವೈವಿಧ್ಯದ ಆಸಕ್ತಿಗಳನ್ನು ಹೊಂದಿದ್ದರು ಹಾಗೂ ಗೌರವಾನ್ವಿತವಾದ ಮತ್ತು ಕೆಲವು ಅಷ್ಟೇನೂ ಗೌರವಾನ್ವಿತವಲ್ಲದ ಪತ್ರಿಕೆಗಳಲ್ಲಿ ಎಡೆಬಿಡದೆ ಬರೆಯುವುದರ ಮೂಲಕ ತಮ್ಮ ಆಸಕ್ತಿಗಳನ್ನು ವಿಸ್ತಾರವಾದ ಓದುವರ್ಗವೊಂದರೊಡನೆ ಹಂಚಿಕೊಂಡರು. ಇಬ್ಬರೂ ತಮ್ಮ ಯೌವನದಲ್ಲಿ ಹಠವಾದಿಗಳಾಗಿದ್ದರು, ಅನುಕ್ರಮವಾಗಿ ಮಾರ್ಕ್ಸ್‌ನನ್ನೂ ಕ್ರಿಸ್ತನನ್ನೂ ಆರಾಧಿಸಿದವರಾಗಿದ್ದರು. ಮುಂದೆ ಮಾತ್ರ ಅವರಿಬ್ಬರೂ ಬುದ್ಧನ ಮಧ್ಯಮ ಮಾರ್ಗವನ್ನು ಒಪ್ಪಿಕೊಂಡರು. ಇಬ್ಬರೂ ಭಾರತೀಯರ ಕೈಹಿಡಿದರು, ಭಾರತೀಯ ಮಕ್ಕಳನ್ನು ಪಡೆದರು. ಮೀರಾ ಸಹ ಭಾರತೀಯನೋರ್ವನನ್ನು ವರಿಸಬಯಸಿದ್ದಳು, ಆದರದು ಸಾಧ್ಯವಾಗಲಿಲ್ಲ. ಇನ್ನು, ಎಲ್ವಿನ್ ಇಲ್ಲಿಗೆ ಬರುವ ಮುನ್ನವೆ ಆತನ ಮದುವೆಯಾಗಿತ್ತು, ಸ್ವಾರಸ್ಯವೆಂದರೆ, ಆತನ ಪತ್ನಿ ಪತಿಯ ಸಾವಿನ ನಂತರವೂ ಇಲ್ಲಿಯೆ ಉಳಿದಳು. ಆತನ ಕೆಲಸವನ್ನು ಮುಂದುವರೆಸಿದಳು. ಕೊನೆಗೆ 1978ರಲ್ಲಿ ಆದಿಲಾಬಾದ್‌ನ ಕಾಡಿನಲ್ಲಿ ಕ್ಷೇತ್ರ ಅಧ್ಯಯನ ನಡೆಸುತ್ತಿದ್ದಾಗ ತೋಳವೊಂದು ಕಚ್ಚಿಕೊನೆಯುಸಿರೆಳೆದಳು.

ಈ ಎಲ್ಲ ನಾಲ್ವರೂ ಬೂರ್ಜ್ವಾ ರೂಢಿಜಡತೆಯನ್ನು ಧಿಕ್ಕರಿಸಿದವರಾಗಿದ್ದರು; ಪ್ರತಿ ಕ್ಷಣವೂ ಸವಾಲುಗಳನ್ನೂ ಅಪಾಯಗಳನ್ನೂ ಆಹ್ವಾನಿಸಿಕೊಳ್ಳುವಂಥವರಾಗಿದ್ದರು. ಕುತೂಹಲದ ಸಂಗತಿಯೆಂದರೆ, ಎಲ್ವಿನ್ ಮತ್ತು ಮೀರಾ ಒಮ್ಮೆ ಮಾತ್ರ ಕಿರು ಅವಧಿಯಲ್ಲಿ ಪರಸ್ಪರ ಸಂಧಿಸಿದುದನ್ನು ಹೊರತುಪಡಿಸಿ ಇವರು ಯಾರಿಗೂ ಇನ್ನೊಬ್ಬರ ಪರಿಚಯ ಸಂಪರ್ಕಗಳು ಇರಲಿಲ್ಲ. ಆದರೆ ನಮ್ಮ ಮನದಲ್ಲಿ ಮಾತ್ರ ಇವರು ವಿದ್ವಾಂಸರಾಗಿ, ಕಾರ್ಯಕರ್ತರಾಗಿ ಸ್ವತಂತ್ರ ಭಾರತದ ಜೀವನಕ್ಕೆ ಶ್ರೀಮಂತಿಕೆಯನ್ನೂ ಉದಾತ್ತತೆಯನ್ನೂ ತಂದುಕೊಟ್ಟ ಚತುರ್‌ಮೂರ್ತಿಗಳಾಗಿ ಸ್ಥಾಪಿತರಾಗಿರುತ್ತಾರೆ.

(ಕೃಪೆ: ಶ್ರೀ ರಾಮಚಂದ್ರ ಗುಹಾ ಮತ್ತು 'ದಿ ಹಿಂದು' ಪತ್ರಿಕೆ)

ನೀರದ

ವೆಂಕಟಗಿರಿ ದಳವಾಯಿ
ಸಂಡೂರು

ಸಂದಿ, ಗದ್ದಲ ಮುಲುಗುವ
ದನಿಯ ಮಧ್ಯೆ ನುಡಿಯುವ
ಒಂದು ಸ್ಮರಣೆ
ಎಲ್ಲವೂ ಅಸ್ಪಷ್ಟ, ದುಗುಡ
ತಿರು ತಿರುಗಿ ಕಾಡುವ ಅದೇ ತಿರವಣಿಗೆಗಳು
ಮರದ ಕೆಳಗೆ ಗುಡಿಸಲು ವಾರಿಗೆ

ನೆರಳಿಗಾಗಿ ಮುಗ್ಧ ಸ್ನಿಗ್ಧ
ಜೀವ ಜಲ ಕಾಯಕ ನಿಷ್ಠೆ.
ಸುತ್ತಿ-ಸುಳಿದಾಡುವ ಸಂದಿಗ್ಧ
ಜೀವನದ ನಡುವೆಯೂ ಅದೊಂದು
ರೀತಿಯ
ಉತ್ಸಾಹ, ಬದುಕಬೇಕೆನ್ನುವ ಅದ್ಭುತ ಹಠ!
ಕೊರಗಲು, ಕಾಯುವ ನಿಷ್ಕಾಜೀವನವೂ
ಬಣ್ಣಿಸಲಸದಳವಾದಾಗ
ಅಮ್ಮನ ಸುಳಿವಿಲ್ಲ!

ನೂರಾರು ಆಕೃತಿಗಳ ಮಡಿಲು
ಮರದ ಕೆಳಗೊಂದು ನೀರವ ಕ್ಷಣ.
ಪ್ರಮಾಣಿಸಲು ಜೀವ ಜನ್ಮ ಸಾಲದು
ಮಗುವೊಂದು ಅರ್ಥೈಸಿಕೊಳ್ಳುವ
ವಾಸ್ತವ ಸ್ಥಿತಿ.

ಸುತ್ತಿ ಸುಳಿದಾಡುವಲ್ಲಿ
ಯಾವುದೂ ಭಾರವಲ್ಲ ನಿಜ
ಸುಪ್ತ ಮನಸ್ಸಿಗೆ ಕನವರಿಕೆಯ
ಕಡು ಹೆದರಿಕೆ!
ಕಣ್ಣಿಗೊಂದು ನೀರ ಹನಿ!!
ಕಡೆಗೊಂದು ಬಾರಿ ಒಂಟಿಯಾಗಿ ಅತ್ತ
ಜನ್ಮಧಾರಣೆ
ಹನಿ ಮೂಡಿದ ಕ್ಷಣ
ಮನುಷ್ಯ ಹುಟ್ಟುತ್ತಾನಂತೆ ಮತ್ತೆ
ನನ್ನಲ್ಲಿ ಶುಭ್ರತೆ ಹಡೆಯಬೇಕು
ಆಗಲೇ ಕೈಹಿಡಿದು ನಡೆಸುವ ಪುಣ್ಯ ಫಲ
ಪುನಃ ಮತ್ತೊಂದು ಜೀವ ಜಾತಿಗೆ.

ನಮ್ಮ ರೀತಿನೀತಿಗಳು ನಿಮಗೆ ಅರ್ಥವಾಗುವುದಿಲ್ಲ

-ಸಿಹಾಟಲ್

ಅನುವಾದ: ರಮಾ ಬಿ. ಎ. ಶ್ರೀಧರ್

ಸಿಯಾಟಲ್ ಅಮೇರಿಕಾದ ಪ್ರತಿಷ್ಠಿತ ಪಟ್ಟಣ. ಹಡಗು, ವಿಮಾನಗಳ ನಿರ್ಮಾಣಕ್ಕೆ ಹೆಸರಾದ ಈ ನಗರ ಒಂದು ಕಾಲಕ್ಕೆ ಸಮುದ್ರ, ಸುಂದರ ಪಕ್ಷಿಗಳು ಮತ್ತು ದಟ್ಟ ಕಾಡಿನಿಂದ ಕಂಗೊಳಿಸುತ್ತಿತ್ತು. ಅಮೇರಿಕಾದ ಮೂಲ ನಿವಾಸಿಗಳಾದ ರೆಡ್ ಇಂಡಿಯನ್‌ರಿಂದ ತುಂಬಿದ್ದ 2 ಮಿಲಿಯನ್ ಎಕರೆ ಪ್ರದೇಶವನ್ನು ವಲಸೆ ಬಂದ ಬಿಳಿಯರು ಒಂದು ಲಕ್ಷ ಐವತ್ತು ಸಾವಿರ ಡಾಲರುಗಳಿಗೆ ಕೊಂಡುಕೊಳ್ಳುವ ಪ್ರಸ್ತಾಪವನ್ನು ಮುಂದಿಟ್ಟಾಗ ಮುಗ್ಧ ಮೂಲ ನಿವಾಸಿಗಳು ದಂಗಾಗಿಹೋದರು. ಬಿಳಿಯರ ದೈತ್ಯಶಕ್ತಿಯ ವಿರುದ್ಧ ಬಂಡೇಳುವ ಚೈತನ್ಯವಿಲ್ಲದ ಜನ ಬೇರೆ ಮಾರ್ಗವಿಲ್ಲದೆ ಒಪ್ಪುವುದು ಅನಿವಾರ್ಯವಾಯಿತು. ಆಗ ಅವರ ನಾಯಕ ಸಿಹಾಟಲ್ ಮಾಡಿದ ಭಾಷಣ ಪ್ರಕೃತಿ, ಪರಿಸರದ ಬಗ್ಗೆ ರೆಡ್ ಇಂಡಿಯನ್‌ರಿಗಿದ್ದ ಕಾಳಜಿಯನ್ನು ತೋರಿಸುತ್ತದೆ. ತನ್ನ ನೆಲ, ಜಲ ಮತ್ತು ಪರಿಸರ ಪರಕೀಯರ ಪಾರಾಗುವುದರ ಬಗ್ಗೆ ಸಿಹಾಟಲ್ ತೋರಿದ ಆತಂಕ, ಭಯ ಚರಿತ್ರಾರ್ಹವಾದದ್ದು. ಇಂದು ಸಿಯಾಟಲ್‌ನಲ್ಲಿ ಗಗನಚುಂಬಿ ಕಟ್ಟಡಗಳಿವೆ, ಹೊಗೆ ಉಗುಳುವ ದೈತ್ಯ ಕಾರ್ಖಾನೆಗಳಿವೆ. ಬಿಳಿಯ ಜನರಿದ್ದಾರೆ. ಶಾಹಾಗಲಿ ಅಥವಾ ಮೂಲನಿವಾಸಿಗಳಾಗಲಿ ಅಲ್ಲಿಲ್ಲ. ಆ ಭಾಗಕ್ಕೆ ಸಿಹಾಟಲ್‌ನ ಹೆಸರನ್ನಿಟ್ಟಿರುವುದೇ ಬಿಳಿಯರು ಮಾಡಿರುವ ಮಹದುಪಕಾರ. ಸಿಹಾಟಲ್‌ನ ಐತಿಹಾಸಿಕ ಭಾಷಣದ ಸಂಗ್ರಹಾನುವಾದವನ್ನಿಲ್ಲಿ ಪ್ರಕಟಿಸುತ್ತಿದ್ದೇವೆ. ರಮಾ ಬಿ.ಎ. ಶ್ರೀಧರ್‌ರವರು ಇದನ್ನು ಶೂದ್ರಕ್ಕೆ ಅತ್ಯಂತ ಚೆನ್ನಾಗಿ ಅನುವಾದಿಸಿ ಕೊಟ್ಟಿದ್ದಾರೆ.

-ಸಂ.

ಆಕಾಶವನ್ನಾಗಲಿ, ಭೂಮಿಯ ಮಮತೆಯನ್ನಾಗಲಿ ನೀವು ಮಾರುವುದು ಅಥವಾ ಕೊಳ್ಳುವುದು ಸಾಧ್ಯವೇ? ಈ ವಿಚಾರವೇ ನಮಗೆ ವಿಚಿತ್ರವೆನಿಸುತ್ತದೆ. ಗಾಳಿಯ ತಾಜಾತನ ಅಥವಾ ನೀರಿನ ಮಿರುಗಿನ ಮೇಲೆ ನಮಗೆ ಸಾಮ್ಯವಿಲ್ಲದಿರುವಾಗ ಅದನ್ನು ಕೊಳ್ಳುವುದಾದರೂ ಹೇಗೆ ಸಾಧ್ಯ?

ಈ ಭೂಮಿಯ ಪ್ರತಿಯೊಂದು ಭಾಗವೂ ನನ್ನ ಜನರಿಗೆ ಪವಿತ್ರವಾಗಿದೆ. ಹೊಳೆಯುವ ದೇವದಾರು ಎಲೆಗಳು, ಮರಳಿನ ದಂಡೆ, ಗಾಢವನಗಳಲ್ಲಿ ಅಡಗಿರುವ ಇಬ್ಬನಿ, ಕ್ರಿಮಿಕೀಟಗಳ ಗಾನ ಎಲ್ಲವೂ ನನ್ನ ಜನರ ನೆನಪಿನಲ್ಲಿ, ಅನುಭವದಲ್ಲಿ ಪವಿತ್ರವಾಗಿ ಅಡಗಿದೆ. ಮರಗಳ ಒಳಗೆ ಹರಿಯುವ ಜೀವರಸ ಕೆಂಪು ಮನುಷ್ಯನ ನೆನಪುಗಳನ್ನು ಹೊತ್ತು ಸಾಗುತ್ತದೆ.

ಬಿಳಿಯ ಮನುಷ್ಯ ಸತ್ತು ನಕ್ಷತ್ರಲೋಕಕ್ಕೆ ಹೋಗುತ್ತಿದ್ದಂತೆಯೇ ತಾನು ಹುಟ್ಟಿದ ದೇಶವನ್ನೇ ಮರೆತು ಬಿಡುತ್ತಾನೆ. ನಾವು ಸತ್ತ ನಂತರವೂ ಈ ಸುಂದರ ಭೂಮಿಯನ್ನು ಎಂದಿಗೂ ಮರೆಯುವುದಿಲ್ಲ, ಏಕೆಂದರೆ, ಇದು ನಮ್ಮ ಭಾಗವಾಗಿದೆ. ಸುಗಂಧಭರಿತ ಪುಷ್ಪಗಳು ನಮ್ಮ ಸಹೋದರಿಯರು; ಜಿಂಕೆಗಳು, ಕುದುರೆಗಳು, ಭವ್ಯವಾದ ಹದ್ದುಗಳೆಲ್ಲ ನಮ್ಮ ಸಹೋದರರು. ಶಿಲೆಯ ಪದರಗಳು, ಹುಲ್ಲುಗಾವಲಿನ ಹಸಿರು, ಮನುಷ್ಯ ಮತ್ತು ಪ್ರಾಣಿಯ ದೇಹದ ಬಿಸಿ - ಇವೆಲ್ಲವೂ ಒಂದೇ ಕುಟುಂಬಕ್ಕೆ ಸೇರಿದವುಗಳು.

ಆದ್ದರಿಂದ, ವಾಷಿಂಗ್‌ಟನ್‌ನ ಮುಖ್ಯಸ್ಥ ನಿಮ್ಮ ನಾಡನ್ನು ನಾನು ಕೊಂಡುಕೊಳ್ಳುತ್ತೇನೆ ಎಂದು ಹೇಳಿ ಕಳುಹಿಸಿದಾಗ ಆತ ನಮ್ಮಿಂದ ತೀರಾ ದೊಡ್ಡ ತ್ಯಾಗವನ್ನೇ ಕೇಳುತ್ತಿದ್ದಾನೆ ಎನ್ನಿಸಿತು. ಆತ ನಮಗಾಗಿ ಜಾಗವನ್ನು ಮೀಸಲಿಡುತ್ತಾನಂತೆ. ನಾವು ಅಲ್ಲಿ ಆರಾಮವಾಗಿ ಜೀವನ ನಡೆಸಬಹುದಂತೆ. ಆತ ನಮಗೆ ತಂದೆಯಾಗುತ್ತಾನಂತೆ ಮತ್ತು ನಾವು ಅವನ ಮಕ್ಕಳಂತೆ.

ನಮ್ಮ ನಾಡನ್ನು ಕೊಳ್ಳುವ ನಿಮ್ಮ ಪ್ರಸ್ತಾವನೆಯನ್ನು ನಾವು ಪರಿಗಣಿಸುತ್ತೇವೆ ಎಂದಿಟ್ಟುಕೊಳ್ಳೋಣ. ಆದರೆ, ಅದು ಅಷ್ಟು ಸುಲಭವಲ್ಲ, ಏಕೆಂದರೆ, ಈ ನಾಡು ನಮಗೆ ಪೂಜ್ಯವಾದದ್ದು. ನದಿಗಳಲ್ಲಿ, ಝರಿಗಳಲ್ಲಿ ಹರಿಯುವ ಈ ಪಳ ಪಳ ಹೊಳೆಯುವ ನೀರು ನಮಗೆ ಕೇವಲ ನೀರಲ್ಲ. ಅದು ನಮ್ಮ ಪೂರ್ವಿಕರ ರಕ್ತ. ನಾವು ನಿಮಗೆ ಭೂಮಿಯನ್ನು ಮಾರಿದರೆ ಇದು ಪೂಜ್ಯವಾದ ನಾಡು ಎಂಬುದನ್ನು ನೀವು ನೆನಪಿನಲ್ಲಿ ಇಟ್ಟುಕೊಳ್ಳಬೇಕು. ಈ ಭೂಮಿ ಪೂಜ್ಯನೀಯ ಎಂಬುದನ್ನು ನಿಮ್ಮ ಮಕ್ಕಳಿಗೆ ಕಲಿಸಿಕೊಡಬೇಕು. ಸರೋವರಗಳ ಸ್ವಚ್ಛ ನೀರಿನಲ್ಲಿ ಕಾಣಿಸುವ ಪ್ರತಿಯೊಂದು ಪ್ರತಿಬಿಂಬಗಳೂ ನನ್ನ ಜನರ ಜೀವನದಲ್ಲಿ ನಡೆದ ಘಟನೆಗಳನ್ನು, ನೆನಪುಗಳನ್ನು



ಹೇಳುತ್ತವೆ. ನೀರಿನ ಜಳ ಜಳ ಸದ್ದು ನನ್ನ ಅಜ್ಜನ ಧ್ವನಿಯಾಗಿದೆ.

ನಮ್ಮ ದಾಹವನ್ನು ಹಿಂಗಿಸುವ ಈ ನದಿಗಳು ನಮ್ಮ ಸಹೋದರರು. ಅವು ನಮ್ಮ ದೋಣಿಗಳನ್ನು ಸಾಗಿಸುತ್ತವೆ. ನಮ್ಮ ಮಕ್ಕಳಿಗೆ ಆಹಾರ ಒದಗಿಸುತ್ತವೆ. ಒಂದು ವೇಳೆ ನಮ್ಮ ಭೂಮಿಯನ್ನು ನಿಮಗೆ ಮಾರಿದರೆ, ಈ ನದಿಗಳು ನಮ್ಮ ಸೋದರರು ಎಂಬುದನ್ನು ನಿಮ್ಮ ಮಕ್ಕಳಿಗೆ ಅರಿವು ಮಾಡಿಕೊಡಬೇಕು. ಮತ್ತು ನೀವು ಕೂಡ ನದಿಗಳನ್ನು ಕರುಣೆ ಮತ್ತು ವಾತ್ಸಲ್ಯದಿಂದ ಕಾಣಬೇಕು. ಅವು ನಿಮ್ಮ ಸಹೋದರರುಗಳಿದ್ದಂತೆ.

ಬಿಳಿಯ ಮನುಷ್ಯನಿಗೆ ನಮ್ಮ ರೀತಿನೀತಿಗಳು ಅರ್ಥವಾಗುವುದಿಲ್ಲ ಎಂಬುದು ನಮಗೆ ತಿಳಿದಿದೆ. ಭೂಮಿಯ ಈ ಭಾಗಕ್ಕೂ ಮುಂದಿನ ಭಾಗಕ್ಕೂ ಇರುವ ವ್ಯತ್ಯಾಸ ಅವನಿಗೆ ತಿಳಿಯುವುದಿಲ್ಲ. ಅವನಿಗೆ ಎಲ್ಲವೂ ಒಂದೇ. ಏಕೆಂದರೆ, ಆತ ರಾತ್ರಿಯಲ್ಲಿ ಬಂದು ಈ ಭೂಮಿಯಿಂದ ತನಗೆ ಬೇಕಾದದ್ದನ್ನು ತೆಗೆದುಕೊಂಡು ಹೋಗಿ ಬಿಡುವ ಒಬ್ಬ ಅಪರಿಚಿತನಿದ್ದಂತೆ. ಭೂಮಿ ಅವನ ಸಹೋದರನಲ್ಲ. ಅದನ್ನು ಶತ್ರುವಾಗಿ ಅವನು ನೋಡುತ್ತಾನೆ. ಭೂಮಿಯನ್ನು ಗೆದ್ದ ನಂತರ ಮುಂದಕ್ಕೆ ಸಾಗುತ್ತಾನೆ. ತನ್ನ ತಂದೆಯ ಸಮಾಧಿಯನ್ನು ಅವನು ಅಲ್ಲಿಯೇ ಬಿಟ್ಟು ಮುಂದೆ ಹೋಗುತ್ತಾನೆ. ಏಕೆಂದರೆ, ಅವನಿಗೆ ಅದರ ಬಗ್ಗೆ ಕಾಳಜಿಯಿಲ್ಲ. ತನ್ನ ಮಕ್ಕಳಿಂದಲೂ ಭೂಮಿಯನ್ನು ಅಪಹರಿಸುತ್ತಿದ್ದಾನೆಯಾದರೂ ಅವನಿಗೆ ಅದರ ಬಗ್ಗೆ ಕಳಕಳಿಯಿಲ್ಲ. ತಂದೆಯ ಸಮಾಧಿ, ಮಕ್ಕಳ ಜನ್ಮಸಿದ್ಧ ಹಕ್ಕು ಇವುಗಳನ್ನು ಆತ ಮರೆಯುತ್ತಾನೆ. ತಾಯಿ ಭೂಮಿಯನ್ನು ಮತ್ತು ಸಹೋದರ ಆಕಾಶವನ್ನು ಆತ ವಸ್ತುಗಳಂತೆ ನೋಡುತ್ತಾನೆ. ಅವುಗಳನ್ನು ಕುರಿ ಅಥವಾ ಹೊಳೆಯುವ ಮಣಿಗಳಂತೆ ಕೊಳ್ಳಬಹುದು, ಮಾರಾಟ ಮಾಡಬಹುದು, ಲೂಟಿ ಮಾಡಬಹುದು ಎಂದು ಅವನು ತಿಳಿದುಕೊಂಡಿದ್ದಾನೆ. ಅವನ ಹಸಿವು ಎಷ್ಟು ಅಗಾಧವಾಗಿದೆಯೆಂದರೆ ಅದು ಭೂಮಿಯನ್ನು ಕಬಳಿಸಿ ಬರೀ ಮರುಭೂಮಿಯನ್ನು ಉಳಿಸುತ್ತದೆ.

ನಮ್ಮ ರೀತಿ ನೀತಿಗಳು ನಿಮ್ಮದಕ್ಕಿಂತ ತೀರಾ ಭಿನ್ನವಾಗಿವೆ. ನಿಮ್ಮ ನಗರಗಳನ್ನು ನೋಡಿದರೆ ಕೆಂಪು ಮನುಷ್ಯನ ಕಣ್ಣುಗಳು ನೋಯುತ್ತವೆ. ಬಿಳಿ ಮನುಷ್ಯನ ನಗರಗಳಲ್ಲಿ ನಿಶಬ್ದವಾಗಿರುವ ಜಾಗಗಳೇ ಇಲ್ಲ. ವಸಂತದಲ್ಲಿ ಎಲೆಗಳು ಬಿಚ್ಚಿ ಹರಡಿಕೊಳ್ಳುವ ಶಬ್ದವನ್ನಾಗಲಿ ಅಥವಾ ಚಿಟ್ಟೆಗಳ ರೆಕ್ಕೆಗಳ ಬಡಿತವನ್ನಾಗಲಿ ಕೇಳಿಸಿಕೊಳ್ಳಲು ಅವಕಾಶವೇ ಇಲ್ಲ. ಅಲ್ಲಿಯ ಶಬ್ದ ಕಿವಿಯನ್ನು ಕರ್ಕಶವಾಗಿ ಅಪ್ಪಳಿಸುತ್ತದೆ. ರಾತ್ರಿಯ ನೀರವತೆಯಲ್ಲಿ ಸರೋವರದ ಸುತ್ತ ಕಪ್ಪೆಗಳು ನಡೆಸುವ ವಾದವಿವಾದಗಳನ್ನು ಅಥವಾ ಜೀರುಂಡೆಯ ಏಕಾಂತದ ಕೂಗನ್ನು ಕೇಳಿಸಿಕೊಳ್ಳುವ ಸುಖದಿಂದ

ವಂಚಿತರಾದರೆ ಏನು ಪ್ರಯೋಜನ? ಕೆರೆಯ ನೀರಿನ ಮೇಲೆ ಅಲೆಯೆಬ್ಬಿಸುವ ಗಾಳಿಯ ಮೃದು ಶಬ್ದವನ್ನು ಕೆಂಪು ಮನುಷ್ಯ ಇಷ್ಟ ಪಡುತ್ತಾನೆ. ಮಧ್ಯಾಹ್ನ ಸುರಿಯುವ ಮಳೆಯಿಂದ ಸ್ವಚ್ಛಗೊಂಡ ಗಾಳಿಯನ್ನು ಅವನು ಬಯಸುತ್ತಾನೆ. ದೇವದಾರು ವೃಕ್ಷದ ಸುಗಂಧವನ್ನು ಹೊತ್ತು ತರುವ ಗಾಳಿಯನ್ನು ಅವನು ಅಪೇಕ್ಷಿಸುತ್ತಾನೆ.

ಕೆಂಪು ಮನುಷ್ಯನಿಗೆ ಗಾಳಿ ಬಹಳ ಶ್ರೇಷ್ಠವಾದದ್ದು. ಪ್ರಾಣಿಗಳು, ಮರಗಿಡಗಳು, ಮನುಷ್ಯರು ಎಲ್ಲರೂ ಉಸಿರಾಡುವ ಗಾಳಿ ಒಂದೇ. ಬಿಳಿ ಮನುಷ್ಯ ತಾನು ಉಸಿರಾಡುವ ಗಾಳಿಯನ್ನು ಗಮನಿಸಿದಂತೆಯೇ ಕಾಣುವುದಿಲ್ಲ. ಹಲವು ದಿವಸಗಳಿಂದ ಸಾವಿನ ದವಡೆಯಲ್ಲಿರುವ ಮನುಷ್ಯನೊಬ್ಬನಿಗೆ ಗಾಳಿಯ ಗಂಧದ ಅರಿವಿರುವುದಿಲ್ಲ. ಬಿಳಿಯ ಮನುಷ್ಯನೂ ಹಾಗೆಯೇ,

ಗಾಳಿಯ ಪರಿಮಳವನ್ನು ಅವನು ಸ್ವಾದಿಸುವುದೇ ಇಲ್ಲ. ಆದರೆ, ಒಂದು ವೇಳೆ ನಿಮಗೆ ಭೂಮಿಯನ್ನು ಮಾರಿದರೆ ಈ ಗಾಳಿ ನಮಗೆ ಪರಮಶ್ರೇಷ್ಠವಾದದ್ದು, ಅದು ಜೀವನದ ಚೇತನ ಎಂಬುದು ನಿಮ್ಮ ನೆನಪಿನಲ್ಲಿ ಇರಬೇಕು.

ನಮ್ಮ ತಾತನಿಗೆ ಮೊದಲ ಉಸಿರು ಕೊಟ್ಟ ಅದೇ ಗಾಳಿ ಅವನ ಕೊನೆಯ ನಿಟ್ಟುಸಿರನ್ನೂ ಸ್ವೀಕರಿಸುತ್ತದೆ.ನಾವು ನಿಮಗೆ ಭೂಮಿಯನ್ನು ಮಾರಿದರೆ ನೀವು ಅದನ್ನು ಪೂಜ್ಯ ಸ್ಥಳವನ್ನಾಗಿ ಬೇರೆಯೇ ಇಡಬೇಕು. ಹಸಿರುಗಾವಲಿನ ಹೂವುಗಳಿಂದ ಸಿಹಿಯಾಗಿ ಬೀಸುವ ಗಾಳಿಯನ್ನು ಸೇವಿಸಲು ಬಿಳಿ ಮನುಷ್ಯ ಕೂಡ ಅಲ್ಲಿಗೆ ಹೋಗಬಹುದು.

ನಿಮ್ಮ ಕಾಲುಗಳ ಕೆಳಗೆ ಇರುವ ಮಣ್ಣು ನಮ್ಮ ತಾತಂದಿರ ಭಸ್ಮ. ಈ ಬಗ್ಗೆ ನಿಮ್ಮ ಮಕ್ಕಳಿಗೆ ತಿಳುವಳಿಕೆ ಮೂಡಿಸಬೇಕು. ನಮ್ಮ ಸೋದರ ಸೋದರಿಯರಿಂದ ಈ ಭೂಮಿ ಫಲವತ್ತಾಗಿದೆ ಎಂಬುದನ್ನು ನಿಮ್ಮ ಮಕ್ಕಳಿಗೆ ಕಲಿಸಿಕೊಡಬೇಕು. ಆಗ ಅವರು ಈ ಭೂಮಿಗೆ ಗೌರವ ಕೊಡುತ್ತಾರೆ. ನಮ್ಮ ಮಕ್ಕಳಿಗೆ ಈ ಭೂಮಿ ತಾಯಿಯಿದ್ದಂತೆ ಎಂಬುದನ್ನು ನಾವು ಕಲಿಸಿಕೊಟ್ಟಿದ್ದೇವೆ. ನೀವೂ ಕೂಡ ನಿಮ್ಮ ಮಕ್ಕಳಿಗೆ ಅದನ್ನೇ ಹೇಳಿ ಕೊಡಬೇಕು. ಭೂಮಿಗೆ ಯಾವುದೇ ಆಘಾತವಾದರೂ ಅದು ಭೂಮಿಯ ಮಕ್ಕಳ ಮೇಲೆ ಪರಿಣಾಮ ಬೀರುತ್ತದೆ. ಮನುಷ್ಯ ನೆಲಕ್ಕೆ ಉಗಿಯುವುದೆಂದರೆ ತಮ್ಮ ಮೇಲೆ ತಾವೇ ಉಗಿದುಕೊಂಡಂತೆ.

ಮನುಷ್ಯ ಭೂಮಿಯ ಒಡೆಯನಲ್ಲ, ಆದರೆ, ಭೂಮಿ ಮನುಷ್ಯನ ಮಾಲೀಕ ಎಂಬುದು ನಮಗೆ ತಿಳಿದಿದೆ. ಎಲ್ಲ ವಸ್ತುಗಳಿಗೂ ಪರಸ್ಪರ ಸಂಬಂಧವಿರುತ್ತದೆ. ನಾವೆಲ್ಲರೂ ಸಹೋದರರೇ. ದೇವರು ಒಬ್ಬನೇ ಎಂಬ ಸತ್ಯ ನಮಗೆ ತಿಳಿದಿದೆ. ಬಿಳಿಯ ಮನುಷ್ಯನೂ ಮುಂದೊಮ್ಮೆ ಈ

ಸತ್ಯವನ್ನು ಅರಿತುಕೊಳ್ಳಬಹುದು.

ನಮ್ಮ ಭೂಮಿಯ ಮೇಲೆ ಒಡೆತನ ಹೊಂದಲು ಬಯಸುವಂತೆ ದೇವರ ಮೇಲೂ ನಾವು ಹಿಡಿತ ಹೊಂದಿದ್ದೇವೆ ಎಂದು ನೀವು ತಿಳಿದುಕೊಂಡಿರಬಹುದು. ಆದರೆ, ಅದು ಸಾಧ್ಯವಿಲ್ಲದ ಮಾತು, ಆತ ಮಾನವನ ದೇವರು, ಕೆಂಪು ಮನುಷ್ಯ ಮತ್ತು ಬಿಳಿಯ ಮನುಷ್ಯರಿಬ್ಬರ ಬಗ್ಗೆಯೂ ಆತನಿಗೆ ಒಂದೇ ರೀತಿಯ ಸಂವೇದನೆಯಿರುತ್ತದೆ. ಈ ಭೂಮಿ ಆತನಿಗೆ ಅಮೂಲ್ಯವಾದದ್ದು. ಈ ಭೂಮಿಗೆ ಹಾನಿ ಉಂಟು ಮಾಡಿದರೆ ಅದರ ಸೃಷ್ಟಿಕರ್ತನ ಅಸಮಾಧಾನಕ್ಕೆ ತುತ್ತಾಗಬೇಕಾಗುತ್ತದೆ. ಬಿಳಿಯರೂ ಒಂದು ದಿನ ನಶಿಸಲೇಬೇಕು. ಬೇರೆ ಬುಡಕಟ್ಟುಗಳಿಗಿಂತ ಬೇಗನೇ ನಶಿಸಿ ಹೋಗಲೂ ಬಹುದು. ನಿಮ್ಮ ನಿಮ್ಮ ಹಾಸಿಗೆಯಲ್ಲೇ ಹೇಸಿಗೆ ಮಾಡಿಕೊಳ್ಳುತ್ತಿದ್ದರೆ ಒಂದು ರಾತ್ರಿ ನಿಮ್ಮದೇ ಹೇಸಿಗೆಯಲ್ಲಿ ಉಸಿರುಕಟ್ಟಿ ಸಾಯುತ್ತೀರಿ.

ಯಾವುದೋ ವಿದೇಶ ಕಾರಣಕ್ಕಾಗಿ ದೇವರು ನಿಮ್ಮನ್ನು ಈ ನಾಡಿಗೆ ಕರೆದುಕೊಂಡು ಬಂದು ಈ ಭೂಭಾಗ ಮತ್ತು ಕೆಂಪು ಜನರ ಮೇಲೆ ಅಧಿಪತ್ಯ ಕರುಣಿಸಿದ್ದಾನೆ. ಆದ್ದರಿಂದ, ನೀವು ನಶಿಸಿಹೋಗುವಾಗಲೂ ಪ್ರಜ್ವಲಿಸುವಂತೆ ಅದೇ ದೇವರು ಶಕ್ತಿ ನೀಡುತ್ತಾನೆ.

ಬದುಕು ನಮಗೆ ನಿಗೂಢ. ಕೋಣಗಳನ್ನು ಯಾವಾಗ ವಧೆ ಮಾಡಲಾಗುತ್ತದೆ ಎನ್ನುವುದು ನಮಗೆ ತಿಳಿದಿಲ್ಲ, ಮದ ತುಂಬಿದ ಕುದುರೆಗಳನ್ನು ಎಂದು ಪಳಗಿಸಲಾಗುತ್ತದೆ, ಕಾಡು ಮನುಷ್ಯನ ವಾಸನೆಯಿಂದ ಎಂದು ತುಂಬುತ್ತದೆ, ಮತ್ತು ಹಸಿರು ಸಮೃದ್ಧವಾದ ಬೆಟ್ಟಗಳ ನೋಟ ದೂರವಾಣಿ ತಂತಿ-ಕಂಬಗಳಿಂದ ಎಂದು ಹಾಳಾಗುತ್ತದೆ ಎನ್ನುವುದು ತಿಳಿದಿಲ್ಲ.

ಪೊದೆಗಳೆಲ್ಲಿ? ಹದ್ದುಗಳೆಲ್ಲಿ? ಎಲ್ಲವೂ ನಾಶವಾಗಿವೆ.

ಜೀವಿಸುವುದು ಮುಗಿದಿದೆ. ಬರೀ ಬದುಕುಳಿಯುವುದು ಆರಂಭವಾಗಿದೆ.

ಎಲ್ಲವೂ ಮಹಾದೇವರ ಕೆಲಸ

ಬೆಳಿಗ್ಗೆ ಅಡ್ಡಾಡುವ ಸಮಯದಲ್ಲಿ ಬಾಪೂ ಹೇಳಿದರು—

ಮಹಾದೇವನು ನನಗೆ ಉತ್ತರಾಧಿಕಾರಿ ಆಗಬೇಕಿತ್ತು. ಆದರೆ ಈಗ ನಾನೇ ಅವರಿಗೆ ಉತ್ತರಾಧಿಕಾರಿಯಾಗಬೇಕಾಗಿ ಬಂದಿದೆ. ನಾನು ಮಹಾದೇವರ ಸಮಾಧಿಯ ಬಳಿಗೆ ಹೋಗುವುದು ಮೀರಾಬೇನಳಿಗೆ ಕೆಟ್ಟೆನಿಸುತ್ತದೆ. ಆದರೆ ನನ್ನ ಪಾಲಿಗೆ ಅದು ತೀರಾ ಸ್ವಾಭಾವಿಕವಾಗಿಬಿಟ್ಟಿದೆ. ಹೋಗದಿದ್ದರೆ ನನಗೆ ಜೀವ ಚುರುಚುರು ಎನಿಸುತ್ತದೆ. ನಾನು ಅಲ್ಲಿ ಹೋಗಿ ಮಾಡುವುದೇನೂ ಇಲ್ಲ, ಬಹಳ ಹೊತ್ತು ಅಲ್ಲಿ ಕೂಡುವುದೂ ಇಲ್ಲ, ಆದರೆ ಹೋಗಿ ಬರುವುದರಿಂದಲೇ ನನಗೆ ತೃಪ್ತಿ, ನಾನು ಬದುಕಿದ್ದರೆ ಆಗಾಖಾನರಿಂದ ಈ ಭೂಮಿಯನ್ನು ಕೇಳಿ ತಕ್ಕೊಳ್ಳುವೆನು. ಅವರು ಕೊಡದೆಯೂ ಇರಬಹುದು. ಆದರೆ ಎಂದಾದರೊಂದು ದಿನ ಹಿಂದೂಸ್ತಾನ ಸ್ವತಂತ್ರವಾಗಿಯೇ ತೀರುವುದು. ಆಗ ಇದು ಯಾತ್ರಾಸ್ಥಾನವಾಗುವುದು. ನಾನು ಅಲ್ಲಿಗೆ ಹೋಗುವುದು ಮಹಾದೇವರ ಕೆಲಸ.

–ಗಾಂಧೀಜಿಯವರ 'ನನ್ನ ಸಮಕಾಲೀನರು' ಕೃತಿಯಿಂದ

ಕನಸಿಗೊಂದು ಕಣ್ಣು

ಅಲೆಮಾರಿಯ
ಮಾತುಗಳು - 3

'ಪ್ರಿಯ ಮಿತ್ರ, ಯಾರೆ ಇರು, ತೆಗೆದುಕೋ ಈ ಮುತ್ತ,
ನಿನಗೆಂದೇ ಕೊಡುತ್ತೇನಿದನ್ನು, ಮರೆಯಲು ಬೇಡ ನನ್ನ"
- ವಾಲ್ಟ್ ವಿಟ್‌ಮನ್.

ಎರಡು ಪಾರಿವಾಳಗಳ ವ್ಯಾಪಾರ

ಶೂದ್ರ ಶ್ರೀನಿವಾಸ್

ಬಹಳ ದಿನಗಳಿಂದ ಮನೆಯಲ್ಲಿ ಸಾಕಲು ಎರಡು ಪಾರಿವಾಳಗಳನ್ನು ತರಲು ಯೋಚಿಸುತ್ತಿದ್ದೆ. ಕೊನೆಗೊಂದು ದಿನ ನನ್ನ ಮಗ ಪ್ರೀತಿಯ ಹತ್ತಿರ ಪ್ರಸ್ತಾಪಿಸಿದೆ. ಅವನು 'ಲವ್ ಬರ್ಡ್' ತರೋಣ ಎಂದ. ಹಾಗೆ ನೋಡಿದರೆ ನನಗೆ 'ಲವ್ ಬರ್ಡ್' ಎಂಬ ಪ್ರತ್ಯೇಕ ತಳಿ ಇದೆಯೋ ಎಂಬ ಪ್ರಶ್ನೆ ಕಾಡತೊಡಗಿತ್ತು. ಕೊನೆಗೆ ಜಯನಗರದ ಕಾಂಪ್ಲೆಕ್ಸ್‌ನ ಮಾರ್ಕೆಟ್ಟಿನಲ್ಲಿ ಅಕ್ವೇರಿಯಂಗಳ

ಪಕ್ಕ ಸಣ್ಣ ಪ್ರಮಾಣದಲ್ಲಿ ಆ ಲವ್ ಬರ್ಡ್ಸ್‌ನ್ನ ಮಾರುತ್ತಿದ್ದರು. ಅವು ಪುಟ್ಟಪಂಜರಗಳಲ್ಲಿ ವಿಲವಿಲನೆ ಒದ್ದಾಡುತ್ತಿದ್ದುವು. ಒಂದು ಕ್ಷಣ ನನ್ನ ಮನೆಯಸುತ್ತ ವೈವಿಧ್ಯಮಯ ಹಕ್ಕಿಗಳು ಚಿಲಿಪಿಲಿಗುಟ್ಟುತ್ತ ಅಲ್ಲಿಂದಿಲ್ಲಿಗೆ ಹಾರಾಡುವುದು ನೆನಪಿಗೆ ಬಂತು. ಒಮ್ಮೊಮ್ಮೆ ವಿದ್ಯುತ್ ತಂತಿಯ ಮೇಲೆ ಅವು ಸಾಲಾಗಿ ಕೂತಾಗ ಅಚ್ಚರಿಯಿಂದ ಲೆಕ್ಕಹಾಕಲು ಹೋಗಿ ಸೋತಿದ್ದೇನೆ.

ನಾನು ಎಂದೂ ನೋಡದ ಬಣ್ಣಬಣ್ಣದ ಹಕ್ಕಿಗಳು. ಇವುಗಳಿಗೆ 'ಲವ್ ಬರ್ಡ್ಸ್' ಎಂದು ನಾಮಕರಣ ಮಾಡಿ ಮಾರಾಟ ಮಾಡುವುದು. ಯಾಕೋ ಅವುಗಳನ್ನು ಕೊಳ್ಳಲು ಮನಸ್ಸು ಬರಲಿಲ್ಲ. ಅಲ್ಲೆಲ್ಲ ಪಾರಿವಾಳಗಳಿಗೆ ಹುಡುಕಾಡಿದೆ.

ಜಯನಗರದ ಕಾಂಪ್ಲೆಕ್ಸ್‌ನಲ್ಲಿ ಪಾರಿವಾಳಗಳು ಕೊನೆಗೂ ಇರಲಿಲ್ಲ. ಯಾರೋ ಶಿವಾಜಿನಗರದಲ್ಲಿ ಸಿಗುತ್ತದೆಂದರು. ಮಾರನೆ ದಿನ ಶಿವಾಜಿನಗರಕ್ಕೆ ಹೋಗಿ ರಸೆಲ್ ಮಾರ್ಕೆಟ್ಟಿನ ಬಳಿ ಜಟಕಾ ಸಾಬಿಯನ್ನು ಕೇಳಿದಾಗ ಕೈತೋರಿಸಿ ಆ ಕಡೆ ಎಂದ. ಅಲ್ಲಿ ಸಾಕಷ್ಟು ದೊಡ್ಡದಾದ ಪಕ್ಷಿಗಳ ಮಾರ್ಕೆಟ್. ನಾನಾ ವಿಧದ ಲವ್ ಬರ್ಡ್ಸ್ ಬಣ್ಣ ಬಣ್ಣದ ಪಾರಿವಾಳಗಳು. ಅವುಗಳನ್ನು ನೋಡಿ ಹಾಗೆಯೇ ನೋಡುತ್ತ ನಿಂತುಕೊಂಡೆ. ಮೊದಲನೆಯ ಬಾರಿಗೆ ಅಲ್ಲಿಗೆ ಬಂದಿದ್ದೆ. ಎಷ್ಟೋ ಬಾರಿ ಆ ಕಡೆಯಲ್ಲೆಲ್ಲ ಸುತ್ತಾಡಿದ್ದರೂ ಆ ಪಕ್ಷಿಗಳ ಮಾರುಕಟ್ಟೆಯನ್ನು ನೋಡಿರಲಿಲ್ಲ.

ಪ್ರವೇಶ ದ್ವಾರದಲ್ಲಿಯೇ ಒಬ್ಬ ಕೈಯಲ್ಲಿ ಕತ್ತರಿ ಹಿಡಿದಿದ್ದವನು "ಏನು ಬೇಕು?" ಎಂದ. "ಎರಡು ಪಾರಿವಾಳಗಳು ಬೇಕು" ಎಂದಿದ್ದಕ್ಕೆ ನಮ್ಮನ್ನು ಯಾವ ರೀತಿಯವು ಬೇಕು ಎಂದು ಕೇಳುವ ಮೊದಲೇ "ರೆಕ್ಕೆ ಕತ್ತರಿಸಿಲಾ" ಎಂದ. ನಾವು ಗಾಬರಿಯಿಂದ "ಯಾಕೆ ಕತ್ತರಿಸಬೇಕು, ಕತ್ತರಿಸಿದರೆ ರಕ್ತ ಬರುವುದಿಲ್ಲವೇ?" ಎಂದೆ. "ಇಲ್ಲ" ಎಂದು ಕತ್ತರಿಸಲು ಹೋದ. "ನಮಗೆ ಸಾಕುವುದಕ್ಕೆ ಬೇಕು ಒಂದು ಗಂಡು ಮತ್ತು ಹೆಣ್ಣು" ಎಂದೆ. "ಹೌದಾ, ನಿಮಗೆ ತಿನ್ನುವುದಕ್ಕೆ ಬೇಕೇನೋ ಎಂದು ಕತ್ತರಿಸಲು ಹೋದೆ" ಎಂದ.

ಅವನ ವಕ್ರತೆಯನ್ನು ಕಂಡು ಸಿಟ್ಟು ಬಂತು. ನಾವು ಬೆಲೆ ಕೇಳದಿದ್ದರೂ ಜೊತೆಗೆ ಇನ್ನೂರೈವತ್ತು ಆಗುತ್ತೆ ಎಂದು ಸಾಕುವ ಎರಡು ಪಾರಿವಾಳಗಳನ್ನು ಹಿಡಿದು ರೆಕ್ಕೆ ಕತ್ತರಿಸಲು ಹೋದ. ಜೊತೆಗೆ ಎರಡು ಪಂಜರಗಳನ್ನು ತೋರಿಸಿ ಅವುಗಳ ಬೆಲೆಯನ್ನು ಹೇಳಿದ. ಕೊನೆಗೆ "ಒಳಗೆ ಹೋಗಿ ನೋಡಿ ಬರುತ್ತೇವೆ" ಎಂದು ಮುಂದೆ ನಡೆದವು.

ಎಲ್ಲರೂ ತಮ್ಮ ಅಂಗಡಿಗಳಿಗೆ ಒತ್ತಾಯ ಮಾಡಿ ಕರೆಯುವಂಥವರೇ. ಇವರ ಹತ್ತಿರ ತುಂಬ ಎಚ್ಚರದಿಂದಿರಬೇಕು ಎಂದು ನನ್ನ ಮಗನಿಗೆ ಸೂಚಿಸಿ "ಸ್ವಲ್ಪ ಸಮಯ ಈ ಹಕ್ಕಿಗಳನ್ನೆಲ್ಲ ನೋಡಬೇಕಾಗಿದೆ" ಎಂದು ನೋಡುತ್ತಿರುವಾಗ ಆರಾಮವಾಗಿ ಅವುಗಳನ್ನು ಗಮನಿಸಲು ಆಗದ ರೀತಿಯಲ್ಲಿ ಸೀರೆ ಅಂಗಡಿ ಅಥವಾ ಬಟ್ಟೆ ಅಂಗಡಿಗೆ ಹೋದಾಕ್ಷಣ ನಾನಾ ರೀತಿಯವುಗಳನ್ನು ನಮ್ಮ ಮುಂದೆ ಹರಡುವ ರೀತಿಯಲ್ಲಿ ಪಕ್ಷಿಗಳನ್ನು ಮತ್ತು ಪಾರಿವಾಳಗಳನ್ನು ಹಿಡಿದು ತೋರಿಸುತ್ತಿದ್ದರು. ಅದರ ಜೊತೆಗೆ ಅವರ ಕೈಯಲ್ಲಿದ್ದ ಕತ್ತರಿ ಅವುಗಳ ಬದುಕಿನ ರೆಕ್ಕೆಗಳನ್ನು ಕತ್ತರಿಸುವುದೇನು ನಮ್ಮನ್ನೇ ಕತ್ತರಿಸುವ ರೀತಿಯಲ್ಲಿದ್ದುವು.

ಎಷ್ಟು ಮುದ್ದು ಮುದ್ದಾದ ಹಕ್ಕಿಗಳು; ಇವುಗಳೆಲ್ಲ ಹೇಗೆ ಇಲ್ಲಿಗೆ ಬಂದುವು ಎಂದು ಯೋಚಿಸುತ್ತಲೇ ಅವುಗಳ ವೈವಿಧ್ಯಮಯವಾದ ಕೊಕ್ಕುಗಳನ್ನು ಮತ್ತು ರೆಕ್ಕೆಗಳನ್ನು ನೋಡುತ್ತ ನಿಂತೆ. ಅಲ್ಲಿಯೇ ಒಂದು ಅಂತಸ್ತಿನ ಪಂಜರದಲ್ಲಿ ಐದಾರು ನಾಯಿ ಮರಿಗಳಿದ್ದುವು. ಅವು ಬೇರೆ ಬೇರೆ ರೀತಿಯ ತಳಿಗಳಾಗಿದ್ದುವು. ಕುತೂಹಲಕ್ಕೆ ಬೆಲೆ ಕೇಳಿದೆ. ಐನೂರು ರೂಪಾಯಿಯಿಂದ ಸಾವಿರ ರೂಪಾಯಿವರೆಗೂ ಆಗುತ್ತದೆಂದು ನಾಯಿ ಮರಿಯ ಕತ್ತಿಗೆ ಕೈಯಾಕಲು ಹೋದ. ನನಗೆ ಗಾಬರಿಯಾಗಿ "ದಯವಿಟ್ಟು ಬೇಡ. ಇನ್ನೊಂದು ದಿವಸ ಬರುವೆ ಇಂದು ಬಂದಿರುವುದು ಎರಡು ಪಾರಿವಾಳಗಳನ್ನು ತೆಗೆದುಕೊಂಡು ಹೋಗಲು" ಎಂದೆ. ಹಾಗೆ ಹೇಳಿದಾಕ್ಷಣ ತನ್ನ ಅಂಗಡಿಯ ಪಕ್ಕದ ಅಂಗಡಿಯಿಂದ ಎರಡು ಪಾರಿವಾಗಳನ್ನು ಹಿಡಿದು ತಂದ. "ಇದರಲ್ಲಿ ಗಂಡು ಯಾವುದು ಹೆಣ್ಣು ಯಾವುದು?" ಎಂದು ಕೇಳಿದೆ. ತೋರಿಸಿ ವಿವರಿಸಿದ. ನಾನು ನಂಬಿದೆ. ಕೊನೆಗೆ ಅವನು ಏನೇನೋ ಬೆಲೆ ಹೇಳಿದ. ಚೌಕಾಸಿ ಮಾಡಿ ಇನ್ನೂರು ರೂ.ಗೆ ಒಪ್ಪಿಸಿದೆ. ಪಂಜರಕ್ಕೆ ಎಪ್ಪತ್ತೈದು ರೂಪಾಯಿ ಕೊಟ್ಟೆ.

ಅವೆರಡರ ರೆಕ್ಕೆ ಕತ್ತರಿಸಿ ಬಿಟ್ಟ. ಅವು ಅಲ್ಲಿಯೇ ಹಾರಿ ಮೇಲಕ್ಕೆ ಹಾರಲಾಗದೆ ಬಂದು ಕೂತವು. ಎರಡನ್ನು ಕೈಗೆ ತೆಗೆದುಕೊಂಡು ನೇವರಿಸಿದೆ. ಆತ್ಮೀಯವಾಗಿ ನನ್ನ ಮತ್ತು ಪ್ರೀತಿಯ ಕೈಗಳಲ್ಲಿ ಮುದುಡಿಕೊಂಡವು. ನಮ್ಮಿಂದ ತೆಗೆದುಕೊಂಡು ಪಂಜರದೊಳಕ್ಕೆ ಬಿಟ್ಟ "ಅಕ್ಕಿ ರಾಗಿ ಮತ್ತು ಗೋದಿಯನ್ನು ನೆಲದ ಮೇಲೆ ಚೆಲ್ಲಿ" ಎಂದ. ಅವನ ಮಾತಿಗೆ ಹೂಂಗುಟ್ಟಿ ಬೇರೆ ಬೇರೆ ಪಂಜರದೊಳಗೆ ಒದ್ದಾಡುತ್ತಿರುವ ಹಕ್ಕಿಗಳನ್ನು ನೋಡುತ್ತ ನಿಂತೆ. ಒಂದು ಕ್ಷಣ ಇವುಗಳನ್ನೆಲ್ಲ ಎಲ್ಲಿಂದ ತರುತ್ತೀರಿ? ಎಂದು ಕೇಳುವ ಮನಸ್ಸಾಯಿತು. ಆದರೆ ಹಾಗೆ

5S

ಕೇಳಲು ಮನಸ್ಸು ಬರಲಿಲ್ಲ. ಯಾಕೆಂದರೆ ಇವುಗಳನ್ನೆಲ್ಲ ಅಕ್ರಮವಾಗಿ ತಂದು ಮಾರುತ್ತಿರುವುದು ಎಂಬುದನ್ನು ಯಾರು ಬೇಕಾದರೂ ಹೇಳಬಹುದಾಗಿತ್ತು. ಈ ಸುಂದರ ಹಕ್ಕಿಗಳನ್ನು ಕೆಲವರು ತಿನ್ನಲು ಕೊಂಡೊಯ್ಯ ಬಹುದು. ಅಥವಾ ಷೋಕಿಗೆ ಸಾಕಲು ಕೊಂಡೊಯ್ಯ ಬಹುದು. ಆಗ ಆ ಕ್ಷಣದಲ್ಲಿ ನಾವೆಲ್ಲ ಈ ಕೊಲೆಗಡುಕರ ಮಧ್ಯೆ ಪಾಮೀಲುದಾರರು ಅನ್ನಿಸಿ ಪಂಜರ ತೆಗೆದುಕೊಂಡು ಹೊರಗೆ ಬಂದೆ.

ಪ್ರವೇಶದ್ವಾರದಲ್ಲಿದ್ದವರು ನಮ್ಮನ್ನು ಕಟುವಾಗಿ ನೋಡತೊಡಗಿದ. ಸ್ವಲ್ಪ ದೂರದಲ್ಲಿ ಹೋಗಿ ಸ್ಕೂಟರಿನ ಮೇಲೆ ಕೂತ. ನನ್ನ ಕೆನೆಟಿಕ್ ಹೊಂಡಾದ ಬಳಿಹೋಗಿ ನಿಂತಾಗ "ಎಷ್ಟು ಕೊಟ್ಟರಿ?" ಎಂದ. ಹೇಳಿದೆ. "ಎಷ್ಟು ದಿವಸದಿಂದ ಇಂಥ ವ್ಯಾಪಾರವನ್ನು ಕಲಿತಿರಿ" ಎಂದು ವಕ್ರವಾಗಿ ಮಾತಾಡಿದ. ನಯವಾಗಿ "ಇನ್ನೊಂದು ದಿವಸ ಬಂದಾಗ ನಿನ್ನಲ್ಲಿಯೇ ತೆಗೆದುಕೊಂಡು ಹೋಗ್ತೇವೆ, ತಪ್ಪು ತಿಳಿಯಬೇಡ" ಎಂದದ್ದಕ್ಕೆ. "ಈ ರೀತಿಯ ವ್ಯಾಪಾರ ಮಾಡಬೇಡ" ಎಂದು ಸ್ಕೂಟರ್ ಇಳಿದು ತನ್ನ ಅಂಗಡಿಯ ಮುಂದೆ ಹೋಗಿ ಕೂತ.

ರಸ್ತೆಯುದ್ದಕ್ಕೂ ಮನೆಗೆ ಬರುವವರೆಗೆ ಪಾರಿವಾಳಗಳು ವಾಹನಗಳ ಹೊಗೆ ಮತ್ತು ಶಬ್ದಕ್ಕೆ ಹೇಗೆ ಭೀತಗೊಂಡಿದ್ದವೋ ಗೊತ್ತಿಲ್ಲ. ತಂದು ಮನೆಯಲ್ಲಿ ಬಿಟ್ಟಾಗ ಅಂಗಳದ ಮಧ್ಯೆ ಒಣಗಿದ ಪುಟ್ಟ ಮರವೊಂದನ್ನು ಹೂಳಿದ್ದೆವು. ಹಾರಿ ಅದರ ಮೇಲೆ ಕೂತವು. ರೆಕ್ಕೆ ಬಡಿಯುತ್ತ ತುಂಬ ಮೇಲಕ್ಕೆ ಹಾರಲಾಗದೆ ಸಿಕ್ಕಿದ ಸ್ವಾತಂತ್ರ್ಯದಲ್ಲಿಯೇ ಅಲ್ಲಿಂದಿಲ್ಲಿಗೆ ಹಾರಾಡತೊಡಗಿದ್ದುವು. ಹೊರಗೆ ಹೊಸದಾಗಿ ಚಿಗುರಿದ್ದ ಹೊಂಗೆ ಮರದ ಎಲೆಗಳ ಮಧ್ಯೆ ಒಂದಷ್ಟು ಹಕ್ಕಿಗಳು ಚಿಲಿಪಿಲಿಗುಡುತ್ತಿದ್ದುವು. ಆದರೆ ಆ ಮಾರುಕಟ್ಟೆಯಲ್ಲಿಯ ಸಾವಿರಾರು ಬಣ್ಣದ ಹಕ್ಕಿಗಳು...?

ಇದರ ಬಗ್ಗೆ ಪ್ರಸಿದ್ಧ ಪರಿಸರ ತಜ್ಞರಾದ ಎಲ್ಲಪ್ಪರೆಡ್ಡಿ ಮತ್ತು ಅಕ್ಷಯ ಕುಮಾರ ಚಕ್ರವರ್ತಿಯವರ ಜೊತೆ ದೂರವಾಣಿಯಲ್ಲಿ ಮಾತಾಡಿದೆ. ಪಕ್ಷಿಗಳ ಮಾರಾಟದ ದಂಧೆಯನ್ನು ಕುರಿತಂತೆ ಏನೇನೋ ಮಾಹಿತಿ ಕೊಟ್ಟರು. ಆದರಿಂದ ನನ್ನ ಮನಸ್ಸಿನ ತುಂಬ ನೂರಾರು ಹಕ್ಕಿಗಳು ಹಾರಾಡಲಾಗದೆ ಪರಿತಪಿಸುತ್ತಿದ್ದುವು.

೭.೩.೯೯

ನೀರಜ

ನರಲೋಕ ನಲಿಯುತಿದೆ ನಿನ್ನ
ನರುಗಂಪಿನಲಿ
ಯಾವ ಲೋಕದ ಹೂವೆ ನೀರಜ
ಕೆನ್ನೀರಿನಲೆಯಲ್ಲಿ ತಿಳಿನೀರ
ತಂಪಿನಲಿ ಚೆದುರೆ
ಚೆನ್ನಾಟ ನಸುಗೆಂಪು ಜಲಜ

ನವಿರಾಗಿ ಹಾಡುತಿದೆ ನವರಾಗ
ನೈದಿಲೆಯು ನೆರಳಾಗಿ
ಬೆರಳ ತುದಿಯೊಳಗೆ ಎಳೆಯ ದಳವಾಗಿ
ಅರಳುತಿದೆ ಕೋಗಿಲೆಯ ಕೊರಳಾಗಿ
ಸ್ಫಟಿಕ ಚೂಡಾಮಣಿಯಾಗಿ ಹೊರಳುತಿದೆ
ನಾಸಿಕವು ಹಸಿರು ಗಿಣಿಯಾಗಿ

ಹೂ ಹೂವಿನೊಳಗೆಲ್ಲ ನೀನೆ ದೈವಿಕವು
ಎಷ್ಟೆಲ್ಲ ಚಿತ್ತಾರ
ಬಾ ಕಮಲೆ ಅನುರಾಗದಮಲಾಂಗಿ
ಸ್ಪರ್ಶಸುಖ ಕಾತರಿಸಿ
ಏಳು ಸ್ವರ್ಗವ ದಾಂಟಿ ಪಂಚರಂಗಿ

ತೇಲಿಬಂದೆನು ಮೋಹಿ ಬೆಳಕು ಮೂಡುವ
ದೇಹಿ ಜೀವದುಂಬಿ
ಮುಗಿಲಾಚೆ ದೂರದಲಿ ಉರಿದು ಹೋದನು
ಸೂರ್ಯ ಕತ್ತಲೆಯ ಕಣ್ಣು ತುಂಬಿ
ಆವರಿಸುತಿದೆ ಸಾವು ಬರಲಾರೆ ನಾನು
ನಿನ್ನ ಪರಿಮಳದ ತೋಳಬಂದಿ
ನಸುನಗುವ ತಾವರೆಯೆ ತಿಳಿಬೆಳಕ ತಂದಿ
ಮುಗಿಯಲೀ ಜೀವನವು ನಾನಿನ್ನ ಪ್ರೇಮ ಬಂದಿ

–ಎಲ್. ಎನ್. ಮುಂಕುಂದರಾಜ್

ಸಮಾನತೆ

"ಸಮತೆ", "ಸಮಾನತೆ" ಎನ್ನುವ ಶಬ್ದಗಳು ಬಹಳವಾಗಿ ಚರ್ಚೆಗೆ ಗ್ರಾಸವಾಗಿವೆ. ಅದರಲ್ಲೂ ಹೆಣ್ಣುಗಂಡುಗಳ ವಿಷಯಬಂದಾಗ ಈ ಸಮಾನತೆಯ ಮಾತು ಅತಿರಂಜಿತವಾಗಿ ಚರ್ಚಿಸಲ್ಪಡುತ್ತದೆ. ಆದರೂ ಎಲ್ಲೋ ಏನೋ ತಪ್ಪಿದೆ ನಾವೆಲ್ಲೋ ಜಾರಿದ್ದೇವೆ, ವಾದದಲ್ಲಿ ಎಂದು ನಮಗನ್ನಿಸುತ್ತದೆ. ಆದರೆ ಎಲ್ಲಿ ಎಂಬುದು ತಿಳಿಯುವುದಿಲ್ಲ, ಎಲ್ಲಾ ಮಸಕು ಮಸಕು.

ಪ್ರತಿಯೊಂದು ಪ್ರಾಣಿ, ಪ್ರತಿಯೊಂದು ಅಂಗ, ಪ್ರತಿಯೊಬ್ಬ ಜೀವಿ ತನ್ನದೇ ಆದ ವಿಶಿಷ್ಟತೆಗಳನ್ನು ಹೊಂದಿದೆ. ಆಯಾ ಜೀವರಾಶಿ, ಆಯಾ ಲಿಂಗ, ಆಯಾ ಬೆಳವಣಿಗೆ ಆಯಾ ಪರಿಸರ, ಆಯಾ ವಯಸ್ಸು ಆದಿ-ಈ ವಿಶೇಷತೆಗೆ ಕಾರಣವಾಗುತ್ತದೆ. ಅಂತೂ ಯಾವುದೇ ಒಂದು ನಿರ್ದಿಷ್ಟ ಸಮಯದಲ್ಲಿ ಪ್ರತಿಯೊಂದು ಪ್ರಾಣಿ ತನ್ನದೇ ಆದ ವೈಶಿಷ್ಟ್ಯ ಪಡೆದಿರುತ್ತದೆ. ವೈಶಿಷ್ಟ್ಯವಿದ್ದಾಗ "ಸಮ-ಅಸಮ" ಶಬ್ದಗಳಿಗೆ ಅರ್ಥವಿಲ್ಲ, ಅವು ಪ್ರಸ್ತುತವಲ್ಲ.

ನಾವೆಲ್ಲಾ ಅಸಮರು, ಹೆಣ್ಣಾಗಲೀ, ಗಂಡಾಗಲೀ ಮುದುಕರಾಗಲೀ, ಮಕ್ಕಳಾಗಲೀ, ಅನುಭವಿಗಳಾಗಲೀ, ಮುಗ್ಧರಾಗಲೀ, ನಗರಸಂಸ್ಕೃತಿಯವರಾಗಲೀ, ಕಾಡುಹಳ್ಳಿಯವರಾಗಲೀ, ನಾವೆಲ್ಲ ಅಸಮರು, ಇದು ವಸ್ತುಸ್ಥಿತಿ. ನಮ್ಮ ಆಕಾರ ಶಕ್ತಿ, ಗುಣಧರ್ಮ, ವಿದ್ಯೆ, ನೀತಿ, ನಂಬಿಕೆ, ಸೌಂದರ್ಯ, ಆರೋಗ್ಯ, ಚಾಕಚಕ್ಯತೆ, ದಕ್ಷತೆ, ಜಾಣತನ, ಎಲ್ಲವೂ ಅಸಮವೇ. ಒಬ್ಬರ ಗುಣ ಇನ್ನೊಬ್ಬರಂತಿಲ್ಲ. ಇವುಗಳಲ್ಲಿ ಸಮತೆ ಸಾಧ್ಯವೂ ಇಲ್ಲ, ಹಾಗಾದರೆ ನಮ್ಮ ಸಮಾನತೆಯ ಬೇಡಿಕೆಯ ಕೂಗು ಎಲ್ಲಿದೆ? ಉತ್ತರ ಸುಲಭ. ನಮಗೆಲ್ಲರಿಗೂ ಸಮಾನವಾದ ಅಧಿಕಾರ ಕೆಲವು ಕಡೆ ಬೇಕು. ನಮ್ಮ ಸ್ವಭಾವಕ್ಕೆ ಮನ್ನಣೆ, ನಮ್ಮ ಬೆಳವಣಿಗೆಗೆ ಸಮಾನ ಅವಕಾಶದ ಪರಿಸರ, ಗೌರವ ಘನತೆಗೆ ಸಮಾನ ಮರ್ಯಾದೆ, ನಮ್ಮ ಭಾವನೆ ಗುಣಗಳನ್ನು ಸಮಾನವಾಗಿ ಪರಿಗಣಿಸುವ ಸಮಾಜ ವ್ಯವಸ್ಥೆ ನಮಗೆ ಬೇಕು.

ಬೇಕಾದ ಈ ಸಮಾನತೆಯನ್ನು ದೂಳಿಪಟ ಮಾಡುವ ಮಾರಾಟ ಕಾನೂನುಗಳು, ಸಂಸ್ಕೃತಿಗಳು, ನಡೆ-ನುಡಿ, ಸರಿತಪ್ಪುಗಳು, ಈ ಸಮಾಜದಲ್ಲಿ ಬೇರುಬಿಟ್ಟವೆ. ಇಲ್ಲಿ ಬದಲಾವಣೆಯಾಗಬೇಕಾಗಿದೆ. ಇದಕ್ಕೆ ಮೂಲಭೂತವಾಗಿ ಪುರುಷ ಪ್ರಧಾನ್ಯತೆಯ ಜಡ್ಡುಹಿಡಿದ ನಂಬಿಕೆ ನಶಿಸಬೇಕಾಗಿದೆ. ಕುಟುಂಬದಲ್ಲಿ, ಕುಲಧರ್ಮ ನಡೆಗಳಲ್ಲಿ, ಧರ್ಮದ ಕಟ್ಟಳೆಗಳಲ್ಲಿ, ಕಾನೂನಿನಲ್ಲಿ, ಹಾಸುಹೊಕ್ಕಾಗಿರುವ ಪುರುಷ ಪ್ರಾಧಾನ್ಯತೆ ಹೋಗಬೇಕು. ಈ ವಿಷಯ ಅರ್ಥವಾಗಬೇಕಾದರೆ ಉದಾಹರಣೆಗಳು ಸಹಕಾರಿ.

1. ಗಂಡಸು ಮುಖ ತೋರಿಸಿಕೊಂಡು ತಿರುಗಬಹುದು. ಹೆಂಗಸು ಮುಸುಕು ಹಾಕಲೇಬೇಕು (ಇದು ಜಡ್ಡುಗಟ್ಟಿದ ಧರ್ಮ)
2. ಹೆಂಗಸಿಗೆ ಆಸ್ತಿ ಹಕ್ಕು ಇಲ್ಲ (ಇದು ಜೊಂಡು ಹಿಡಿದ ಕಾನೂನು)
3. ಹೆಣ್ಣು ಮಗುವಿಗೇಕೆ ಹೆಚ್ಚಿನ ಓದು? (ಇದು ಕುಟುಂಬದ ಕುರುಡು ನಂಬಿಕೆ)
4. ಸಂಜೆಗೆ ಮುಂಚೆ ಯುವತಿ ಮನೆ ಸೇರಬೇಕು (ಇದು ಅಭದ್ರ ಸಮಾಜದ ವಸ್ತುಸ್ಥಿತಿ)

5. ಗಹನ ವಿಷಯಗಳನ್ನು ಗಂಡಸರು ಚರ್ಚಿಸುವಾಗ ಹೆಂಗಸರು ಬಾಯಿಹಾಕಬಾರದು (ಇದು ಪುರುಷ ಪ್ರಧಾನ ವ್ಯವಸ್ಥೆ)
6. ಗಂಡಸಿನಷ್ಟು ಹೆಂಗಸು ಬುದ್ಧಿವಂತಳಾಗುವುದು, ಶಕ್ತಿವಂತಳಾಗುವುದು, ಯುಕ್ತಿವಂತಳಾಗುವುದು ಸಾಧ್ಯವಿಲ್ಲ (ಇದು ಬುನಾದಿಯಿಲ್ಲದ ನಂಬಿಕೆ)
7. ಹೆಂಗಸು ಯಾಗಹೋಮಗಳನ್ನು ಏಕಾಂಗಿಯಾಗಿ ಮಾಡಬಾರದು. ಅಧಿಕಾರಗಳನ್ನು ಏಕಾಂಗಿಯಾಗಿ ಚಲಾಯಿಸಬಾರದು. ರಾಜ ರಾಣಿಯಾಗಿ ಮೆರೆಯಬಾರದು ಆದಿ (ಬಹಳ ಚರ್ಚೆಗೆ ಗುರಿಯಾಗುವ ವಿಷಯಗಳು)
8. ನೀನು ಗಂಡು ಹುಡುಗ ಎಂಜಲು ತಟ್ಟೆ ಎತ್ತಬೇಡ, ಅಕ್ಕ ಮಾಡುತ್ತಾಳೆ ಎಂದು ಅಮ್ಮ ಹೇಳಿದರೆ (ಇದು ಗೊಡ್ಡು ಕೌಟುಂಬಿಕ ಸಂಪ್ರದಾಯ)

ಪ್ರಕೃತಿ ಕೆಲವು ಗುಣಗಳನ್ನು ವಿಶೇಷವಾಗಿ ಕರುಣಿಸಿ ಮೇಲ್ಮೆ ಸಾಧಿಸಲು ಹೆಣ್ಣಿಗಾಗಲೀ, ಗಂಡಿಗಾಗಲೀ, ಅವಕಾಶವೆಸಗಿದೆ. ಇವುಗಳನ್ನು ವೃದ್ಧಿಸಿಕೊಂಡರೆ ಆ ದಿಕ್ಕಿನಲ್ಲಿ ಬೆಳೆದರೆ ತಪ್ಪಾಗಲಾರದು. ಉದಾಹರಣೆಗೆ ಹೆಣ್ಣು ಸಂಯಮಿ, ಮೃದು, ಸುಕೋಮಲೆ, ಸೌಂದರ್ಯ ಪ್ರಜ್ಞೆ, ಸೂಕ್ಷ್ಮ ಪ್ರಜ್ಞೆಯುಳ್ಳವಳು, ಹಾಗೆಯೇ ಗಂಡು ಶಕ್ತಿ ಗೌರವ, ಘನತೆ ಮನ್ನಣೆ ತ್ಯಾಗ ಮತ್ತೊಬ್ಬರನ್ನು ರಕ್ಷಣೆ ಮಾಡುವುದು ಆ ಗುಣವುಳ್ಳವನು. ಇಂತಹವುಗಳನ್ನು ವಿಶೇಷತೆಗಳೆಂದು ಪರಿಗಣಿಸಬೇಕೇ ಹೊರತು ಅಸಮಾನತೆಯೆಂದು ಬೊಬ್ಬಿಡುವುದು ಲೇಸಲ್ಲ.

ಮಿತಿಮೀರಿದ ಸಮಾನತೆಯ ಕೂಗು ಹಲವು ಬಾರಿ ಅಡ್ಡದಾರಿಯೇ ಹಿಡಿದಿದೆ. ಉದಾಹರಣೆಗೆ ಕೆಲ ಹೆಂಗಸರು ಕುಡಿಯುವುದು, ಹೊಗೆ ಸೇದುವುದು, ಇಸ್ಪೀಟು ಆಡುವುದು ಕಲಿತರೆ ತಾವು ಪುರುಷರಿಗೆ ಸಮಾನರೆಂದು ಬಗೆಯುವರು. ಕೆಲವು ಗಂಡಸರು ಉದ್ದ ಕೂದಲು ಆಭರಣ ತೊಡಬಯಸುತ್ತಾರೆ. ಬಹಳಷ್ಟು ಜನ ಸೌಂದರ್ಯ ಸಾಧನೆಗಳಿಗೆ ಮೊರೆ ಹೊಕ್ಕಿದ್ದಾರೆ.

ನಾವು ಎಷ್ಟೇ ಪ್ರಯತ್ನಿಸಿದರೂ ಕೆಲವು ಪ್ರಕೃತಿದತ್ತ ಗುಣಗಳು-ಅವುಗಳು ನಿರ್ಮಿಸುವ ಸೀಮೆಗಳು ಸದಾ ಉಳಿದೇ ಇರುತ್ತದೆ. ಉದಾಹರಣೆಗೆ ತಾಯ್ತನ, ಮುಟ್ಟು ಮೈಲಿಗೆ ಹೆಣ್ಣಿನ ಪ್ರಕೃತಿ ವಿಶೇಷತೆ. ಇದಕ್ಕೆ ತಕ್ಕಂತೆ ಅವಳು ಹೊಂದಿಕೊಳ್ಳಲೇಬೇಕು. ಅದಕ್ಕನುಕೂಲವಾಗುವಂತೆ ಸಮಾಜ, ಕಾನೂನು ಸಹಕರಿಸಲೇಬೇಕು. ಅಂದರೆ ಹೆರಿಗೆ ರಜದ ವ್ಯವಸ್ಥೆ ಆಗಿರಬೇಕು.

ಸಮಾನತೆಗೆ ಹಾತೊರೆಯುವಾಗ ತಿಳುವಳಿಕೆಯಿಂದ ಹೆಜ್ಜೆಯಿಡಬೇಕು. ಸಹಜವಾದುದನ್ನು ಮಾತ್ರ ಕೇಳಬೇಕು. ಸಮಾನತೆ ಸಿಗಬೇಕಾದರೆ, ಎಲ್ಲರಲ್ಲೂ, ಎಲ್ಲಾ ಹಂತದಲ್ಲಿಯೂ-ವೈಯಕ್ತಿಕ, ಕೌಟುಂಬಿಕ, ಸಾಮಾಜಿಕ, ಧಾರ್ಮಿಕ, ಕಾನೂನು ರೀತ್ಯಾ ಹಾಗೂ ಸಾಂಸ್ಕೃತಿಕವಾಗಿ ಮೂಲಭೂತ ಬದಲಾವಣೆ ಆಗಬೇಕು. ಆಗ ಮಾತ್ರ ದಾಪುಗಾಲು ಹಾಕಲು ಸಾಧ್ಯ.

-ಎಂ. ವಿಠೋಬ ಶೆಟ್ಟಿ
ಬೆಂಗಳೂರು

ನಮ್ಮ ಮಹಿಳೆಯರ ಕುರಿತು ಒಂದು ಚರ್ಚೆ

ಗಾಜಲದಿನ್ನಿಯ ಅರಣ್ಯ ಇಲಾಖೆ ಅತಿಥಿಗೃಹ ಆವರಣದ ಮರಗಳ ಕೆಳಗೆ ಬಿಸಿಲು ನೆರಳು ಉಯ್ಯಾಲೆಯ ತಂಪಿನ ವಾತಾವರಣದಲ್ಲಿ ಹೆಣ್ಣು ಮಕ್ಕಳ ಹಾಡುಹಸೆಗಳ ಸಾಂಸ್ಕೃತಿಕ ಇಂಪಿನಲ್ಲಿ ಒಂದು ಸುಂದರ ಕಾರ್ಯಕ್ರಮ. ಅಲ್ಲಿ ನಡೆದದ್ದು ಮಹಿಳೆಯರ ಕಷ್ಟ ಸುಖದ ವಿಚಾರಪೂರ್ಣ ಚರ್ಚೆ.

ಗ್ರಾಮೀಣಾಭಿವೃದ್ಧಿ ಜಾಗತಿಕ ಸಂಸ್ಥೆಯಿಂದ ನಡೆಸಲಾದ ಈ ಚರ್ಚೆಯ ಸಂವಾದ ಕಾರ್ಯಕ್ರಮದಲ್ಲಿ ವಿಶ್ವಮಟ್ಟದ ಸಮಾಜಸೇವಾ ಸಂಸ್ಥೆಯಾದ ಮಾನವ ಹಕ್ಕುಗಳ "ಫೋರ್ಟ್ ಫೌಂಡೇಶನ್"ನ ಭಾರತದ ಮುಖ್ಯಸ್ಥರಾದ ಶ್ರೀಮತಿ ಮಲ್ಲಿಕಾದತ್ ಮತ್ತು ರೇಮನ್ ನವದೆಹಲಿ ರವರು ಒಂದು ಗಂಟೆಕಾಲ ಮುಖ್ಯವಾಗಿ ಗ್ರಾಮೀಣ ಮಹಿಳೆಯರ ವಿವಿದ ರೀತಿಯ ಸಮಸ್ಯೆಗಳ ಕುರಿತಂತೆ ಪ್ರಶ್ನೆ ಸಮಾದಾನಗಳ ಮಾತುಕತೆ ನಡೆದಾಗ ಕೆಳವರ್ಗದ ಹೆಣ್ಣು ಮಕ್ಕಳ ಕಣ್ಣೀರ ಕತೆಗಳು ಸಾದರಗೊಂಡವು. ಮುಳಬಾಗಲು ತಾಲ್ಲೂಕಿನ ನಲ್ಲೂರ ಗ್ರಾಮ ಎಳೆವಯಸಿನ ನಾರಾಯಣಮ್ಮ ಅತ್ಯಾಚಾರಕ್ಕೆ ಒಳಪಟ್ಟ ದುಃಖದ ಘಟನೆ ಒಂದು ಕಡೆಯಾದರೆ ಅದೇ ತಾಲ್ಲೂಕಿನ ಶಿವನಾರಹಳ್ಳಿ ರತ್ನಮ್ಮಳ ಗಂಡು ಕೂಲಿಗಳ ಜೊತೆ ಸಮಸಮಕ್ಕೆ ಬೆವರು ಸುರಿಸಿ ದುಡಿದರೂ ಸಹ ಅರ್ಧಕ್ಕರ್ಧ ಕಡಿಮೆ ಕೂಲಿ ಪಡೆಯುವ ಸಂಕಷ್ಟದ ಸ್ಥಿತಿ. ಚಿಕ್ಕಬಳ್ಳಾಪುರ ಮುದ್ದೇನಹಳ್ಳಿ ರೂಥಮ್ಮ ಬದುಕಿನ ಉದ್ದಕ್ಕೂ ದುಡಿದು ದುಡಿದು ಗಂಡನ ಹೆಂಡದ ಕುಡಿತಕ್ಕೆ ಸುರಿದು ಸವೆದದ್ದು.

ಹೀಗೆ ಕೋಲಾರ ಜಿಲ್ಲೆಯ ಎಲ್ಲ ತಾಲ್ಲೂಕಿನ ಹಳ್ಳಿಗಳ ಹೆಣ್ಣುಮಕ್ಕಳ ಗೋಳಿನ ಕತೆಗಳು ಗರಿಬಿಚ್ಚಿಕೊಂಡವು. ಮುಗಿಯದ ಕತೆಯಾದ ಮಹಿಳಾ ಸಮಸ್ಯೆಗಳಿಗೆ ಆದಷ್ಟು ರೀತಿಯಲ್ಲಿ ಪರಿಹಾರ ಒದಗಿಸಲು ತಮ್ಮ ಸಂಸ್ಥೆ 'ಫೋರ್ಟ್ ಫೌಂಡೇಶನ್' ಬದ್ಧತೆಯಿಂದ ಪ್ರಯತ್ನಿಸುವುದಾಗಿ, ಈ ಹೋರಾಟಕ್ಕೆ ಇಡೀ ಜಗತ್ತಿನ ಹೆಣ್ಣುಮಕ್ಕಳೆಲ್ಲಾ ಒಗ್ಗಟ್ಟಾಗಿ ಕೈಗೂಡಿಸಬೇಕೆಂದು ಶ್ರೀಮತಿ ಮಲ್ಲಿಕಾದತ್ತ ಮತ್ತು ಶ್ರೀಮತಿ ರೇಮನ್‌ರವರು ವಿನಂತಿಸಿ ಕೊಂಡರು.

ಮುಖ್ಯಅತಿಥಿಗಳಾಗಿ ಉತ್ತನೂರು ರಾಜಮ್ಮ ಎ. ಶೆಟ್ಟಿ ಎಳ್ಳಿನ ದೀಪಗಳು ಹಚ್ಚಿ ಕಾರ್ಯಕ್ರಮ ಉದ್ಘಾಟಿಸಿದಾಗ ಆರ್.ಡಿ.ಒ. ಸಂಸ್ಥೆಯ ಶ್ರೀ ಮಂಜುನಾಥ ಸುಧಾಕರ್, ಚಿತ್ರಾವತಿ, ಕಲಾವಿದ ರಾಜಶೇಖರನಾಯ್ಡು, ಡಿ.ಎಂ. ಮಣಿ ಉಪಸ್ಥಿತರಿದ್ದರು. ಹೋರಾಟದ ಹಾಡುಗಳ ಹಿನ್ನೆಲೆಯಲ್ಲಿ ಸಂಯೋಜಿಸಲಾಗಿದ್ದ ಈ ವಿಶಿಷ್ಟ ಕಾರ್ಯಕ್ರಮವನ್ನು ಕು.ಮಮತಾ ಯಶೋದ ಲಕ್ಷ್ಮೀದೇವಿ ನಿರ್ವಹಿಸಿದರು.

—ಉತ್ತನೂರು ರಾಜಮ್ಮ ಎ. ಶೆಟ್ಟಿ

ಕವನಗಳೆಂದರೆ

ಕವನಗಳೆಂದರೆ
ಚಳಿಯ ಬೆಳಗಲ್ಲಿ ಕುದಿವ
ನೀರು ಮೈಗೆ ಸುರಿದುಕೊಂಡು
ಒದ್ದೆ ದುಕೂಲದಿ ದೇವರಿಗೇ ನಮಿಸಿದ್ದೇ?

ಬೈಕಿನಲಿ ಕುಳಿತು ಭಾವೋದ್ವೇಗದಿ
ರಸ್ತೆಯಿಂದೆತ್ತಿ ಹಾಕುವಂತೆ ಓಡಿಸಿದ್ದೇ?

ಬಾರಿನಲಿ ಕುಡಿದು
ಮನೆಯಲ್ಲದ ಮನೆಗೆ
ತೂರಾಡಿ ಬಾಗಿಲ ತಡವಿದ್ದೇ?

ಕವನವೆಂದರೆ,
ಕತ್ತಲಕೋಣೆಯಲಿ ರತಿಸುಖದ
ಆನಂದೋಲ್ಲಾಸದಿ ಮುಲುಗಿದ್ದೇ?

ಇಲ್ಲ, ಏಕಾಂತದಿ ಕುಳಿತು
ಸಮಚಿತ್ತದಿ ಗೀಚಿದ್ದೇ - ಈ ಸಾಲುಗಳು?

–ಶೈಲೇಂದ್ರ ಬಂದಗದ್ದೆ

ಮಹಿಳೆ ಮತ್ತು ಮಕ್ಕಳ ಕ್ಷೇಮಾಭಿವೃದ್ಧಿ ಕರ್ನಾಟಕದ ವಿಶಿಷ್ಟ ಯೋಜನೆಗಳು

ಇಂದಿನ ಮಕ್ಕಳೇ ನಾಳಿನ ಪ್ರಜೆಗಳು ಅವರ ಉಳಿವು ರಕ್ಷಣೆ ಮತ್ತು ಅಭಿವೃದ್ಧಿ ಮನುಕುಲದ ಅಭಿವೃದ್ಧಿಗೆ ಅವಶ್ಯಕವಾಗಿದೆ. ಮಕ್ಕಳ ಮೂಲಭೂತ ಅಗತ್ಯಗಳನ್ನು ಪೂರೈಸಿ ಅವರಿಗೆ ಜ್ಞಾನ ಮತ್ತು ಸಂಪನ್ಮೂಲಗಳನ್ನು ಒದಗಿಸಿ, ಸಜ್ಜುಗೊಳಿಸುವುದು ಅಭಿವೃದ್ಧಿಯ ಪ್ರಾಥಮಿಕ ಗುರಿ. ಆದ್ದರಿಂದಲೇ ಮಕ್ಕಳ ಮೂಲಭೂತ ಅಗತ್ಯಗಳನ್ನು ಪೂರೈಸಿ, ಅವರಿಗೆ ಜ್ಞಾನ ಹಾಗೂ ಸಂಪನ್ಮೂಲಗಳನ್ನು ಒದಗಿಸುವುದು ಪ್ರಾಮುಖ್ಯವಾಗಿದೆ.

ಮಕ್ಕಳ ದುರವಸ್ಥೆಯನ್ನು ನಿವಾರಿಸಲು ಹಾಗೂ ಅವರ ಬೆಳವಣಿಗೆ ಮತ್ತು ಅಭಿವೃದ್ಧಿಗೆ "ಮಕ್ಕಳಿಗಾಗಿ ರಾಜ್ಯ ಕ್ರಿಯಾ ಯೋಜನೆ"ಯನ್ನು ರೂಪಿಸಿದೆ. ಇದು ೧೯೯೦ರಲ್ಲಿ "ವಿಶ್ವಶೃಂಗ ಸಭೆಯಲ್ಲಿ" ಜಾಗತಿಕ ಭ್ರಾತೃ ಸಂಘ ನೀಡಿದ ಆಶ್ವಾಸನೆಗಳಿಗೆ ಅನುಗುಣವಾಗಿದೆ. ಅದಕ್ಕನುಗುಣವಾಗಿ ೧೯೯೫ರಲ್ಲಿ ಹೆಣ್ಣುಮಗು ಮತ್ತು ಬಾಲಕಿಯ ಸ್ಥಾನಮಾನ ಸುಧಾರಣೆ ಮತ್ತು ಅವನತಿ ಹೊಂದುತ್ತಿರುವ ಲಿಂಗ ಅನುಪಾತವನ್ನು ವಿಪರ್ಯಾಸಗೊಳಿಸುವುದು. ಔಪಚಾರಿಕ, ಅನೌಪಚಾರಿಕ ಮತ್ತು ಬದಲಿ ವ್ಯವಸ್ಥೆಯ ಮೂಲಕ ಅಂಗವಿಕಲರೂ ಸೇರಿದಂತೆ ಶೇ. ೧೦೦ರಷ್ಟು ಬಾಲಕಿಯರಿಗೆ ಪ್ರಾಥಮಿಕ ಶಿಕ್ಷಣ ಸೌಲಭ್ಯ ಅಂತೆಯೇ ಕನಿಷ್ಠ ಶೇ. ೮೦ರಷ್ಟು ತರುಣಿಯರಿಗಾದರೂ ವೈಯಕ್ತಿಕ ಆರೋಗ್ಯ ಸುಧಾರಣೆಯ ಅರಿವು ಮೂಡಿಸಿ ವಿಶೇಷ ಆರೋಗ್ಯ ಶಿಬಿರಗಳನ್ನು ಸ್ಥಾಪಿಸುವುದು ಹಾಗೂ ಶಾಲಾ ಶಿಕ್ಷಣವನ್ನು ಮುಂದುವರೆಸದ ಕನಿಷ್ಠ ಶೇ. ೫೦ರಷ್ಟು ತರುಣಿಯರಿಗೆ ಸ್ವಾವಲಂಬಿಗಳಾಗಲು ವೃತ್ತಿ ನೈಪುಣ್ಯತೆ ಒದಗಿಸುವುದು.

೧೯೯೫ರ ಅಂತ್ಯದ ವೇಳೆಗೆ ಜನನಪೂರ್ವ ಧನುರ್ವಾಯು ಸೋಂಕನ್ನು ತಡೆಗಟ್ಟುವುದು ಮಕ್ಕಳು ದಡಾರದಿಂದ ಸಾಯುವುದನ್ನು ಶೇ ೯೫ರಷ್ಟು ಕಡಿಮೆ ಮಾಡುವುದು. ಪೋಲಿಯೋ ವನ್ನು ರಾಜ್ಯದ ೧೦ ಜಿಲ್ಲೆಗಳಲ್ಲಿ ನಿವಾರಿಸುವುದು, ಅತಿಸಾರದಿಂದ ಸಾವುಗಳಲ್ಲಿ ಶೇ. ೫೦ ರಷ್ಟು ಇಳಿತ, ಅತಿಸಾರ ಪ್ರಕರಣಗಳನ್ನು ಶೇ ೧೧ರಷ್ಟು ಇಳಿತ ಸಾಧಿಸುವುದು, ಜನಸಂಖ್ಯೆಯ ಶೇ ೫೦ರಷ್ಟು ಜನರಿಗೆ ಎಚ್.ಐ.ವಿ. ಏಡ್ಸ್ ಬಗ್ಗೆ ಅರಿವು ಮೂಡಿಸುವುದು. ಅಪೌಷ್ಟಿಕತೆಯ ಸಮಸ್ಯೆಯನ್ನು ನಿವಾರಿಸುವುದು, ಕಬ್ಬಿಣಾಂಶದ ಕೊರತೆಯಿಂದ ಉಂಟಾಗುವ ರಕ್ತಹೀನತೆಯನ್ನು ಶೇ. ೧೧ರಷ್ಟು ಇಳಿಸುವುದು. ರೋಗಪೀಡಿತ ಪ್ರದೇಶಗಳಲ್ಲಿ ಅಯೋಡಿನ್ ಯುಕ್ತ ಉಪ್ಪಿನ ಬಳಕೆ ಹೆಚ್ಚಿಸಲು ಕ್ರಮ, ಶಿಶುಗಳಿಗೆ ಮೊದಲ ೪-೬ ತಿಂಗಳ ಅವಧಿಯಲ್ಲಿ ಕೇವಲ ಮೊಲೆ ಹಾಲು ಉಣಿಸುವುದರ ಮತ್ತು ಸಕಾಲದಲ್ಲಿ ಪೂರಕ ಆಹಾರ ನೀಡಲಾರಂಭಿಸುವುದರ ಪ್ರಾಮುಖ್ಯತೆಯ ಅರಿತು ಮೂಡಿಸುವುದು. ರಾಜ್ಯದಲ್ಲಿ ೧೦೦೦ಕ್ಕೂ ಹೆಚ್ಚು ಹೆರಿಗೆ ಆಸ್ಪತ್ರೆಗಳನ್ನು 'ಶಿಶು ಮಿತ್ರ' ರೆಂದು ಪ್ರಮಾಣೀಕರಿಸುವುದು.

ಕರ್ನಾಟಕ ವಾರ್ತೆ

ಬೇಸಗೆಯ ದಿನ

ರೈನರ್ ಮಾರಿಯಾ ರಿಲ್ಕ್

ಓ ದೇವರೆ ಈ ಬೇಸಿಗೆಯ ಕಾಲ ಬಲು ಉಗ್ರ
ನಿನ್ನ ನೆರಳು ಸೂರ್ಯನ ಮೇಲೆ ಸೂಚಿಫಲಕವಾಗಲಿ
ತೆರೆದ ತೋಟ ಬಯಲುಗಳಲ್ಲಿ ಬೀಸಲಿ ತಣ್ಣಗೆ ಗಾಳಿ
ಹಣ್ಣುಗಳು ಇನ್ನೂ ಚನ್ನಾಗಿ ಮಾಗಲೆಂದು ಆಜ್ಞಾಪಿಸು
ಮತ್ತೆರಡು ದಿನಕೊಡು ತೆಂಕಣಗಾಳಿಗೆ ಬೀಸಲದು
ಪರಿಪೂರ್ಣತೆ ಸಾಧನೆಗಾಗಿ, ಪಡಿಸು ಆತುರ, ಅಟ್ಟು
ಕೊನೆಸವಿಯ ಸ್ನಿಗ್ಧ ದ್ರಾಕ್ಷಾರಸಕ್ಕೆ ಅದತುಂಬು
ಯಾರಿಗೆ ಮನೆಯಿಲ್ಲವೋ ಅವರು ಕಟ್ಟಲಿ ಸ್ವಂತಮನೆ
ಯಾರು ಏಕಾಂಗಿಗಳೋ ಅವರು ಇರಲಿ ಹಾಗೆ ಕೊನೆವರೆಗೆ
ಅವರು ಎದ್ದು ಓದಿ ದೀರ್ಘಪತ್ರಗಳ ಬರೆದು
ಅಶಾಂತರಾಗಿ ಚಡಪಡಿಸಿ ಸುತ್ತಲಿ ಮೇಲೂ ಕೆಳಗೂ
ಮರದಗೆರೆ ಹಾದಿಯಲಿ ಅಲೆದಾಡುತಿರಲಿ
ಆಗ ಎಲೆಗಳೆಲ್ಲವೂ ಗಾಳಿಸುಳಿಗೆ ಸಿಕ್ಕು ಹಾರಿಹೋಗಲಿ

ಮೂಲ: ರೈನರ್ ಮಾರಿಯಾ ರಿಲ್ಕ್
ಅನುವಾದ: ಕೆ.ಎನ್. ವಿಜಯಲಕ್ಷ್ಮಿ

1875ರಲ್ಲಿ ಜರ್ಮನ್ ದೇಶದ ಪ್ರೇಗ್ ನಗರದಲ್ಲಿ ರಿಲ್ಕ್ ಹುಟ್ಟಿದನು. ಮಧ್ಯಮವರ್ಗದಲ್ಲಿ ಹುಟ್ಟಿದ ಇವನನ್ನು ಈತನ ತಾಯಿ ಹೆಣ್ಣುಮಗುವಿನಂತೆ ಐದು ವರ್ಷಗಳವರೆಗೂ ಬೆಳಸಿದಳು. ಅವನ ತಂದೆ ಮಗನು ದೊಡ್ಡ ವಕೀಲನಾಗಬೇಕೆಂಬ ಕನಸು ಕಟ್ಟಿದ್ದನು. ಅದನ್ನು ಸುಳ್ಳುಮಾಡಿದ ರಿಲ್ಕ್ ಕವಿಯಾಗಿ ಅನೇಕದೇಶಗಳನ್ನು ಸುತ್ತಿದನು. ಟಾಲ್‌ಸ್ಟಾಯ್‌ನನ್ನೂ ಸಂದಿಸಿದನು. ಮುಂದೆ ಆತನ ವೈವಾಹಿಕ ಜೀವನವು ಭಗ್ನವಾಗಿ ಅನೇಕ ಹೆಣ್ಣುಗಳಿಂದಲೂ ನೆಮ್ಮದಿ ಸಿಗದ ರಿಲ್ಕ್ ಕೊನೆಗೆ ಲ್ಯುಕೇಮಿಯಾ ಕಾಯಿಲೆಗೆ ತುತ್ತಾಗಿ 1926ರಲ್ಲಿ ಮೃತಪಟ್ಟನು. ಈತನ ಕಾವ್ಯದ ನವ್ಯಧ್ವನಿಯಲ್ಲೂ ತಳಮಳವಿದೆ. ಹುಚ್ಚು ಮತ್ತು ಆತ್ಮಹತ್ಯೆ ಮನೋಭಾವಗಳ ನಡುವೆ ಕಲೆ ಅರಳುತ್ತದೆ ಎಂಬ ಆತನ ತತ್ವವನ್ನು ಕಾಣಬಹುದು. ಈತ ನೀಷೆಯ ತತ್ವಜ್ಞಾನಕ್ಕೆ ಇಂಬುಕೊಟ್ಟವನು. ರೋಡಿನ್ನಿನ ಶಿಲ್ಪಕಲೆಯನ್ನೂ ಮೆಚ್ಚಿದವನು.

ಕೇಂದ್ರ ಸಾಹಿತ್ಯ ಅಕಾದೆಮಿ ಕನ್ನಡ ಪ್ರಕಟಣೆಗಳು

ಕಾದಂಬರಿಗಳು:

❒ **ಕತ್ತಲೆಯಿಂದ ಕಗ್ಗತ್ತಲೆಗೆ:** ಪಂಜಾಬಿ ಮೂಲ: ನರೇಂದ್ರ ಪಾಲ್ ಸಿಂಗ್ ಅನುವಾದ: ಶಶಿಕಲಾ ಪಿ.	೯೦-೦೦
❒ **ನಿಶಿ ಕುಟುಂಬ:** ಬಂಗಾಳಿ ಮೂಲ: ಮನೋಜ್ ಬಸು; ಅನುವಾದ: ಮೀರಾ ಚಕ್ರವರ್ತಿ	೩೦೦-೦೦
❒ **ಆವೇಳೆ** : ಬಂಗಾಳಿ ಮೂಲ: ಬಿಮಲ್ ಕರ್, ಅನುವಾದ: ಗೀತಾ ವಿಜಯಕುಮಾರ್	೨೦೦-೦೦
❒ **ಜನುಮದ ಜೋಡಿ:** ಗುಜರಾತಿ ಮೂಲ: ಪನ್ನಾಲಾಲ್ ಪಟೇಲ್, ಅನುವಾದ: ಕೃಷ್ಣಕುಮಾರ್ ಕಲ್ಲೂರ	೯೦-೦೦
❒ **ನಾರಾಯಣರಾವ್:** ತೆಲುಗು ಮೂಲ: ಅಡಿವಿ ಬಾಪಿರಾಜು, ಅನುವಾದ: ಕೆ. ಎಸ್. ಜಾನಕಿರಾಮಯ್ಯ	೧೨೦-೦೦
❒ **ಪಾರ್ಥಿಬನ ಕನಸು:** ತಮಿಳು ಮೂಲ: ಕಲ್ಕಿ, ಅನುವಾದ: ಶೇಷನಾರಾಯಣ	೯೦-೦೦
❒ **ನಾರಿ:** ಹಿಂದಿ ಮೂಲ: ಸಿಯಾರಾಮ್ ಶರಣಗುಪ್ತ, ಅನುವಾದ: ಪಂಚಾಕ್ಷರಿ ಹಿರೇಮಠ	೫೦-೦೦
❒ **ಆರು ಬೀಘೇ ಭೂಮಿ** : ಒರಿಯಾ ಮೂಲ: ಫಕೀರ್ ಮೋಹನ, ಅನುವಾದ: ಗುರುನಾಥ ಜೋಶಿ	೮೦-೦೦
❒ **ಒಂದು ಊರಿನ ಕಥೆ:** ಮಲಯಾಳಂ ಮೂಲ: ಎಸ್.ಕೆ. ಪೊಟ್ಟೆಕ್ಕ ಅಶೋಕ ಕುಮಾರ್, ಅನುವಾದ: ಕೆ. ಕೆ. ನಾಯರ್	೩೦೦-೦೦

ಜೀವನ:

❒ **ಭಗವಾನ್ ಬುದ್ಧ** : ಮರಾಠಿ ಮೂಲ: ಧರ್ಮನಂದ ಕೋಸಂಬೀ, ಅನುವಾಧ: ಆದ್ಯ ರಂಗಾಚಾರ್ಯ	೯೦-೦೦
❒ **ಋಕ್ಸಂಹಿತಸಾರ (ಋಗ್ವೇದ ಕುರಿತು)** : ಸಂಪಾದನೆ: ಜಿ. ಎಸ್. ಚಕ್ರವರ್ತಿ	೨೫೦-೦೦
❒ **ರಾಜೇಂದ್ರ ಪ್ರಸಾದರ ಆತ್ಮಕಥೆ:** ಮೂಲ: ರಾಜೇಂದ್ರ ಪ್ರಸಾದ್, ಅನುವಾದ: ಸಿದ್ದವನಹಳ್ಳಿ ಕೃಷ್ಣಶರ್ಮ	೨೫೦-೦೦
❒ **ವಾಲ್ಮೀಕಿ ರಾಮಾಯಣ:** ಅನುವಾದ: ವಿ. ಸೀತಾರಾಮಯ್ಯ	೬೦-೦೦

ಕಾವ್ಯ:

❒ **ಕಬೀರ ವಚನಾವಳಿ:** ಹಿಂದೀ ಮೂಲ: ಕಬೀರ್ - ಸಂತಕವಿ, ಅನುವಾದ: ದ. ರಾ. ಬೇಂದ್ರೆ	೫೦-೦೦
❒ **ಕುಮಾರನ್ ಆಶಾನ್ ಮೂರು ಕವಿತೆಗಳು** ಮಲಯಾಳಂ ಮೂಲ: ಕುಮಾರನ್ ಆಶಾನ್, ಅನುವಾದ: ಟಿ. ಉಬೈದ್ ಮತ್ತು ಕಯ್ಯಾರ ಕಿಞ್ಞಣ್ಣರೈ	೪೦-೦೦
❒ **ಹುಲ್ಲಿನ ದಳಗಳು:** ಇಂಗ್ಲಿಷ್ ಮೂಲ: ವಾಲ್ಟ್‌ವಿಟಮನ್, ಅನುವಾದ: ಗೋಪಾಲಕೃಷ್ಣ ಅಡಿಗ	೬೦-೦೦
❒ **ಕನ್ನಡ ಕಾವ್ಯ ಸಂಚಯ:** ಸಂಪಾದಕರು: ರಂ. ಶ್ರೀ. ಮುಗಳಿ	೧೪೦-೦೦
❒ **ನೂರೊಂದು ಕವನ:** ಮೂಲ: ರವೀಂದ್ರನಾಥ ಟಾಗೋರ್, ಅನುವಾದ ದ. ರಾ. ಬೇಂದ್ರೆ, ನಾರಾಯಣ ಸಂಗಮ	೯೦-೦೦
❒ **ಭಗ್ನಮೂರ್ತಿ:** ಮರಾಠಿ ಮೂಲ: ಎ. ಆರ್. ದೇಶಪಾಂಡೆ ಅನಿಲ್, ಅನುವಾದ: ದ. ರಾ. ಬೇಂದ್ರೆ	೨೦-೦೦

ಭಾರತೀಯ ಸಾಹಿತ್ಯ ನಿರ್ಮಾಪಕರು ಮಾಲಿಕೆಯಲ್ಲಿ ಹೊಸ ಪ್ರಕಟಣೆಗಳು:ಕೃತಿಯೊಂದಕ್ಕೆ ೨೫/-

❒ ಅನುಪಮಾ ನಿರಂಜನ	❒ ಆಲೂರು ವೆಂಕಟ ರಾವ್	❒ ಆನಂದರಾಮ್ ಬರುವಾ
❒ ಮುದ್ದಣ	❒ ನಿರಾಲಾ	❒ ಪಮ್ಮಲ್ ಸಂಬಂಧ ಮುದಲಿಯಾರ್

ಕೇಂದ್ರ ಸಾಹಿತ್ಯ ಅಕಾದೆಮಿ, ೧೦೯ ಎ.ಡಿ.ಎ. ರಂಗಮಂದಿರ
ಜೆ. ಸಿ. ರಸ್ತೆ, ಬೆಂಗಳೂರು - ೫೬೦ ೦೦೨





ನುಡಿಚಿತ್ರ (ವ್ಯಕ್ತಿ ವಿಶೇಷ)

ಲೇಖಕರು: ಖಾದ್ರಿ ಎಸ್. ಅಚ್ಯುತನ್

ಪ್ರಕಾಶಕರು: ಭಾರತ್ ವಿದ್ಯಾಸಂಸ್ಥೆ, ಜಯನಗರ ಬೆಂಗಳೂರು - 11.

ಬೆಲೆ: 35-00ರೂ. ಮೊದಲ ಮುದ್ರಣ: 1996.

ನಾನು ಇತ್ತೀಚೆಗೆ ಓದಿದ ಅಪರೂಪದ ಪುಸ್ತಕ. ಈ ಪುಸ್ತಕದ ಮೂಲಕ ಕೆ.ಎಚ್.ರಾಮಯ್ಯ ಮತ್ತು ಬಿ. ಪುಟ್ಟಯ್ಯನವರ ಪರಿಚಯವಾಯಿತು. ಇವರಿಬ್ಬರೂ 'ಒಕ್ಕಲಿಗರ ಸಂಘ'ದಂಥ ಸಂಸ್ಥೆಯನ್ನು ಕಟ್ಟುವಾಗ ಅವರಿಗಿದ್ದ ಆದರ್ಶ ಮತ್ತು ಅನನ್ಯತೆ ಈ ಕೃತಿಯ ವಿಶೇಷ. ಇವರಿಬ್ಬರೂ ಮಹನೀಯರು ಈ ಸಂಸ್ಥೆಯನ್ನು ಕಟ್ಟುವಾಗ ನಮ್ಮ ಹಳ್ಳಿಗಾಡಿನಲ್ಲಿ ಕೃಷಿಯಲ್ಲಿ ತೊಡಗಿರುವ ಒಕ್ಕಲಿಗ ಸಮುದಾಯದ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕವಾಗಿ ಹಿಂದುಳಿದಿರುವಿಕೆಯನ್ನು ದೃಷ್ಟಿಯಲ್ಲಿಟ್ಟುಕೊಂಡಿದ್ದರು. ಇಲ್ಲಿಯ ವೈವಿಧ್ಯತೆಯೆಂದರೆ ಇದಕ್ಕಾಗಿ ದಿವಾನ್ ಮಾಧವರಾಯರಂಥವರನ್ನು ಆಗಿನ ಮಹಾರಾಜರಾದ ಕಂಠೀರವ ನರಸರಾಜ ಅರಸ್ ಹಾಗೂ ಮಿರ್ಜಾ ಇಸ್ಮಾಯಿಲ್ ಅಂಥವರ ಸಹಕಾರವನ್ನು ಪಡೆದದ್ದು.

ಕೆ. ಎಚ್. ರಾಮಯ್ಯನವರು ಬೆಂಗಳೂರು ಜಿಲ್ಲೆಯ ದೊಡ್ಡಬಳ್ಳಾಪುರ ತಾಲ್ಲೂಕಿನ ಕಲ್ಲುದೇವರ ಹಳ್ಳಿಯವರು. ಇವರ ತಂದೆ ಚಿಕ್ಕಣ್ಣಗೌಡರು ದೊಡ್ಡ ಕುಟುಂಬದವರು. ಅವರ ಮಗ ಹನುಮಯ್ಯ, ಕಷ್ಟಪಟ್ಟು ಓದಿ ಮೇಸ್ತ್ರಿಯಾದರು. ಹನುಮಯ್ಯನವರ ಮಗ ಕೆ. ಎಚ್. ರಾಮಯ್ಯ ಲಂಡನ್ ಮಿಷನ್ ಶಾಲೆಯಲ್ಲಿ ಪ್ರೌಢಶಿಕ್ಷಣ, ಮದ್ರಾಸಿನ ಕ್ರಿಶ್ಚಿಯನ್ ಕಾಲೇಜಿನಲ್ಲಿ ಬಿ. ಎ. ವ್ಯಾಸಂಗ, ಕುಟುಂಬದ ತೊಂದರೆಯಿಂದ ಖಾಸಗಿಯಾಗಿ ಬಿ. ಎಲ್. ಮುಗಿಸಿದರು. ಯಾಕೆಂದರೆ ಹದಿಮೂರನೆಯ ವಯಸ್ಸಿನಲ್ಲಿಯೇ ತಂದೆಯನ್ನು ಕಳಕೊಂಡಿದ್ದರು.

ಗ್ರಾಮಾಂತರ ಪ್ರದೇಶದ ರೈತರ ಶಿಕ್ಷಣಕ್ಕೆ ಸಂಬಂಧಿಸಿದಂತೆ ಯೋಜನೆಗಳನ್ನ ರೂಪಿಸಿದರು. ಸಂಸ್ಥೆ ಕಟ್ಟಿದರು. ಇಂಗ್ಲೆಂಡಿಗೆ ಹೋಗಿ ಬ್ಯಾರಿಸ್ಟರ್ ಪದವಿಯನ್ನು 1917ರಲ್ಲಿ ಪಡೆದು ಬಂದರು. ಜೀವನದ ಮುಖ್ಯ ಮೌಲ್ಯಗಳನ್ನು ರೂಢಿಸಿಕೊಂಡರು. ಇದೇ ಸಮಯದಲ್ಲಿ ಸರ್. ಎಂ. ವಿಶ್ವೇಶ್ವರಯ್ಯನವರು ದಿವಾನರಾಗಿದ್ದರು. ರಾಮಯ್ಯನವರನ್ನ ಗುರ್ತಿಸಿ ಬೆಳೆಸಿದರು. ನಾನಾ ರೀತಿಯ ಪ್ರಮುಖ ಹುದ್ದೆಗಳಲ್ಲಿ ಅಧಿಕಾರಿಯಾಗಿ ದುಡಿದರು, ಬೆಳೆದರು. ಆಗಿನ ಕಾಲಕ್ಕೆ ಶಿಕ್ಷಣ ಕ್ಷೇತ್ರದಲ್ಲಿ ತುಂಬ ಮಹತ್ವಪೂರ್ಣ ವ್ಯಕ್ತಿಯಾದ ಸಿ. ಆರ್. ರೆಡ್ಡಿಯವರ ಸಂಪರ್ಕದಿಂದ

ವ್ಯಕ್ತಿತ್ವ ರೂಪಿಸಿಕೊಂಡರು. ಈ ಕೃತಿಯಲ್ಲಿ ಕೆ. ಎಚ್. ರಾಮಯ್ಯನವರು ನಿಧನರಾದಾಗ ಸಿ. ಆರ್. ರೆಡ್ಡಿಯವರ ಶ್ರದ್ಧಾಂಜಲಿ ಭಾಷಣ ಅರ್ಥಪೂರ್ಣವಾಗಿದೆ. ಆದರೆ ಈ ಭಾಷಣವನ್ನು ಲೇಖಕರು ಕನ್ನಡಕ್ಕೆ ಅನುವಾದಿಸಿ ಪ್ರಕಟಿಸಿದ್ದರೆ ಚೆನ್ನಾಗಿತ್ತು. ಕರ್ನಾಟಕದ ರಾಜಕಾರಣದಲ್ಲಿ ಹೆಸರು ಮಾಡಿದ ಶ್ರೀಮತಿ ಯಶೋಧರಮ್ಮ ದಾಸಪ್ಪನವರು ರಾಮಯ್ಯನವರ ಮಗಳು. ಇಂಥ ಅಪೂರ್ವ ವ್ಯಕ್ತಿ ರಾಮಯ್ಯನವರು 1933ರಲ್ಲಿ ನಿಧನಹೊಂದಿದರು. ಆಗ ಅವರಿಗೆ ಕೇವಲ 54 ವರ್ಷ ಮಾತ್ರವಾಗಿತ್ತು. ರಾಮಯ್ಯನವರನ್ನು ಮುಂದಿನ ದಿವಾನರನ್ನಾಗಿ ಮಾಡುವ ಉದ್ದೇಶವಿತ್ತಂತೆ. ಆದರೆ 1906ರಲ್ಲಿ ಒಕ್ಕಲಿಗರ ಸಂಘವನ್ನು ಕಟ್ಟಿ ಬೆಂಗಳೂರಿನಲ್ಲಿ ಕಟ್ಟಿದಾಗ ಅದರ ಹಿಂದಿದ್ದ ಘನ ಉದ್ದೇಶ ಮತ್ತು ಆದರ್ಶಗಳನ್ನ ಇಂದಿನ ಪದಾಧಿಕಾರಿಗಳು ಅರಿತರೆ ಸೂಕ್ತ ಅನ್ನಿಸುತ್ತದೆ.

ಕೆ. ಎಚ್. ರಾಮಯ್ಯನವರ ಜೊತೆ ಸಹಾಯಕರಾಗಿ ಈ ಸಂಸ್ಥೆಯನ್ನು ಕಟ್ಟಿದವರೆಂದರೆ ಬಿ. ಪುಟ್ಟಯ್ಯನವರು. ಇವರು ಬೆಂಗಳೂರಿನ ಸರ್ಕಾರಿ ಮುದ್ರಣಾಲಯದ ಮುಖ್ಯಸ್ಥರಾಗಿದ್ದವರು. ಇವರ ಸೇವೆಯನ್ನು ಸರ್ಕಾರದಿಂದ ಒಕ್ಕಲಿಗರ ಸಂಘ ಕಟ್ಟುವುದಕ್ಕೆ ಎರವಲು ಪಡೆದದ್ದು ಕುತೂಹಲಕಾರಿಯಾದದ್ದು. ಬೆಂಗಳೂರಿನ ಒಕ್ಕಲಿಗರ ಸಂಘದ ಕಟ್ಟಡ, ಮುದ್ರಣಾಲಯ ಹಾಗೂ ಒಕ್ಕಲಿಗರ ಪತ್ರಿಕೆಯ ಉದಯಕ್ಕೆ ಕಾರಣರಾದರು. ಇದರ ನಂತರ ರಾಮಯ್ಯನವರು ನಿಮ್ನ ವರ್ಗಕ್ಕೆ ಅಧಿಕಾರಿಯಾಗಿದ್ದಾಗ ಹರಿಜನರ ಬೆಳವಣಿಗೆಗಾಗಿ 'ಆದಿ ಕರ್ನಾಟಕ ಸಂಸ್ಥೆ' ಪ್ರಾರಂಭಿಸಿದರು. ಈ ಕೃತಿಯನ್ನು ಓದುವಾಗ ನಾನು ಎಷ್ಟೋ ವರ್ಷಗಳಿಂದ ಗೌರವಿಸುತ್ತಿದ್ದ ಪ್ರಸಿದ್ಧ ಭೂವಿಜ್ಞಾನಿ ಡಾ. ಬಿ.ಪಿ. ರಾಧಾಕೃಷ್ಣರವರು ಬಿ. ಪುಟ್ಟಯ್ಯನವರ ಮಗ ಎಂದು ತಿಳಿದು ಖುಷಿಗೊಂಡೆ. ಪುಟ್ಟಯ್ಯನವರು ಬಡತನದ ಅನುಭವವನ್ನು ಕಂಡವರು. 1879ರಲ್ಲಿ ಹುಟ್ಟಿದ್ದು, ಸರ್ಕಾರದ ಮತ್ತು ಖಾಸಗಿಯ ನಾನಾ ಸಂಸ್ಥೆಗಳನ್ನು ಕಟ್ಟಿ ಬೆಳೆಸಿದವರು. ಇವರ ಸೋದರಿ ಇಂದಿರಮ್ಮನವರು 1960ರಲ್ಲಿ ಬೆಂಗಳೂರಿನ ಮೊದಲ ಮೇಯರ್ ಆದದ್ದು ವಿಶೇಷ.

ಪುಟ್ಟಯ್ಯನವರು ಸರ್. ಪುಟ್ಟಣ್ಣ ಶೆಟ್ಟಿಯವರ ನಿಕಟಸಂಪರ್ಕದಿಂದ ಬೆಂಗಳೂರನ್ನು ಕಟ್ಟಿದವರು. ತಂದೆಯವರ ಮೂಲಕ ಬ್ರಹ್ಮಸಮಾಜದ ತಾತ್ವಿಕ ಚಿಂತನೆಗಳನ್ನು ಅಪ್ಪಿಕೊಂಡು ದುಡಿದರು. ತಮ್ಮ ಕಷ್ಟಗಳ ಸಮಯದಲ್ಲಿ ಜಿ. ಪಿ. ರಾಜರತ್ನಂರವರ 'ಬುದ್ಧವಚನಾಮೃತ' ದಿಂದ ನೆಮ್ಮದಿಯನ್ನು ಪಡೆದರು. ರಾಜರತ್ನಂರವರ ಜೊತೆ ನಿಕಟ ಸಂಪರ್ಕ ಹೊಂದಿದರು. ವೈಯಕ್ತಿಕ ಜೀವನವನ್ನು ಅಚ್ಚುಕಟ್ಟಾಗಿ ರೂಪಿಸಿಕೊಂಡು ಬೆಳೆದವರು. ಡಿ. ವಿ. ಜಿ. ಯವರು 'ಎಲ್ಲವೂ ಸೊಗಸು' ಎಂದು ಪುಟ್ಟಯ್ಯನವರನ್ನು ಕುರಿತು ಬರೆದರು. ಇವರು ತಮ್ಮ 65ನೆಯ ವಯಸ್ಸಿನಲ್ಲಿ 1944ರಲ್ಲಿ ನಿಧನರಾದರು. ಅದರಲ್ಲೂ ರಬಕವಿ ಸಾಹಿತ್ಯ ಸಮ್ಮೇಳನಕ್ಕೆ ಹೋಗಿದ್ದಾಗ, ಪುಟ್ಟಯ್ಯನವರ ಸಾವಿನ ಬಗ್ಗೆ ಮಾಸ್ತಿ ವೆಂಕಟೇಶ ಅಯ್ಯಂಗಾರ್‌ರವರು ತಮ್ಮ 'ಭಾವ'ದಲ್ಲಿ ವಿವರಿಸಿದ್ದಾರೆ.

ನಾನಾ ಕಾರಣಗಳಿಗಾಗಿ ಇದು ಮಹತ್ವಪೂರ್ಣವಾದ ಕೃತಿ. ಆದರೆ ಮತ್ತಷ್ಟು ಅಚ್ಚುಕಟ್ಟುತನವನ್ನು ತಂದಿದ್ದರೆ ಪುಸ್ತಕ ಎದ್ದು ಕಾಣುತ್ತಿತ್ತು. ಇದನ್ನು ಮುಂದಿನ ಮುದ್ರಣದಲ್ಲಿ ಸರಿಪಡಿಸಿಕೊಳ್ಳಬಹುದು. ಯಾಕೆಂದರೆ ಇದರ ಲೇಖಕರು ಅಭಿರುಚಿ ಇರುವಂಥವರು.

-ಸಿದ್ಧಾರ್ಥ

ದುರ್ಬಲ ವರ್ಗದವರಿಗೆ ವಸತಿ

ದುರ್ಬಲ ವರ್ಗದವರಿಗೆ ವಿವಿಧ ಯೋಜನೆಗಳನ್ವಯ ಒಂದು ಲಕ್ಷ ಮನೆಗಳ ನಿರ್ಮಾಣ ಫಲಾನುಭವಿಗಳ ಆಯ್ಕೆಗೆ ವಿಶೇಷ ಸಮೀಕ್ಷೆ.

ಬಡವರಿಗೆ ಮನೆ ಒದಗಿಸುವದು ರಾಜ್ಯ ಸರ್ಕಾರದ ಒಂದು ಪ್ರಮುಖ ಜವಾಬ್ದಾರಿ. ಆದರೆ ಕಳೆದೆರಡು ವರ್ಷಗಳಲ್ಲಿ ಕಾರ್ಯರೂಪಕ್ಕೆ ತರಲು ಸಾಧ್ಯವಾಗದಂತಹ ಗುರಿಗಳನ್ನು ನಿಗಧಿಪಡಿಸಲಾಗಿತ್ತು. ಕಳೆದ 3 ವರ್ಷಗಳಲ್ಲಿ ಆಶ್ರಯ ಯೋಜನೆಯ ಅಡಿಯಲ್ಲಿ 77,856 ಮನೆಗಳನ್ನೂ ಡಾ॥ ಅಂಬೇಡ್ಕರ್ ಗೃಹ ನಿರ್ಮಾಣ ಯೋಜನೆಯ ಅಡಿಯಲ್ಲಿ 22,402 ಮನೆಗಳನ್ನೂ ಮತ್ತು ಇಂದಿರಾ ಅವಾಸ್ ಯೋಜನೆಯ ಅಡಿಯಲ್ಲಿ 23,148 ಮನೆಗಳನ್ನು ಕಟ್ಟಲಾಗಿದೆ. ವಾಸ್ತವಿಕವಾಗಿ ಕಾರ್ಯ ರೂಪಕ್ಕೆ ತರಬಹುದಾದಂತಹ ಗುರಿಯನ್ನು ಸರ್ಕಾರ ಹಾಕಿಕೊಳ್ಳುತ್ತದೆ. ಮುಂಬರುವ ವರ್ಷದಲ್ಲಿ, ಆಶ್ರಯ (60,000) ಅಂಬೇಡ್ಕರ್ ಗೃಹ ನಿರ್ಮಾಣ ಯೋಜನೆ (25,000) ಮತ್ತು ಇಂದಿರಾ ವಾಸ (15,000) ಯೋಜನೆಗಳ ಅಡಿಯಲ್ಲಿ ಒಟ್ಟು 1 ಲಕ್ಷ ಮನೆಗಳನ್ನು ಕಟ್ಟಲಾಗುವುದು. 1995-96 ಕೇಂದ್ರ ಬಜೆಟ್ಟನಲ್ಲಿ ಭಾರತ ಸರ್ಕಾರ ಪ್ರಕಟಿಸಿದಂತೆ ಹೆಚ್ಚಿನ ಹಣ ದೊರೆತಲ್ಲಿ ಇಂದಿರಾ ಆವಾಸ್ ಯೋಜನೆಯ ಅಡಿಯಲ್ಲಿ ಮನೆಗಳ ನಿರ್ಮಾಣದ ಗುರಿಯನ್ನು ಅಷ್ಟರಮಟ್ಟಿಗೆ ಹೆಚ್ಚಿಸಲಾಗುವುದು. ಮನೆ ಇಲ್ಲದವರಿಗೆ ನಿವೇಶನಗಳನ್ನು ಮತ್ತು ಮನೆಗಳನ್ನು ಒದಗಿಸುವಲ್ಲಿ ಖಾಸಗಿ ವಲಯಗಳೂ ಪಾಲ್ಗೊಳ್ಳುವಂತೆ ಅನುವು ಮಾಡಿಕೊಡಲು ಬೂಸುದಾರಣಾ ಕಾಯ್ದೆಗೆ ಅವಶ್ಯಕ ತಿದ್ದುಪಡಿ.

ಕರ್ನಾಟಕ ವಾರ್ತೆ

ಒಳನೋಟ



ಹಲವು ದಿನಗಳಾದುವು ನಿಮಗೆ ಪತ್ರ ಬರೆಯದೆ. ಕ್ಷಮಿಸಿ 'ಶೂದ್ರ' ಪತ್ರಿಕೆ ಸುಂದರವಿನ್ಯಾಸದೊಂದಿಗೆ ಹೊರಬಂದಿದೆ. ಅಭಿನಂದನೆಗಳು. 'ಶೂದ್ರ' ಎಂದೂ ನಿಲ್ಲಿಸಬೇಡಿ. ಕರ್ನಾಟಕದ ಸಾಹಿತ್ಯ-ಸಾಂಸ್ಕೃತಿಕ ಕ್ಷೇತ್ರದಲ್ಲಿ 'ಶೂದ್ರ' ಮಹತ್ವದ ಕೆಲಸ ಮಾಡಿದೆ.

ನನ್ನ ಲೇಖನದ ಎರಡನೆಯ ಭಾಗ ಪ್ರಕಟಣೆಗೆ ನಾನೀಗ ಇಲ್ಲಿ ಕಳಿಸುತ್ತಿರುವ ಲೇಖನ ತೆಕ್ಕೊಳ್ಳಿ. ನಾನು ಹಿಂದೆ ಕಳಿಸಿದ ಲೇಖನ ಎರಡನೆಯ ಭಾಗದಲ್ಲಿ ಕೆಲವು ದೋಷಗಳು ತಲೆ ಹಾಕಿವೆ. ಅವನ್ನು ಸರಿಪಡಿಸಲು ಪ್ರಯತ್ನಿಸಿದ್ದೇನೆ. ಈ ಲೇಖನ ಅಕ್ಷರ ಪ್ರಕಾಶನದ ನನ್ನ 'ಒಂಟಿ ಧ್ವನಿ' ಪುಸ್ತಕದಲ್ಲಿ ಮುಂದೆ ಬರುತ್ತದೆ. (ಆ ಪುಸ್ತಕ ನನ್ನ ಲೇಖನಗಳ ಸಂಕಲನ) ನೀವು ಹೇಳಿದ ಲೇಖನ ಬರೆಯುತ್ತೇನೆ.

-ಡಾ|| ಮುರಾರಿ ಬಲ್ಲಾಳ
ಉಡುಪಿ

ಶೂದ್ರದ ಸಂಚಿಕೆಯ ಪ್ರತಿಗಳು ತಲುಪಿದವು; ಅಂದವಾಗಿ ಪ್ರಕಟವಾಗಿವೆ. ನಿಮಗೆ ಕೃತಜ್ಞತೆಗಳು.

-ಜಿ. ರಾಜಶೇಖರ್
ಉಡುಪಿ

ಶ್ರೀನಿವಾಸ್,

ಇದು ಇದೇ ದಿನ ನಾನು ಬರೆದು ಅಂಚೆಗೆ ಹಾಕಿದ ಇನ್ನೊಂದು ಕಾರ್ಡಿನ ಮುಂದುವರಿಕೆ:

ಶೂದ್ರದಲ್ಲಿನ ಒಂದೆರಡು ತಪ್ಪುಗಳನ್ನು ತೋರಿಸಲೆಂದು:

೧. 'ಸಂಪುಟ ೨೫, ಸಂಚಿಕೆ ೮, ೯'ರ ಸುಮತೀಂದ್ರ ನಾಡಿಗರ ಲೇಖನದಲ್ಲಿ ಥೋರೋ ವಾಲ್ಡೆನ್' ಅನುವಾದಿಸಿದು ವಿ.ಸೀ. ಎಂದಿದೆ. ಅದನ್ನು ಅನುವಾದಿಸಿರುವವರು ದೇವುಡು ಅವರು. ಪ್ರಕಟಣೆ: ಸಾಹಿತ್ಯ ಅಕಾಡೆಮಿ, ಹೊಸದಿಲ್ಲಿ.

೨. ಅಕ್ಟೋಬರ್-ನವೆಂಬರ್-ಡಿಸೆಂಬರ್ ೧೯೯೮ರ ಸಂಚಿಕೆ, ಪುಟ ೭೫ ರಾಜೇಶ್ವರಿ ಬಿ. ಎಂ. ಶ್ರೀ ಅವರ ಮಗಳಲ್ಲ. ಶ್ರೀ ಅವರ ತಮ್ಮ ಬಿ. ಎಂ. ಶಿವರಾಮಯ್ಯನವರ ಮೊಮ್ಮಗಳು.

-ಶಾ. ಬಾಲುರಾವ್
ದೆಹಲಿ

ಹೇಗಿದ್ದೀರಿ? 'ಶೂದ್ರ' ನಿನ್ನೆ ಬಂತು. ಇದೇ ಸಂಚಿಕೆಯ ಸ್ವರೂಪವನ್ನು ನೋಡಿ ಮೆಚ್ಚಿಗೆಯಾಯಿತು. ಲೇಖನಗಳನ್ನು ಮತ್ತು ಕವನಗಳನ್ನು ಓದುವಾಗ ನಿಮ್ಮ ಮಾತುಗಳೇ ನನಗೆ ನೆನಪಿಗೆ ಬರುತ್ತಿದ್ದುವು. ಕೆಲವು ತಿಂಗಳ ಹಿಂದೆ ನಿಮ್ಮನ್ನು ನೋಡಲು ಮನೆಗೆ ಬಂದಾಗ ಸುಮಾರು ಎರಡು ತಾಸು ಏನೇನೋ ಚರ್ಚಿಸಿದ್ದೆವು. ಆಗ ಜಾಗೃತ ಸಮಾವೇಶವನ್ನು ಕುರಿತಂತೆ ಮಾತಾಡಿದ್ದೆವು. ಯಾಕೆಂದರೆ ಜಾಗೃತ ಸಮಾವೇಶಕ್ಕೆ ನಾನು ಗೆಳೆಯರೊಂದಿಗೆ ವಿಜಾಪುರದಿಂದ ಬಂದಿದ್ದೆ. ಅದು ಎಂಥ ಸ್ಮರಣೀಯ ಕಾರ್ಯಕ್ರಮವಾಗಿತ್ತು.

ಶೂದ್ರರವರೆ, ಈ ಬಾರಿ ಸಣ್ಣ ಪ್ರಮಾಣದಲ್ಲಿಯಾದರೂ ಒಂದು ಸಮಾವೇಶವನ್ನು ಕನಕಪುರದಲ್ಲಿ ನಡೆಯುವ ಸಮ್ಮೇಳನದ ಸಮಯಕ್ಕೆ ಯಾಕೆ ಮಾಡಬಾರದು. ಯೋಚಿಸಿನೋಡಿ ನಿಮ್ಮ ಗೆಳೆಯರ ಜೊತೆ.

-ಬಸವರಾಜ ಹೀರೇಮಠ,
ವಿಜಾಪುರ

ಬಹಳ ದಿವಸಗಳ ನಂತರ 'ಶೂದ್ರ' ಬಂತು. ಓದಿ ಸಂತೋಷವಾಯಿತು. ಇಷ್ಟು ದಿವಸಗಳಾದರೂ ಬಂದಿಲ್ಲವಲ್ಲ ಎಂಬ ಬೇಸರವನ್ನು ಒಟ್ಟು ಸಂಚಿಕೆಯ ಗುಣಮಟ್ಟ ಕಿತ್ತಾಕಿದೆ. 'ಗಳಿಗೆ ಆರಗಳಿಗೆ' ಸೂಫಿ ಕವಿ ರೂಮಿಯ ಈ ಅನುವಾದವನ್ನು ಡಿ. ಆರ್. ನಾಗರಾಜ, ತನಗೋಸ್ಕರ ಅನುವಾದಿಸಿ ಕೊಂಡಂತೆ ಎಂಬ ಭಾವನೆ ಮೂಡುತ್ತದೆ. ಪ್ರೊ. ಬಿ. ಎ. ಶ್ರೀಧರರವರ ಸಮೂಹ ಮಾಧ್ಯಮಗಳು ಮತ್ತು ದಲಿತರು ಎಂಬ ಲೇಖನ ಡಾ. ಕೆ. ಮರುಳಸಿದ್ದಪ್ಪನವರ ನಿಖಿಲ್ ಚಕ್ರವರ್ತಿಯವರನ್ನು ಕುರಿತಂತೆ ನೆನಪು ಚೆನ್ನಾಗಿದೆ, ಹಾಗೆ ಇತ್ತೀಚಿನ ವರ್ಷಗಳಲ್ಲಿ ನನಗೆ ವಿಮರ್ಶೆಯಲ್ಲಿ ತುಂಬ ಪ್ರಿಯರಾದ ಜಿ. ರಾಜಶೇಖರ್‌ರವರ ಪದ್ಯ ಒಂದರ ಕುರಿತು ಭಿನ್ನಮತ ಲೇಖನವನ್ನು ಖುಷಿಯಿಂದ ಓದಿಕೊಂಡೆ.

ಇದೇ ಸಂಚಿಕೆಯಲ್ಲಿ 'ಪಶ್ಚಿಮ ಏಷ್ಯಾದಲ್ಲಿ ಇಸ್ರೇಲ್' ಲೇಖನ ಮಾಹಿತಿಯ ದೃಷ್ಟಿಯಿಂದ

ಮಹತ್ವಪೂರ್ಣವಾದದ್ದು, ನಿಮ್ಮ ಕನಸಿಗೊಂದು ಕಣ್ಣು ಹಾಗೂ ಕಾರಂತರು ಸಾವಿನಾಚೆಗೆ ಲೇಖನಗಳು ಆಪ್ತವಾಗಿವೆ. ಶೂದ್ರ ಹೀಗೆಯೇ ಚೆನ್ನಾಗಿ ಬರಲಿ. ಶೂದ್ರ ವಿಶೇಷಾಂಕಕ್ಕೆ ಕಾಯುವಂತಿರಲಿ.

-ಶ್ರೀಕಾಂತ್
ಶಿವಮೊಗ್ಗ

'ಶೂದ್ರ' ಬಂತಪ್ಪ. ಮೊದಲಿಗೆ ನಂದಲಾಲ್ ಬೋಸ್‌ರವರ ಮಿನಿಯೇಚರ್ ಚಿತ್ರ ನನ್ನನ್ನು ಆಕರ್ಷಿಸಿತು. ನಂತರ ಸಂಚಿಕೆಯ ಒಳಗೆ ಲೇಖನಗಳನ್ನು ಹಾಗೂ ಕವನಗಳನ್ನು ಓದಿಕೊಳ್ಳುವಾಗ ಎಷ್ಟೊಂದು ನನ್ನ ಮನಸ್ಸಿಗೆ ಹತ್ತಿರವಾಗಿವೆ ಅನ್ನಿಸಿತು. ಒಟ್ಟು ಸಂಚಿಕೆಯನ್ನು ಕುರಿತು ದೀರ್ಘವಾದ ಪತ್ರ ಬರೆಯುವೆ. ಕೊನೆಗೆ ಅದನ್ನು ಎಡಿಟ್ ಮಾಡಲಾಗದೆ ಇವನೇನು ಇಷ್ಟು ದೀರ್ಘವಾಗಿ ಬರೆದಿದ್ದಾನೆ ಎಂಬ ಸಿಡುಕಿನಿಂದ ಕಸದ ಬುಟ್ಟಿಯಲ್ಲಿ ಹಾಕಬಹುದು. ಭಯಪಡಬೇಡಿ, ನಿಮ್ಮ ತಾಳ್ಮೆಯನ್ನು ಪರೀಕ್ಷಿಸಲು ಹೋಗುವುದಿಲ್ಲ.

-ಸೂರ್ಯನಾರಾಯಣ
ಚಿಕ್ಕಮಗಳೂರು

ಶ್ರೀನಿವಾಸ್,

ನನ್ನ ಒಂದೆರಡು ಕವನ ಕಳಿಸುತ್ತೇನೆ. ಸೂಕ್ತವಾದ್ರೆ ಬಳಸಿಕೊಳ್ಳಿರಿ. ಈಚೆಗೆ ಓಡಾಟಗಳಿಂದ ಹೆಚ್ಚಾಗಿ ಬರೆಯಲಾಗ್ತಿಲ್ಲ. ಪತ್ರಿಕೆ ಚೆನ್ನಾಗಿ ಬರುತ್ತಿದೆ. ದರ್ಗಾರವರ ಕವನ ಹಾಗು ಸುಜಾತಕುಮುಟರ ಕವಿತೆ ನಂಗೆ ಬಹು ಇಷ್ಟವಾದವು. ಹಾಗೆ ತಿಂಗಳ ಕವನ ಸಹ.

-ಡಿ.ಬಿ. ರಜಿಯಾ
ಸುರತ್ಕಲ್

ಶೂದ್ರ,

ನಿಮ್ಮ ಪತ್ರಿಕೆ ಬಂತು. ಜಿ. ರಾಜಶೇಖರ್ ಅವರ ಮಾರ್ಚ್ ೫, ೧೯೯೯ ಲೇಖನ ಓದಿ ತುಂಬಾ ಖುಷಿಯಾಯಿತು. ಅನಂತಮೂರ್ತಿಯಂಥ ಪವಿತ್ರ ಗೋವಿನ ವಿಮರ್ಶೆಮಾಡುವ ರಾಜಶೇಖರ್‌ರ ಎದೆಗಾರಿಕೆಯನ್ನು ಪ್ರಕಟಿಸುವ ನಿಮ್ಮ ಧೈರ್ಯವನ್ನು ಮೆಚ್ಚಿದೆ. ಮುಖ್ಯವಾಗಿ ನನಗೆ ಇಷ್ಟವಾದದ್ದು ರಾಜಶೇಖರ್ ಅವರ ಸೊಗಸಾದ ವಿಷಯ ನಿರೂಪಣೆ. ಇಂದೊಂದು ಸೃಜನಶೀಲ ಲೇಖನ.

ನೀವು ಹೇಗಿದ್ದೀರಿ? ಲಂಕೇಶರಿಂದ ದೂರವಾದ ಮೇಲೆ ನೀವು ನನ್ನಿಂದಲೂ ದೂರವಾದಂತೆ ನನಗನಿಸಿ ಬಿಟ್ಟಿದೆ. ಅನಂತಮೂರ್ತಿಯವರ ಅಶ್ಲೀಲ ಜೀವನ (ಆರ್ಥಿಕ, ಸಾಮಾಜಿಕ) ಹೇಸಿಗೆ ತರಿಸಿದೆ. ಪಾಪ, ಡಿ.ಆರ್.ನ ಕೂಡ ಅವರು ತಮ್ಮ ಹಾದಿಗೇ ಎಳೆದುಕೊಂಡರು. ಡಿ.ಆರ್.ಗೆ ಏಕೆ ಬೇಕಾಗಿತ್ತೋ ಏನೋ... ಮಾತೆತ್ತಿದರೆ ಚಿಕಾಗೋ ನವವಸಾಹತುಶಾಹಿ ಎಂದರೆ ಇನ್ನೇನು? ಇವೆಲ್ಲದರ ನಡುವೆ ನಾನು ಮೂಕನಾಗಿಬಿಟ್ಟಿದ್ದೇನೆ.

-ತಿರುಮಲೇಶ್ ಕೆ. ವಿ.
ಹೈದರಾಬಾದ್

ಶಾಂತಿ ಪ್ರೇಮ ಸಹನೆ-ಸಹಬಾಳ್ವೆ
ಇದು ನಮ್ಮ ಮತವಾಗಲಿ

ದ್ವೇಷವನ್ನು ವಿರೋಧಿಸಿ ಮತೀಯ ಅಂದಾಭಿಮಾನವನ್ನು ದೂರ ಮಾಡಿ ಮತಭ್ರಾಂತಿಯನ್ನು ತಿರಸ್ಕರಿಸಿ ನಮ್ಮ ರಾಷ್ಟ್ರದ ಸಂದ ಜಾತ್ಯಾತೀತ ಹಂದರವನ್ನು ವಿಚ್ಛಿದ್ರಕಾರಕ ಶಕ್ತಿಗಳು ಹಾಳು ಮಾಡಲು ಎಡೆಮಾಡಬೇಡಿ. ಭಾರತದ ಒಗ್ಗಟ್ಟು ಹಾಳಾದರೆ ರಾಷ್ಟ್ರ ಶಕ್ತಿ ಕುಂದುತ್ತದೆ. ಭಾರತ ಅಶಕ್ತರಾಗಲು ನಾವೆಂದಿಗೂ ಅವಕಾಶ ನೀಡಬಾರದು.

ಶತಶತಮಾನಗಳಿಂದ ಭಾರತದ ಪವಿತ್ರ ನೆಲದಲ್ಲಿ ವಿವಿಧ ಜನಾಂಗ, ಜಾತಿ, ಸಂಸ್ಕೃತಿಗಳು ಒಟ್ಟಿಗೆ ಅರಳಿವೆ. ಬಾಳಿ ಬದುಕಿದ ರಾಷ್ಟ್ರದ ಸಮಗ್ರ ಪ್ರಗತಿಗೆ ತಮ್ಮ ಕೊಡುಗೆಯನ್ನು ನೀಡಿ, ದೇಶಕ್ಕೆ ವಿಶ್ವದಲ್ಲಿಯೇ ಪರಿಸಾಟಿಯಿಲ್ಲದ ಅದ್ವಿತೀಯ ಸ್ಥಾನವನ್ನು ಗಳಿಸಿಕೊಟ್ಟಿವೆ.

ನಮ್ಮ ರಾಷ್ಟ್ರದ ಜಾತ್ಯಾತೀತ ತಳಹದಿ ಅಭದ್ರವಾಗುತ್ತಿದೆ. ಮತೀಯ ದ್ವೇಷಾಸೂಯೆಗಳಿಂದ ನಮ್ಮ ಪ್ರಗತಿ ಕುಂಠಿತವಾಗಿ ಆರ್ಥಿಕ ವಿಕಾಸ ಅಸ್ತವ್ಯಸ್ತವಾಗುವುದಕ್ಕೆ ಅವಕಾಶ ಮಾಡಿಕೊಡುವುದು ಸರಿಯೆ? ವಿಮರ್ಶಿಸಿ ನೋಡಿ.

ನಮ್ಮ ರಾಜ್ಯಾಂಗದಲ್ಲಿ ಅಳವಡಿಸಿರುವ ಪವಿತ್ರವಾದ ಜಾತ್ಯಾತೀತ ಆದೇಶಗಳಿಗೆ ಕಳಂಕ ಆಗುವುದು ನ್ಯಾಯವೇ? ವಿಚಾರ ಮಾಡಿ.

ರಾಷ್ಟ್ರದ ಶಾಂತಿ ಮತ್ತು ಪ್ರಗತಿಗಾಗಿ ಒಮ್ಮತದಿಂದ ಒಂದುಗೂಡಿ ಕೋಮು ಸೌಹಾರ್ದದ ಕಾರ್ಯಕ್ರಮಗಳಲ್ಲಿ ಭಾಗವಹಿಸಿ.

ಮತೀಯ ಮನೋವಿಕಾರಗಳನ್ನು ಕಿತ್ತೊಗೆದು ಒಗ್ಗಟ್ಟು-ಒಮ್ಮನಸ್ಸಿನಿಂದ ತಲೆ ಎತ್ತಿ ನಿಲ್ಲೋಣ "ವಿಶ್ವದ ಎಲ್ಲಾ ರಾಷ್ಟ್ರಗಳ ಎಲ್ಲ ಜನಾಂಗಗಳ ತಿರಸ್ಕೃತಗೊಂಡವರಿಗೆ ಮತ್ತು ನಿರಾಶ್ರಿತರಿಗೆ ಆಶ್ರಯ ನೀಡಿದ ಪವಿತ್ರ ರಾಷ್ಟ್ರ ನನ್ನದೆಂಬ ಹೆಮ್ಮೆ ಮತ್ತು ಅಭಿಮತ ನನ್ನದು"- ಎಂಬ ಸ್ವಾಮಿ ವಿವೇಕಾನಂದರ ವಾಕ್ಯವನ್ನು ನಾವೆಲ್ಲರೂ ಪುನರುಚ್ಚರಿಸೋಣ.

ಕರ್ನಾಟಕ ವಾರ್ತೆ

L / NP / KRNU / 72, No. M (2) PRB 211 / 73-74

ನೂರು ಮಂದಿ ಮನುಷ್ಯರು

ಒಮ್ಮೆ ನೂರು ಮಂದಿ ಮನುಷ್ಯರು ಸಿಕ್ಕಿಬಿದ್ದರು
ಒಂದು ದ್ವೀಪದಲ್ಲಿ. ಮೊದಲು ಅವರು ಅಲ್ಲಿನ
ಸಸ್ಯಗಳನ್ನು ತಿಂದರು. ನಂತರ ಅಲ್ಲಿನ ಪ್ರಾಣಿಗಳನ್ನು
ಮುಗಿಸಿದರು. ನಂತರ ತಮ್ಮಲ್ಲೊಬ್ಬರನ್ನು
ವಾರಕ್ಕೊಂದರಂತೆ ತಿಂದರು. ಕೊನೆಗುಳಿದವನು
ಒಬ್ಬನೇ ಒಬ್ಬ. ಅವನು ಮೊದಲು ತನ್ನ ಪಾದದ
ಬೆರಳುಗಳನ್ನು ತಿಂದ. ನಂತರ ಪಾದಗಳನ್ನು ತಿಂದ. ನಂತರ
ಕೈಬೆರಳುಗಳನ್ನು ತಿಂದ. ನಂತರ ಕೈಗಳನ್ನು ತಿಂದ.
ನಂತರ ಕಣ್ಣು ಕಿವಿಮೂಗುಗಳನ್ನು
ಒಂದೊಂದಾಗಿ ತಿಂದ. ಕೊನೆಗೆ ತನ್ನ ತಲೆಯನ್ನೇ
ತಿನ್ನತೊಡಗಿದ! ಅರೆ! ಇದು ಹೇಗೆ ಸಾಧ್ಯವೆಂದು
ಕೇಳಿದಿರಿ. ಇಂಥ ಪ್ರಶ್ನೆ ಮೊದಲೇ ಕೇಳಿರುತ್ತಿದ್ದರೆ
ಈಗ ಇಂಥ ಸ್ಥಿತಿ ಯಾರಿಗೂ ಬರುತ್ತಿರಲಿಲ್ಲ.

ಕೆ. ವಿ. ತಿರುಮಲೇಶ್
('ಅವಧ' ಕವನ ಸಂಕಲನದಿಂದ)

ಒಂದು ಚೀನಿ ತೈಲಚಿತ್ರ

'ಶೂದ್ರ' ಇರುವುದು ಸಮಕಾಲೀನ ಬದುಕಿನ ಸಂವಾದಕ್ಕಾಗಿ

ನಾವು ನೀವು ಮಾತಾಡುವ ಮತ್ತು ಚರ್ಚಿಸುವ ಧ್ವನಿಗಾಗಿ 'ಶೂದ್ರ'ವನ್ನು ಬಳಸಿಕೊಳ್ಳಿ. ಹಾಗೆಯೇ ನಮ್ಮ ನಿಮ್ಮ ನಡುವಿನ ಗುಮಾನಿಗಳು ತಿಳಿಯಾಗಲು ಉಪಯೋಗಿಸಿ. ಸಾಧ್ಯವಾದರೆ ಚಂದಾದಾರರಾಗಿ, ನಿಮ್ಮ ಗೆಳೆಯ ಗೆಳತಿಯರನ್ನು ಚಂದಾದಾರರಾಗಲು ತಿಳಿಸಿ.

ವಾರ್ಷಿಕ ಚಂದಾ	:	200 - 00 ರೂ
ಎರಡು ವರ್ಷಕ್ಕೆ	:	400-00 ರೂ
ನಾಲ್ಕು ವರ್ಷಕ್ಕೆ	:	750-00 ರೂ
ಹತ್ತು ವರ್ಷಕ್ಕೆ	:	1500-00 ರೂ
ಆಜೀವ ಚಂದಾ	:	2500-00 ರೂ

ಪ್ರಕಾಶಕರು ಮತ್ತು ಸಂಪಾದಕರು: ಎಂ.ಶ್ರೀನಿವಾಸ್ (ಶೂದ್ರ ಶ್ರೀನಿವಾಸ್)
ವಿಳಾಸ: ನಂ.573, 'ಕೋಟೆಮನೆ' 17ನೇ ಕ್ರಾಸ್,
ಇಸ್ರೋ ಬಡಾವಣೆ, ಬೆಂಗಳೂರು - 560 078
ದೂರವಾಣಿ: 6663337